ಉಪಾಧ್ಯಕ್ಷರು: ಇವತ್ತೇ ತೆಗೆದುಕೊಳ್ಳುವುದಾದರೆ, ಇವತ್ತೇ ತೆಗೆದುಕೊಳ್ಳೋಣ. ಬೇಡ ಎಂದು ಹೇಳಿದರೆ ಡಿಮ್ಯಾಂಡ್ಸ್ ಮೇಲೆ ಚರ್ಚೆ ಪ್ರಾರಂಭ ಮಾಡಿ. ನಂತರ ಬೇಕಾದರೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದ್ದರೆ ನೋಡೋಣ.

ಶ್ರೀ ಜಗದೀಶ್ ಶೆಟ್ಟರ್: ಒಂದು ಅರ್ಧ ಗಂಟೆಯೋ ಒಂದು ಗಂಟೆಯೋ ಡಿಮ್ಯಾಂಡ್ಸ್ ಮೇಲೆ ಚರ್ಚೆ ಪ್ರಾರಂಭವಾಗಲಿ. ಆಮೇಲೆ ನೀವು ಬಿಸಿಯೂಟದ ಬಗ್ಗೆ ಕೂಡ ಚರ್ಚೆಗೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು: ಇವತ್ತೇ?

ಶ್ರೀ ಜಗದೀಶ್ ಶೆಟ್ಟರ್: 5 ಗಂಟೆಗೆ ತೆಗೆದುಕೊಳ್ಳಿ.

ಉಪಾಧ್ಯಕ್ಷರು: ಇವತ್ತು ಕಾಂಗ್ರೆಸ್‌ನವರಿಗೆ ಸಾಯಂಕಾಲ ಆರುಕಾಲು ಗಂಟೆಗೆ ಪಾರ್ಟಿ ಮೀಟಿಂಗ್ ಇದೆ.

ಶ್ರೀ ಜಗದೀಶ್ ಶೆಟ್ಟರ್: ಹಾಗಾದರೆ ಡಿಮ್ಯಾಂಡ್ಸ್ ಮೇಲೆ ತೆಗೆದುಕೊಳ್ಳಿ; ನಾಳೆ ಬಿಸಿಯೂಟದ ಬಗ್ಗೆ ತೆಗೆದುಕೊಳ್ಳೋಣ.

ಉಪಾಧ್ಯಕ್ಷರು: ಬಿಸಿಯೂಟದ ಬಗ್ಗೆ ಚರ್ಚೆಯನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್: ಆಯಿತು.

ಉಪಾಧ್ಯಕ್ಷರು: ಡಿಮ್ಯಾಂಡ್ಸ್ ಮೇಲೆ ಒಂದಿಷ್ಟು ಮಾತನಾಡಲಿ.

ಶ್ರೀ ಎಸ್.ಸುರೇಶ್‌ಕುಮಾರ್: ಅದು ಬಿಸಿಯಾಗಿರಬೇಕು ಅಷ್ಟೆ.

ಉಪಾಧ್ಯಕ್ಷರು: ಇದು ಆರುವುದಿಲ್ಲ. ನೀವು ಮಾತನಾಡುವವರೆಗೂ ಬಿಸಿ ಆರುವುದಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್: ಓ.ಕೆ.

4) ವಿತ್ತೀಯ ಕಾರ್ಯಕಲಾಪಗಳು

2003-04ನೇ ಸಾಲಿನ ಇಲಾಖೆ ಬೇಡಿಕೆ ಮೇಲಿನ ಚರ್ಚೆ

†ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಈ ಸಾಲಿನ ಬೇಡಿಕೆಗಳ ಮೇಲೆ ಚರ್ಚೆಯನ್ನು ಆರಂಭಮಾಡುವುದಕ್ಕೆ ವಿರೋಧಪಕ್ಷದ ಕಡೆಯಿಂದ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ನಾನು ಮೊದಲನೆಯದಾಗಿ ಗ್ರಾಮೀಣಾಭಿವೃದ್ಧಿ ಕೃಷಿ ಮತ್ತು ತೋಟಗಾರಿಕೆ ಬೇಡಿಕೆಗಳ ಮೇಲೆ ಮಾತನಾಡಬೇಕೆಂದು ಹೇಳಿ ಚಿಂತನೆ ನಡೆಸಿದ್ದೇನೆ. ಇವತ್ತು ಸುಮಾರು ನೂರಕ್ಕೆ ಶೇಕಡ 66ರಷ್ಟು ಜನರು ಕರ್ನಾಟಕ ರಾಜ್ಯದ ಹಳ್ಳಿಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ಒಟ್ಟು 527 ಲಕ್ಷ ಜನಸಂಖ್ಯೆಯಲ್ಲಿ 348 ಲಕ್ಷ ಜನರು ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡುತ್ತಿದ್ದಾರೆ. ಸುಮಾರು 62 ಲಕ್ಷ ಕೃಷಿ ಕುಟುಂಬಗಳು ಇದ್ದಾವೆ. ಇತ್ತೀಚಿನ ಸರ್ವೆ ಪ್ರಕಾರ ನಗರ ಪ್ರದೇಶಗಳಿಗೆ ಗ್ರಾಮಾಂತರ ಪ್ರದೇಶಗಳಿಂದ ವಲಸೆ ಜಾಸ್ತಿಯಾಗಿದೆ ಎನ್ನುವಂಥಾದ್ದು ಒಂದು ಆತಂಕದ ಸಂಗತಿ. ನಮ್ಮ ಪಂಚಾಯತ್ ರಾಜ್ ವ್ಯವಸ್ಥೆಗಳು ಏನಾದರೂ ಸಶಕ್ತವಾದರೆ ಇದನ್ನು ನಿವಾರಣೆ ಮಾಡಲಿಕ್ಕೆ ಆಗುತ್ತದೆ. ಏಕೆ ಇಷ್ಟೊಂದು ವಲಸೆ ಬರುತ್ತಿದ್ದಾರೆಂದು ಹೇಳಿದರೆ ನಮ್ಮೆಲ್ಲರಿಗೂ ಕೂಡ ಗೊತ್ತಿದೆ. ಗ್ರಾಮೀಣ ಬದುಕು ಅಸಹನೀಯವಾಗಿದೆ. ಮೂಲಭೂತ ಸೌಕರ್ಯಗಳು ಇಲ್ಲ. ಸರಿಯಾದಂತಹ ಮಳೆಬೆಳೆಗಳು ಇಲ್ಲ. ಹಾಗಾಗಿ ಬದುಕು ಎಂದರೆ ದರಿದ್ರತನದ ಬದುಕು. ಗ್ರಾಮೀಣ ಬದುಕು ಎಂದು ಹೇಳಿದರೆ

ಏತಕ್ಕೂ ಕೂಡ ಪ್ರಯೋಜನ ಇಲ್ಲದೇ ಇರತಕ್ಕಂಥ ಬದುಕು. ಯಾವ ಸುಖ ಸೌಭಾಗ್ಯಗಳು ಇಲ್ಲದೇ ಇರುವಂತಹ ಒಂದು ಬದುಕು. ಹಾಗಾಗಿಯೇ ಬೇಸತ್ತು ಅನೇಕ ಯುವಕರುಗಳಂತೂ ನಗರಗಳಿಗೆ ವಲಸೆ ಬರುವುದನ್ನು ನೋಡುತ್ತೇವೆ. ಇಲ್ಲಿ ಒಂದು ಚಹಾ ಹೋಟೆಲ್‌ನಲ್ಲಿ ಕೆಲಸ ಸಿಕ್ಕರೂ ಸಾಕು. ಏನಾದರೂ ಮಾಡಿ ಪಟ್ಟಣದಲ್ಲಿ ಇರೋಣ, ಹಳ್ಳಿ ಜೀವನ ಬೇಡಪ್ಪ ಎಂದು ಜನ ಯೋಚನೆ ಮಾಡುತ್ತಿದ್ದಾರೆ. ಇದರ ಪರಿಣಾಮವಾಗಿ ಪಟ್ಟಣಗಳು ಬೃಹದಾಕಾರವಾಗಿ ಬೆಳೆದು ಇಲ್ಲಿ ಮೂಲಭೂತ ಸೌಕರ್ಯಗಳು ಸಿಗದೇನೇ ಪಟ್ಟಣದ ಬದುಕು ಕೂಡ ಅಸಹನೀಯವಾಗಿ ಇರತಕ್ಕಂಥಹ ಒಂದು ಪರಿಸ್ಥಿತಿ ಉಂಟಾಗಿದೆ. ಒಳ್ಳೆಯ ಗಾಳಿ ಸಿಗುವುದಿಲ್ಲ, ಒಳ್ಳೆಯ ನೀರು ಸಿಗುವುದಿಲ್ಲ, ಇಂತಹ ಒಂದು ಸ್ಥಿತಿಗೂ ಕೂಡ ನಾವು ಬಂದು ಮುಟ್ಟಿದ್ದೇವೆ. ಇದಕ್ಕೇ ಹೇಳಿದ್ದು, ಪಂಚಾಯತ್ ರಾಜ್ ವ್ಯವಸ್ಥೆ ಕಾಯಿದೆಯ ಅಡಿ 1983--84, 1993–04ನೇ ಇಸವಿಯಲ್ಲಿ ಸಂವಿಧಾನದ ತಿದ್ದುಪಡಿ, ಇವೆಲ್ಲಾ ಆಧಾರದ ಮೇಲೆ ತ್ರೀ ಟೈರ್ ಸಿಸ್ಟಂ ಆಯಿತು. ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಆಧಾರದ ಮೇಲೆ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ಗ್ರಾಮೀಣ ಬದುಕನ್ನು ಸಹನೀಯಗೊಳಿಸತಕ್ಕಂಥ ಮೂಲಭೂತ ಸೌಕರ್ಯಗಳನ್ನು ಸಧೃಢಗೊಳಿಸುವಂಥ ಒಂದು ಆಶೋತ್ತರವನ್ನು ಹೊತ್ತು ಬಜೆಟ್‌ನಲ್ಲಿ ಸಾಕಷ್ಟು ಅವಕಾಶವನ್ನು ಕಲ್ಪಿಸುತ್ತಾ ಈ ಒಂದು ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯನ್ನು ಸಾಧಿಸಬೇಕು ಎನ್ನುವಂತಹ ಕನಸು ಬಹಳ ವರ್ಷದ್ದು. ಸ್ವಾತಂತ್ರ್ಯ ಬಂದ ಲಾಗಾಯ್ತು ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆ ಆಗಬೇಕು. ಗ್ರಾಮೀಣ ಬಡತನಗಳು ಹೋಗಬೇಕು, ಅನಕ್ಷರತೆ ಹೋಗಬೇಕು. ಅಲ್ಲಿಯ ಮೂಲಭೂತ ಸೌಕರ್ಯಗಳು ಎಲ್ಲವೂ ಕೂಡ ಚೆನ್ನಾಗಿ ಆಗಬೇಕು. ಪಟ್ಟಣದಲ್ಲಿರತಕ್ಕಂತಹ ಜನಗಳಿಗೆ ಸಿಗತಕ್ಕಂಥ ಸೌಲಭ್ಯಗಳು ಎಲ್ಲವೂ ಕೂಡ ಗ್ರಾಮೀಣ ಪ್ರದೇಶದ ಜನರಿಗೆ ಸಿಗಬೇಕು. ಶಿಕ್ಷಣದಿಂದ ಹಿಡಿದು ಎಲ್ಲವೂ ಕೂಡ ಸಿಗಬೇಕು ಎನ್ನುವಂತಹದ್ದು ನಮ್ಮ ಹಿರಿಯರ ಕನಸು. ಅದಕ್ಕಾಗಿ ಅನೇಕ ಹೋರಾಟಗಳು ಕೂಡ ನಡೆಯಿತು. ಇತ್ತೀಚಿನ ದಿನಗಳಲ್ಲಿ ನಮ್ಮ ಪಂಚಾಯಿತಿ ವ್ಯವಸ್ಥೆ ಇದ್ದರೂ ಕೂಡ ಗ್ರಾಮ ಪಂಚಾಯಿತಿಯಲ್ಲಿ ಕುಳಿತು ಮೀಟಿಂಗ್ ಮಾಡಲಿಕ್ಕೆ, ಚಹಾ ಕುಡಿಯಲಿಕ್ಕೆ ಕೂಡ ಒದು ಕಾಸು ಇಲ್ಲದೇ ಇರುವಂತಹ ಪರಿಸ್ಥಿತಿಯಲ್ಲಿ ನಮ್ಮ ಪಂಚಾಯಿತಿಗಳು ನಡೆಯುತ್ತಿತ್ತು. ಆದರೆ ಸುಮಾರು 1983–84ನೇ ಇಸವಿಯ ನಂತರ ವಿಶೇಷವಾಗಿ ನಾವು ಇವತ್ತು ಅಬ್ದುಲ್ ನಜೀರ್ ಸಾಬ್ ಅವರನ್ನು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಅನೇಕ ಅವರ ಚಿಂತನೆಗಳನ್ನು ಅನುಷ್ಠಾನಕ್ಕೆ ತರುವಂತಹ ಪ್ರಯತ್ನವನ್ನು ಆ ದಿನಗಳಲ್ಲಿ ಮಾಡಿದರು. ಹಾಗೆಯೇ 1993ರ ನಂತರ ಇನ್ನಷ್ಟು ಶಕ್ತಿ ಸಿಗುವ ಹಾಗೆ ಆಯಿತು. ಕೇವಲ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಎರಡು ಇರತಕ್ಕಂಥ ವ್ಯವಸ್ಥೆಯಲ್ಲಿ ಇವತ್ತು ತಾಲ್ಲೂಕು ಪಂಚಾಯಿತಿ ಎನ್ನುವಂತಹ ನಡುವಂತರದ ವ್ಯವಸ್ಥೆ ಕೂಡ ಬಂತು. ಅದರ ಬಗ್ಗೆ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ತಾಲ್ಲೂಕು ಪಂಚಾಯಿತಿಗಳಿಗೆ ಇವತ್ತು ಯಾವುದೇ ಅಧಿಕಾರ ಇಲ್ಲ, ಒಂದು ತರಹ ಅತಂತ್ರದ ಸ್ಥಿತಿ. ಅದಕ್ಕೆ ಸರಿಯಾದಂತಹ ಅಧಿಕಾರವೂ ಇಲ್ಲ, ಸಾಕಷ್ಟು ಹಣಕಾಸು ಇಲ್ಲ, ಅದರದ್ದೇ ಆದಂತಹ ಸಿಬ್ಬಂದಿಯೂ ಇಲ್ಲ. ಒಂದು ತರಹ ಜಿಲ್ಲಾ ಪಂಚಾಯಿತಿಯಿಂದ ತಾಲ್ಲೂಕು ಪಂಚಾಯಿತಿಗೆ ಕಳುಹಿಸುತ್ತಾರೆ. ಮಧ್ಯದಲ್ಲಿ ಒಂದು ತರಹ ಪೋಸ್ಟ್‌ಮ್ಯಾನ್ ರೀತಿಯ ಕೆಲಸವನ್ನು ಅದು ಇವತ್ತು ನಿರ್ವಹಿಸುತ್ತಿದೆ. ಅದು ಅಗತ್ಯ ಸುತ್ತೋಲೆ ಅಥವಾ ಇಲ್ಲವೋ, ನಾವು ಅದನ್ನು ಕಲ್ಪಿಸುವುದಾದರೆ ಅದಕ್ಕೆ ಸರಿಯಾದಂತಹ ವ್ಯವಸ್ಥೆಯನ್ನು

ಮಾಡಬೇಕಾಗಿತ್ತು. ಅದನ್ನು ಮಾಡದೇ ಮಧ್ಯದಲ್ಲಿ ಅದರ ಒಂದು ಸಭೆ, ಅದರ ಒಂದಿಷ್ಟು ಸದಸ್ಯರು, ಇದೊಂದು ರೀತಿಯ ಗೊಂದಲದ ವಾತಾವರಣ ಇದ್ದಾಗ್ಯೂ ಕೂಡ ಒಂದಷ್ಟು ಕೆಲಸಗಳು ಆಗಬೇಕು ಎನ್ನುವಂತಹ ಚಿಂತನೆ ನಮ್ಮದು ಇದೆ. ಇದಕ್ಕೆ ಸಾಕಷ್ಟು ಹಣಕಾಸನ್ನು ಕೂಡ ಕೊಟ್ಟಿದ್ದೇವೆ. ಇವತ್ತು ಈ ಬೇಡಿಕೆಯನ್ನು ಮಂಡನೆ ಮಾಡಿದ್ದಾರೆ. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಇವತ್ತು ಯಾರೂ ಇಲ್ಲ ಎಂದು ಕಾಣಿಸುತ್ತದೆ. ಗ್ರಾಮೀಣಾಭಿವೃದ್ಧಿ ಇಬ್ಬರೂ ಸಚಿವರೂ ಕೂಡ ಇಲ್ಲ. ದಯಮಾಡಿ ಅವರನ್ನು ಕರೆಸುವುದು ಒಳ್ಳೆಯದು ಎಂದು ಕಾಣುತ್ತದೆ.

ಉಪಾಧ್ಯಕ್ಷರು: ಬರುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ: ನಾನು ವಿರೋಧ ಪಕ್ಷದ ಪರವಾಗಿ ಬೇಡಿಕೆಯ ಮೇಲೆ ಚರ್ಚೆಯನ್ನು ಆರಂಭ ಮಾಡುತ್ತಿದ್ದೇನೆ. ಹಾಗಾಗಿ ಅವರು ಯಾರೂ ಇಲ್ಲದೇ ಇದ್ದರೆ, ಇದಕ್ಕೆ ಸರಿಯಾದ ಉತ್ತರಗಳು ಬರದೇ ಇದ್ದರೆ, ಸರ್ಕಾರದ ಪರವಾಗಿ ಯಾರೂ ಕೇಳದೇ ಇರುವಂತಹವರು ಇದ್ದರೆ, ಕೇಳುವುದೇ ಇಲ್ಲ ಎಂದಾದರೆ ನಾನು ಮಾತನಾಡಿ ಗಾಳಿಗೆ ಗುದ್ದಿದ ಹಾಗೆ ಆಗುತ್ತದೆ. ಇದು ಪ್ರಯೋಜನ ಆಗುತ್ತದೆ ಎಂದು ಆದರೆ, ನಾನು ಮಾತು ಮುಂದುವರಿಸುತ್ತೇನೆ. ನನಗೆ ಅನ್ನಿಸುತ್ತದೆ ಎದುರುಗಡೆ ನೋಡಿದಾಗ ಪಾಪ ಮಾನ್ಯ ಖರ್ಗೆಯವರು ಇದ್ದಾರೆ. ಅವರು ಯಾವಾಗಲೂ ಇರುತ್ತಾರೆ. ಅವರು ಹಿಂದಿನ ಸಾರಿ ಇಲ್ಲಿ ಇದ್ದರು, ಹಾಗೆಯೇ ಕುಳಿತುಕೊಳ್ಳುತ್ತಿದ್ದರು. ನಾನು ಹೇಳುವುದು, ಒಬ್ಬೊಬ್ಬರು ಸಚಿವರು ಇದ್ದಾಗಲಂತೂ ಇರುತ್ತಿದ್ದರು. ಈಗ ಇಬ್ಬರು ಸಚಿವರಾದರೂ ನಮ್ಮ ಹಣೆ ಬರಹಕ್ಕೆ, ನಾವು ಇಲ್ಲಿ ಮಾತನಾಡುವಾಗ ಕೇಳುವುದು, ದಿಕ್ಕಿಲ್ಲ ಎಂದಾದರೆ ನೀವು ಹೇಳುತ್ತೀರಿ ಒಂದೊಂದು ಸಾರಿ, ಆ ಮನೆಯಲ್ಲಿ ಇದ್ದಾರೆ, ಈ ಮನೆಯಲ್ಲಿ ಇದ್ದಾರೆ ಎಂದು ಹೇಳುತ್ತೀರಿ. ಅವರು ಯಾವ ಮನೆಯಲ್ಲಿದ್ದಾರೆಂದು ಹುಡುಕಿ ಕೊಡಿ. ಅವರು ಅವರದ್ದೇ ಮನೆಯಲ್ಲಿ ಇದ್ದರೂ ಅಡ್ಡಿ ಇಲ್ಲ. ಈಗ ಎಲ್ಲೆಲ್ಲಿ ಇದ್ದಾರೆಂಬ ಪ್ರಶ್ನೆ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಆರಗ ಜ್ಞಾನೇಂದ್ರ ಅವರೇ, ಮಾನ್ಯ ನಫೀಸಾ ಫಜಲ್ ಅವರು ಬಂದರು ನೀವು ಮಾತನಾಡಿ. ಅವರಿಗೆ ಕನ್ನಡ ಅರ್ಥ ಆಗುತ್ತದೆ. ಅವರು ನಿಮಗೆ ಸರಿಯಾಗಿ ಉತ್ತರ ಕೊಡುತ್ತಾರೆ. ಮೇಲ್ಮನೆಗೆ ನಾನೂ ಕೂಡ ಹೋಗಬೇಕು. ನಮ್ಮ ಮಾನ್ಯ ನಾಣಯ್ಯನವರ ಪ್ರಶ್ನೆಗೆ ಉತ್ತರ ಕೊಡುವುದು ಇದೆ. ಅವರು ಇದ್ದಾರೆ, ಮಾನ್ಯ ಮಾಲಕರೆಡ್ಡಿಯವರು ಇದ್ದಾರೆ, ಎಲ್ಲರೂ ಇದ್ದಾರಲ್ಲಾ ನೀವೇಕೆ ಹೀಗೆ ಹೇಳುತ್ತೀರಿ? ಮಾನ್ಯ ಮಲ್ಲಿಕಾರ್ಜುನ್ ಅವರು ಇದ್ದಾರೆ. ಡಾ: ಪರಮೇಶ್ವರ್ ಬಂದರು. ಆಮೇಲೆ ಸಂಖ್ಯಾ ಬಲ ಇರಲಿ ಎಂದು ಮಾನ್ಯ ಸುರೇಶ್ ಕುಮಾರ್ ಅವರು ನಾನು ಈ ಕಡೆ ಬಂದಿದ್ದೇನೆ ಎಂದು ಹೇಳುತ್ತಿದ್ದಾರೆ. ಪರ್ಮನೆಂಟ್‌ಲಿ ಬರುವ ಹಾಗಿದ್ದರೆ ಕನ್ಸಿಡರ್ ಮಾಡೋಣ.

ಶ್ರೀ ಶಿವಾನಂದ ಪಾಟೀಲ್: ಮಾನ್ಯ ಖರ್ಗೆ ಸಾಹೇಬರೆ, ನೀವು ಉತ್ತರ ಕೊಟ್ಟಿದ್ದು ನೋಡಿದರೆ, ನನ್ನದೊಂದು ಇಲ್ಲಿ ಸ್ಟಾರ್ಡ್ ಕ್ವೆಶ್ಚನ್ ಇದೆ, ಎಷ್ಟು ಮಜಾ ಇದೆ ನೋಡಿ.

ಶ್ರೀ ಬಿ. ಸೋಮಶೇಖರ್: ಕಾಂಗ್ರೆಸ್‌ನವರಿಗೆ ಬಹಳ ಅವಶ್ಯಕತೆ ಇದೆ ಎಂದು ಕಾಣುತ್ತದೆ. ಬೇರೆಯವರೆಲ್ಲಾ ಅವರ ಕಡೆ ಸೇರಿಸಿಕೊಳ್ಳುವ ಅವಶ್ಯಕತೆ ಬಹಳ ಇದೆ. ಅವರ ಅಬಲತೆ ತೋರಿಸುತ್ತಿದೆ ಏನೋ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಏಕೆಂದರೆ ಈ ಕಡೆ ಬಂದು ಹೀಗೆಯೇ ಕೂಡುವ ಬದಲು ಪರ್ಮನೆಂಟಲಿ ಕೂಡಿ ಎಂದು ಹೇಳಿದೆ.

ಶ್ರೀ ಎಸ್.ಎಸ್. ಪಾಟೀಲ್: ಜನತಾ ದಳದವರು ಒಂದಾಗಲು ಹೋಗುತ್ತಿರುವುದು ಅವರಿಗೆ ಗೊತ್ತಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಎಷ್ಟೇ ಮಾಡಿರಿ ನೀವೇನೂ ಎಚ್ಚರ ಆಗುವುದಿಲ್ಲ. ಇವರೇನೂ ಏಳುವುದಿಲ್ಲ, ನಾವೇನೂ ಬೀಳುವುದಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಸೋಮಶೇಖರ್ ಅವರಿಗೆ ಸ್ವಲ್ಪ ಡೌಟ್ ಆಯಿತು. ಮಾನ್ಯ ಬಚ್ಚೇಗೌಡರು ಈಗ ತಮ್ಮ ಹಿಂದೆ ಕುಳಿತು ಬಿಟ್ಟಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್: ನೀವು ಬೀಳುವುದಿಲ್ಲ ಎಂಬ ಧೈರ್ಯ ಇದ್ದರೆ, ಪರ್ಮನೆಂಟ್ ಆಗಿ ಬಂದರೆ ಅಡ್ಡಿ ಇಲ್ಲ ಎಂದು ಏಕೆ ಹೇಳುತ್ತಿದ್ದಿರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬರುವವರು ಬರಲಿ ಎಂದು ಹೇಳಿದೆ.

ಶ್ರೀ ಶಿವಾನಂದ ಎಸ್ ಪಾಟೀಲ್: ಇಲ್ಲಿ ನೋಡಿ ಸಾರ್. ಒಂದು ಉತ್ತರ ಕೊಟ್ಟಿರುವುದನ್ನೂ ಆಗಲೇ ಹೇಳುವವನು ಇದ್ದೆ. ರಾಜ್ಯದಲ್ಲಿ ಆಡಳಿತ ಕನ್ನಡ ಭಾಷೆಯನ್ನು ನಿರ್ಲಕ್ಷಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾ ಎಂಬ ಪ್ರಶ್ನೆಗೆ, ಬಂದಿಲ್ಲ ಎಂದು ಹೇಳಿದ್ದಾರೆ. ಆದರೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ ಬಳಸದ ಎಷ್ಟು ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಂಡಿದೆಯೆಂದು ಕೇಳಿದೆ.

ಉಪಾಧ್ಯಕ್ಷರು: ಆ ವಿಷಯ ಇಲ್ಲಿ ಏಕೆ ಪ್ರಸ್ತಾಪ ಮಾಡುತ್ತೀರಿ?

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಖರ್ಗೆಯವರು, ಮಾನ್ಯ ಸಚಿವರಾದ ನಫೀಸಾ ಫಜಲ್ ಅವರು ಕನ್ನಡವನ್ನು ಬಹಳ ಚೆಂದಾಗಿ ಮಾತನಾಡುತ್ತಾರೆ ಎಂದು ಹೇಳಿದರು.

ಉಪಾಧ್ಯಕ್ಷರು: ಅವರು ಇವತ್ತು ಉತ್ತರ ಕೊಟ್ಟರು.

ಶ್ರೀ ಶಿವಾನಂದ ಎಸ್. ಪಾಟೀಲ್: ಅದಕ್ಕೇ ನಾನು ಹೇಳುತ್ತಿದ್ದೇನೆ.

ಶ್ರೀಮತಿ ನಫೀಸಾ ಫಜಲ್: ಮಾನ್ಯ ಉಪಾಧ್ಯಕ್ಷರೆ, ನನ್ನ ಬಗ್ಗೆ ಏಕೆ ಈಗ ಚರ್ಚೆ ಮಾಡಬೇಕು?

ಉಪಾಧ್ಯಕ್ಷರು: ಮೇಡಮ್ ಅವರೇ, ಅವರಿಗೆ ಕನ್ನಡದಲ್ಲಿ ಉತ್ತರ ಕೊಡಿ.

ಶ್ರೀಮತಿ ನಫೀಸ ಫಜಲ್: ಕನ್ನಡದಲ್ಲಿ ನಾನು ಬೆಳಿಗ್ಗೆ ಮೂರು ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದೇನೆ. ನಾನೇನು ತಪ್ಪು ಮಾಡುವುದಕ್ಕೆ ಹೋಗುವುದಿಲ್ಲ. ಸುಮ್ಮನೆ ನಫೀಸಾ ಫಜಲ್ ಎಂದು ಊಟ ಮಾಡುವಾಗ ಒಂದು ತರಹ ಉಪ್ಪಿನ ಕಾಯಿ ಇಡಬೇಕಲ್ಲಾ ಆ ತರಹ ನಮ್ಮ ಹೆಸರು ಹಿಡಿಯುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ: ಏನೇ ಮೃಷ್ಟಾನ್ನ ಇದ್ದರೂ ಕೂಡ ಉಪ್ಪಿನಕಾಯಿ ರುಚಿ ಎಲ್ಲದಕ್ಕೂ ಬರುವುದಿಲ್ಲ ಮೇಡಮ್. 2003–04ನ ಸಾಲಿಗೆ 1513.80 ಕೋಟಿ ರೂಪಾಯಿಗಳನ್ನು ಈ ಇಲಾಖೆಗೆ ಹಂಚಿಕೆ ಮಾಡಿದ್ದಾರೆ. ಬೇಡಿಕೆಯನ್ನೂ ಕೂಡ ಇಟ್ಟಿದ್ದಾರೆ. ಇದಕ್ಕೆ ಒಪ್ಪಿಗೆ ಕೊಡಿ ಎಂದು ಕೇಳಿದ್ದಾರೆ. ಈ ಬೇಡಿಕೆಗೆ ಒಪ್ಪಿಗೆ ಕೊಡುವ ಮೊದಲು ಈ ಒಂದು ಬೇಡಿಕೆಗೆ ಹಿಂದೆ ಕೊಟ್ಟಂತಹ ಹಣ ಯಾವ ರೀತಿ ಹಂಚಿಕೆ ಆಗಿದೆ, ಯಾವ ರೀತಿ ಇಲಾಖೆ ನಡೆದಿದೆ, ಗ್ರಾಮೀಣ

ಪ್ರದೇಶದ ಎಲ್ಲ ಜನರ ಆಶೋತ್ತರಗಳು, ಬಡತನ ನಿರ್ಮೂಲನೆ, ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸತಕ್ಕಂಥದ್ದು. ಶಿಕ್ಷಣ, ಉದ್ಯೋಗ, ಕೃಷಿ ಇವೆಲ್ಲದರಲ್ಲಿ ಏನು ಎತ್ತರಕ್ಕೆ ನಮ್ಮ ರಾಜ್ಯವನ್ನು ತೆಗೆದುಕೊಂಡು ಹೋಗುವಂತಹ ವ್ಯವಸ್ಥೆಗೋಸ್ಕರ ಹಣವನ್ನು ಕೊಟ್ಟಿದ್ದೆವು, ಈ ಹಣ ಯಾವ ರೀತಿಯಾಗಿ ಉಪಯೋಗ ಆಗಿದೆ ಎನ್ನುವಂತಹದನ್ನು ಕೂಡ ನಾವು ನೋಡಬೇಕಾಗಿದೆ. ಈ ಸರ್ಕಾರ ಕಳೆದ ನಾಲ್ಕೈದು ವರ್ಷದಲ್ಲಿ ಏನೆಲ್ಲಾ ಮಾಡಿದೆ ಯಾವ ರೀತಿಯಾಗಿ ಈ ಒಂದು ಗ್ರಾಮೀಣ ಬದುಕನ್ನು ಹಸನುಗೊಳಿಸಲಿಕ್ಕೆ ತನ್ನ ಒಂದು ಪ್ರಯತ್ನವನ್ನು ಮಾಡಿದೆ ಎನ್ನುವುದನ್ನು ಕೂಡ ನಾವು ಇವತ್ತು ನೋಡಬೇಕಾಗುತ್ತದೆ. ಹೀಗೆ ನೋಡುತ್ತಾ ಹೋದರೆ, ಗ್ರಾಮೀಣ ಅಭಿವೃದ್ಧಿಯಂತಹ ಒಂದು ಪ್ರಧಾನವಾದಂತಹ ಖಾತೆ ಇದು. ಬಹಳ ಒಳ್ಳೆಯ ಇಲಾಖೆ. ಇಂತಹ ಇಲಾಖೆಯನ್ನು ನಿರ್ವಹಿಸತಕ್ಕಂಥ ರೀತಿಯನ್ನು ನೋಡಿದರೆ ಬಹುಶಃ ಒಂದು ಶ್ವೇತಪತ್ರವನ್ನು ಈ ಸರ್ಕಾರ ಹೊರಡಿಸಬೇಕು. ಗ್ರಾಮೀಣಾಭಿವೃದ್ಧಿಯನ್ನು ಕಳೆದ ನಾಲ್ಕು ವರ್ಷದಲ್ಲಿ ಯಾವ ರೀತಿಯಾಗಿ ಮಾಡಿದ್ದೇವೆ? ಎಷ್ಟು ಹಣ ಕೇಂದ್ರದಿಂದ ಬಂದಿದೆ ಅದರ ಬಳಕೆ ಯಾವ ರೀತಿ ಆಗಿದೆ? ರಾಜ್ಯದಲ್ಲಿ ಎಷ್ಟು ಹಣವನ್ನು ತೆಗೆದು ಇಟ್ಟಿದ್ದೇವೆ? ಯಾವ ರೀತಿ ಬಳಕೆ ಆಗಿದೆ? ಅದರಲ್ಲಿ ಯಾರ್‍ಯಾರು ಎಷ್ಟೆಷ್ಟು ಗಂಟು ಹೊಡೆದಿದ್ದಾರೆ? ಅವ್ಯವಹಾರಗಳು ಎಷ್ಟು ಆಗಿದ್ದಾವೆ? ಸಿಎಜಿ ವರದಿಯಲ್ಲಿ ಏನು ಹೇಳಿದ್ದಾರೆ? ಇವೆಲ್ಲವನ್ನೂ ತೆಗೆದಿಟ್ಟು ಒಂದು ಶ್ವೇತ ಪತ್ರವನ್ನು ಹೊರಡಿಸಬೇಕು. ಶ್ವೇತ ಪತ್ರವನ್ನು ಹೊರಡಿಸಿದರೆ ಬಹುಶಃ ಆ ನಾಳೆ ಬೆಳಿಗ್ಗೆ ಶ್ವೇತಪತ್ರ ಬಂದ ಮಾರನೆಯ ದಿವಸ ಈ ರಾಜ್ಯದ ಜನತೆ ಹೇಳಿಯಾರು, ತತ್‌ಕ್ಷಣವೇ ಈ ಪಂಚಾಯತ್ ರಾಜ್ ವ್ಯವಸ್ಥೆಯ ಸಂಸ್ಥೆಗಳಿಗೆ ಬೀಗ ಹಾಕಿ. ಇದು ನಮಗೆ ಬೇಡ. ನಮ್ಮ ಈ ಸಾರ್ವಜನಿಕ ಹಣ, ನಮ್ಮ ತೆರಿಗೆಯ ಹಣ ಈ ರೀತಿ ದುರುಪಯೋಗ ಆಗುವುದನ್ನು ತಪ್ಪಿಸಿ, ಎಂದು ಹೇಳುತ್ತಾರೆ. ಈ ರೀತಿ ದುರುಪಯೋಗವಾಗುವುದನ್ನು ತಪ್ಪಿಸಬೇಕು ಮತ್ತು ಇಂತಹ ಸಂಸ್ಥೆಗಳು ನಮಗೆ ಅಗತ್ಯವಿಲ್ಲವೆನ್ನುವ ಮಾತನ್ನು ಹೇಳುತ್ತಾರೆ. ಇಂತಹ ದುರದೃಷ್ಟಕರ ಸನ್ನಿವೇಶ ಈ ರಾಜ್ಯದಲ್ಲಿ ಉಂಟಾಗಿದೆ. ಈ ತರಹ ಅನೇಕ ಉದಾಹರಣೆಗಳಿವೆ. ಸಾವಿರಾರು ಕೋಟಿ ರೂಪಾಯಿಗಳನ್ನು ಇದಕ್ಕೆ ಖರ್ಚು ಮಾಡಿದಾಗ್ಯೂ ಕೂಡ ಈ ಹಣ ಸಮರ್ಪಕವಾಗಿ ಬಳಕೆಯಾಗಲಿಲ್ಲ. ಈ ನಿಟ್ಟಿನಲ್ಲಿ ಈ ಸರ್ಕಾರ ವಿಫಲವಾಗಿದೆ. ಮಾನ್ಯ ಉಪಾಧ್ಯಕ್ಷರೆ, ನಮ್ಮ ದುರಾದೃಷ್ಟ ಹೇಗಿದೆಯೆಂದರೆ, ಯಾವುದನ್ನು ಹಣಕಾಸು ಇಲಾಖೆ ನಿಯಂತ್ರಿಸಬೇಕಾಗಿತ್ತೋ, ಇವೊತ್ತು ಹಣಕಾಸು ಯಾವ ರೀತಿ ಬಿಡುಗಡೆಯಾಗಬೇಕಾಗಿತ್ತೋ, ಆ ರೀತಿ ಬಿಡುಗಡೆ ಮಾಡದೆ, ಅದೂ ಕೂಡ ಇದರ ಆಳ-ಅಗಲಗಳನ್ನು ಅಳತೆ ಮಾಡದೆ ಇವೊತ್ತು ಸೋತಿದೆ. ಇದರ ಪರಿಣಾಮ ಕೇಂದ್ರದಿಂದ ನಮಗೆ ಬರಬೇಕಾಗಿದ್ದ ನೂರಾರು ಕೋಟಿ ರೂಪಾಯಿಗಳಷ್ಟು ಹಣವನ್ನು ಇವೊತ್ತು ನಾವು ಕಳೆದುಕೊಂಡಿದ್ದೇವೆ. ಇದರ ಪರಿಣಾಮ ಗ್ರಾಮೀಣಾಭಿವೃದ್ಧಿ ಸಂಸ್ಥೆಗಳ ಮೇಲಾಗಿದೆ. ಹಣ ಬಂದದ್ದು, ಕೊಟ್ಟಿದ್ದು ಕೂಡ ಸಮರ್ಪಕವಾಗಿ ಸಮಯಕ್ಕೆ ಸರಿಯಾಗಿ ಬಿಡುಗಡೆ ಮಾಡುವುದರಲ್ಲಿ ವಿಫಲವಾಗಿದೆ. ಹಣಕಾಸ ಸಂಸ್ಥೆಗಳಿಂದ ಕಾರ್ಯದರ್ಶಿಯವರಿಗೆ ಹೋಗಬೇಕು. ಅಲ್ಲಿಂದ ಜಿಲ್ಲಾ ಪಂಚಾಯತ್‌ಗೆ ಹೋಗಬೇಕು. ಅಲ್ಲಿಂದ ತಾಲ್ಲೂಕು ಪಂಚಾಯಿತಿಗೆ ಅಲ್ಲಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ, ಅವರಿಂದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಹೋಗಬೇಕು. ಈ ರೀತಿಯಾಗಿ ಎಲ್ಲಾ ಹಂತಗಳನ್ನೂ ದಾಟಿ ಹೋಗಬೇಕಾಗಿರುತ್ತದೆ. ಇನ್ನು ಟೆಂಡರ್ ಕರೆಯುವುದು, ಅದನ್ನು ಅಪ್ರೂವ್ ಮಾಡುವುದು, ಅದು ಅಪ್ರೂವ್ ಆಗಬೇಕಾಗಿದ್ದರೆ, ಬೆಂಗಳೂರಿಗೋ, ಇನ್ನೆಲ್ಲಿಗೋ

ಬರಬೇಕು. ಈ ರೀತಿಯಾಗಿ ಕಾಲಹರಣ ಮಾಡುತ್ತಾ ಇವೊತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರಲ್ಲಿ ವಿಫಲವಾಗಿದೆ. ಸರ್ಕಾರದಿಂದ ಜಿಲ್ಲಾ ಪಂಚಾಯತ್‌ಗೆ ಜಿಲ್ಲಾ ಪಂಚಾಯತ್‌ನಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಎರಡೆರಡು ವರ್ಷಗಳ ಕಾಲ ಒಂದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದರಲ್ಲಿ, ಹಣ ಬಿಡುಗಡೆಯಾಗುವುದರಲ್ಲಿ ವಿಳಂಬವಾಗಿದೆ. ಇರುವಂಥ ಹಣ ಅಲ್ಲಿಗೆ ಹೋಗಿ ತಲುಪುವುದಕ್ಕೆ ಎರಡು ವರ್ಷಗಳಾಗಿದೆ! ಇದರ ಪರಿಣಾಮವನ್ನು ನಾವು ಇವೊತ್ತು ಅನುಭವಿಸುತ್ತಿದ್ದೇವೆ. ಜಿಲ್ಲಾ ಪಂಚಾಯತ್‌ನಿಂದ ಗ್ರಾಮ, ತಾಲ್ಲೂಕು ಪಂಚಾಯಿತಿಗಳಿಗೆ ಬಿಡುಗಡೆಯಾಗದಿರುವ ಹಣದ ಕುರಿತು ಸಿಎಜಿಯವರು 15 ಜಿಲ್ಲಾ ಪಂಚಾಯತ್‌ಗಳನ್ನು ರಿವ್ಯೂ ಮಾಡಿರುವ ಬಗ್ಗೆ ವರದಿಯಲ್ಲಿ ಪ್ರಸ್ತಾಪಿಸಿದ್ದಾರೆ. 2.92 ಕೋಟಿ ರೂಪಾಯಿಗಳಷ್ಟು ಹಣ ಉಳಿದಿದೆ. ಇದು ಪಂಚಾಯಿತಿಗಳಿಗೆ ಹೋಗುವ ಹಣ. ಸಣ್ಣ-ಪುಟ್ಟ ಪಂಚಾಯಿತಿಗಳೇನಿವೆ, ಮೊನ್ನೆ ದಿವಸ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಘೋರ್ಪಡೆ ಸಾಹೇಬರು ಮಾತನಾಡುತ್ತಾ, ಪಂಚಾಯಿತಿಗಳಿವೆ ಎಷ್ಟು ಲಕ್ಷ ರೂಪಾಯಿಗಳು ಬರುತ್ತದೆಂದು ಸಂತೋಷದಿಂದ ಹೇಳುತ್ತಿದ್ದರು. ಆ ಹಣ ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ವ್ಯಯವಾಗದೆ ಹೋದರೆ, ಆ ಹಣ ಸಕಾಲಕ್ಕೆ ಅಲ್ಲಿಗೆ ಹೋಗಿ ತಲುಪದೆ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಇನ್ನು ಆ ಹಣವನ್ನು ಕೊಡುವಂಥ ಸಂದರ್ಭದಲ್ಲಿ ಲೆಕ್ಕ ಇಡುವಂಥಾದ್ದು, ಜಿಲ್ಲಾ ಪಂಚಾಯತ್‌ನಲ್ಲಿ ಅಕೌಂಟ್ಸ್ ವಿಭಾಗ ಇದೆ. ಅವರು ಏನು ಮಾಡುತ್ತಾರೆಂಬುದು ಗೊತ್ತಿಲ್ಲ. ಮುಖ್ಯ ಲೆಕ್ಕಾಧಿಕಾರಿ ಅಲ್ಲಿರುವ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಪ್ರತಿ ತಿಂಗಳು ಎಷ್ಟು ಖರ್ಚಾಯಿತು? ಯಾವ್ಯಾವ ಹೆಡ್‌ನಲ್ಲಿ ಎಷ್ಟೆಷ್ಟು ಹಣ ಉಳಿದಿದೆ ಎನ್ನುವ ವರದಿ ಕೊಡಬೇಕಾಗುತ್ತದೆ. ಆ ರೀತಿಯ ವರದಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳಲ್ಲಿ ಸಮರ್ಪಕವಾಗಿ ಇಲ್ಲ, ಹಾಗಾಗಿ, ಅಲ್ಲಿರುವ ಜಿಲ್ಲಾ ಪಂಚಾಯತಿ ಸದಸ್ಯರಿಗೆ ಅಲ್ಲಿ ಏನು ನಡೆಯುತ್ತದೆಂದು ಗೊತ್ತಿಲ್ಲ. ದುರ್ದೈವದ ಸಂಗತಿ ಎಂದರೆ, ಅಲ್ಲಿರುವ ಐಎಎಸ್ ಅಧಿಕಾರಿಗಳನ್ನು, ನೀವು ಜಿಲ್ಲಾ ಪಂಚಾಯತ್‌ಗೆ ಯಾರನ್ನು ಸಿಇಓ ಆಗಿ ನೇಮಿಸಿದ್ದೀರೋ, ಅವರಿಗೂ ಕೂಡ ಗೊತ್ತಿಲ್ಲ, ಸುಮ್ಮನೆ ಮನ ಬಂದಂತೆ ಕೆಲಸ ಮಾಡುತ್ತಿರುವುದನ್ನು ನಾವು ನೋಡುತ್ತೇವೆ. ಖಜಾನೆ ಜೊತೆ ಮರು ಹೊಂದಾಣಿಕೆ ಇಲ್ಲ. ಇದರಿಂದಾಗಿ ವೆಚ್ಚದ ಮೇಲೆ ನಿಯಂತ್ರಣವಿಲ್ಲ ಪರಿಣಾಮ ಯದ್ವಾತದ್ವಾ ಖರ್ಚಾಗುತ್ತದೆ ಅಥವಾ ಹಣ ಉಳಿಯುವುದಿಲ್ಲ. ಒಂದು ನಾರ್ಮಲ್ ಸ್ಥಿತಿಯಲ್ಲಿ ಇವೊತ್ತು ವ್ಯವಸ್ಥೆ ಹೋಗುತ್ತಿಲ್ಲ. ಸಿಎಜಿಯವರು ಮೂರ್ನಾಲ್ಕು ಜಿಲ್ಲಾ ಪಂಚಾಯತ್‌ಗಳನ್ನು ರಿವ್ಯೂ ಮಾಡಿರುವುದನ್ನು ನಾನು ಓದಿದ್ದೇನೆ. 2000ನೇ ಇಸವಿಯಲ್ಲಿ ದಾವಣಗೆರೆ ಜಿಲ್ಲಾ ಪಂಚಾಯತ್‌ನಲ್ಲಿ ಕೆಲವು ಬಾಬ್ತುಗಳಲ್ಲಿ ಶೇಕಡ 738ಕ್ಕಿಂತಲೂ ಹೆಚ್ಚು ಹಣ ಖರ್ಚಾಗಿದೆ. ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನಲ್ಲಿ ಶೇಕಡ 555ಕ್ಕಿಂತಲೂ ಜಾಸ್ತಿ ಖರ್ಚಾಗಿದೆ. ಅದೇ ರೀತಿ ಬಿಜಾಪುರದಲ್ಲಿ ಶೇಕಡ 161ಕ್ಕಿಂತಲೂ ಹೆಚ್ಚು ಖರ್ಚಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಆರಗ ಜ್ಞಾನೇಂದ್ರರವರೆ, ತಮಗೆ ಗೊತ್ತಿರುವಂತೆ ಅನೇಕ ಸಲ ಏನಾಗುತ್ತದೆಂದರೆ, ಬಜೆಟ್‌ನಲ್ಲಿ ಕಡಿಮೆ ಹಣ ಪ್ರಾವಿಜನ್ ಮಾಡಿಕೊಂಡು ಅದನ್ನು ಜಿಲ್ಲಾ ಪಂಚಾಯತ್‌ನಲ್ಲಿ ಇಡುತ್ತೇವೆ. ಉದಾಹರಣೆಗೆ, ಶಿಕ್ಷಣ ಕ್ಷೇತ್ರದಲ್ಲಿ ಐದು ಕೋಟಿ ರೂಪಾಯಿಗಳ ಬದಲಾಗಿ ನಾಲ್ಕು ಕೋಟಿ ರೂಪಾಯಿಗಳನ್ನು ಇಡುತ್ತೇವೆ. ಆನಂತರ, ಟೀಚರ್ಸ್ ವೇಕೆನ್ಸಿ ಫಿಲ್‌ಅಪ್

ಆದ ಬಳಿಕ ಸ್ಕಾಲರಿಗೆ ಕೊಡಬೇಕಾದಂಥ ಪ್ರಸಂಗ ಬಂದಾಗ ಅಲ್ಲಿಂದಿಲ್ಲಿಗೆ re-appropriate ಮಾಡಿಕೊಂಡು ಕೊಡುತ್ತೇವೆ. ಆಗ ಎಕ್ಸೆಸ್ ಆಗುತ್ತದೆ. ಮತ್ತು ಕೊನೆಕೊನೆಗೆ ರಾಜ್ಯ ಸರ್ಕಾರವಾಗಲೀ ಕೇಂದ್ರ ಸರ್ಕಾರವಾಗಲೀ ಪ್ಲಾನ್ ಕಟ್ ಮಾಡುತ್ತದೆ. ಆಗ ಪ್ರತಿಯೊಂದರಲ್ಲೂ ಕೂಡ ತೊಂದರೆಯಾಗುತ್ತದೆ. ಈ ರೀತಿ ತೀರಾ ತೊಂದರೆಯಾಗುವುದು ಜಿಲ್ಲಾ ಪಂಚಾಯತ್‌ನಲ್ಲಿರುವ ಅನೇಕ ಸ್ಕೀಮುಗಳು! ಕೇಂದ್ರ ಸರ್ಕಾರ ಅನೇಕ ಸಲ ಏನು ಮಾಡುತ್ತದೆಂದರೆ, ಮಾರ್ಚಿ ತಿಂಗಳ ಅಂತ್ಯಕ್ಕೆ G.O. ಇಶ್ಯೂ ಮಾಡಿ ಹಣ ಕೊಡುತ್ತಾರೆ. ಪುನಃ revalidate ಮಾಡಲು ಹೋದಾಗ 13 ತಿಂಗಳುಗಳಾದ ಬಳಿಕ ಏಪ್ರಿಲ್–ಮೇ ತಿಂಗಳುಗಳಲ್ಲಿ revalidate ಆಗಿ ಎರಡು ಮೂರು ತಿಂಗಳಾದ ಮೇಲೆ ಅಂದರೆ, ಕಳೆದ ವರ್ಷದ ಹಣ ಮುಂದಿನ ವರ್ಷದಲ್ಲಿ ಖರ್ಚು ಮಾಡತಕ್ಕಂಥ ಅನೇಕ ಪ್ರಸಂಗಗಳಿವೆ. ಇದು ತಮಗೂ ಕೂಡ ಗೊತ್ತಿದೆ. ಈ ರೀತಿ ಹೆಚ್ಚು–ಕಡಿಮೆ ಕೇವಲ ಯಾವುದೋ ಒಂದು ಜಿಲ್ಲೆಯಲ್ಲಿ ಆಗುತ್ತದೆಂದಲ್ಲ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲೂ ಕೂಡ revalidation G.O. ಮಾಡತಕ್ಕಂಥಾದ್ದು ಅಥವಾ ಹಣ re-appropriate ಮಾಡುವುದು ಎಲ್ಲಾ ಕಡೆಗಳಲ್ಲೂ ಇದೆ.

ಶ್ರೀ ಆರಗ ಜ್ಞಾನೇಂದ್ರ: ಇದು ಎಕ್ಸೆಸ್ ಖರ್ಚಾಗಿರುವುದು. 1999–2000ರಲ್ಲಿ ಜಿಲ್ಲಾ ಪಂಚಾಯತ್‌ನಲ್ಲಿ ಖರ್ಚಾಗದೆ ಒಟ್ಟಾರೆ 970 ಕೋಟಿ ರೂಪಾಯಿಗಳಷ್ಟು ಹಣ ಹಾಗೆಯೇ ಉಳಿದಿದೆ. ಇದನ್ನು ಹೇಳುವುದು ನಾನಲ್ಲ, ಸಿಎಜಿ ವರದಿ ಹೇಗೆ ಹೇಳುತ್ತದೆ, ಇದರಿಂದ ಏನಾಗುತ್ತದೆಂದರೆ, ಬಹಳಷ್ಟು ಸಲ ಭ್ರಷ್ಟಾಚಾರಕ್ಕೆ ಅಥವಾ ಯಾರು ಏನು ಕೆಲಸ ಮಾಡುತ್ತಾರೆ? ಎಷ್ಟು ಹಣ ವಿನಿಯೋಗವಾಗಿದೆ? ಯಾರು ಎಲ್ಲಿಟ್ಟಿದ್ದಾರೆ ಮುಂತಾದ ವಿಷಯಗಳು ಗೊತ್ತಾಗದೆ ಹೋಗುವ ಹಲವಾರು ಸಂದರ್ಭಗಳಿವೆ. ಪ್ರತಿ ತಿಂಗಳು ಲೆಕ್ಕಗಳನ್ನು ತಾಳೆ ನೋಡುವ ಒಂದು ಪದ್ಧತಿಯನ್ನು ಇದುವರೆವಿಗೂ ಕೂಡ ಅಳವಡಿಸಲಿಲ್ಲ. ಅನೇಕ ಸಂಗತಿಗಳನ್ನು ಈ ಸಲದ ವಿಷಯ ಸಮಿತಿಯಲ್ಲಿ ಹೊರಗೆಡಹುತ್ತಾರೆ. ಒಂದೇ 'ಕೆಲಸಕ್ಕೆ 2–3 ಕಡೆಗಳಲ್ಲಿ ಹಣ ಪಡೆದಿರುವುದು ಕಂಡುಬಂದಿದೆ. ಅದು ಈ ಸಲದ ವಿಷಯ ಸಮಿತಿಯ ವರದಿಯಲ್ಲಿದೆ. ಪ್ಲಾನ್ ಸ್ಕೀಮ್‌ನಲ್ಲಿ 428 ಹೆಡ್ ಆಫ್ ಅಕೌಂಟ್‌ಗಳಿದ್ದರೆ, ಯೋಜನೇತರದಲ್ಲಿ 230 ಹೆಡ್ ಆಫ್ ಅಕೌಂಟ್‌ಗಳಿವೆ. ಇದನ್ನು ಏನಾದರೂ ಮಾಡಿ ಕಡಿಮೆ ಮಾಡದೆ ಹೋದರೆ, ಕೆಲವು ಹೆಡ್ ಆಫ್ ಅಕೌಂಟ್‌ನಲ್ಲಿ 10–20 ಸಾವಿರ ರೂಪಾಯಿಗಳಿದ್ದರೂ ಅದಕ್ಕೊಂದು ಲೆಕ್ಕ ಶೀರ್ಷಿಕೆ, ಓಪನ್ ಮಾಡುವುದು ಲೆಕ್ಕ ಬರೆಯುವುದು, ಅದು ಇರುವುದು ಗೊತ್ತಾಗುವುದಿಲ್ಲ, ಇಲ್ಲದಿರುವುದು ಗೊತ್ತಾಗುವುದಿಲ್ಲ. ಹೀಗಾಗಿ ಇದನ್ನು ಆದಷ್ಟು ಕಡಿಮೆ ಮಾಡುವ ವ್ಯವಸ್ಥೆಯನ್ನು ಇನ್ನಾದರೂ ಮಾಡಬೇಕಾಗುತ್ತದೆ. 'ಈ ಲೆಕ್ಕ ತಾಳೆಯಾಗುವುದಿಲ್ಲ, ಹಣ ಕೊನೆಯಲ್ಲಿ ಬಿಡುಗಡೆಯಾಗುತ್ತದೆ. ಇವು ಹೊಸತರಲ್ಲಿ ಒಂದೆರಡು ವರ್ಷಗಳ ಕಾಲ ಬರುವ ಸಾಮಾನ್ಯವಾದ ಸಂಗತಿಗಳು' ಎಂದು ಮಾನ್ಯ ಖರ್ಗೆ ಸಾಹೇಬರು ಹೇಳಿದರು. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ವ್ಯವಸ್ಥೆಗಳು ಬಂದು ಎಷ್ಟು ವರ್ಷವಾಯಿತು? ಇದುವರೆವಿಗೂ ಒಂದು ಲೆಕ್ಕ ಇಡತಕ್ಕಂಥ ವ್ಯವಸ್ಥೆಯನ್ನು ನಾವು ಕಂಡುಹಿಡಿಯಲಿಲ್ಲವೆಂದರೆ, ಇವೊತ್ತು ಕೇಂದ್ರ ಸರ್ಕಾರ 11th Financeನಲ್ಲಿ ನಿಮ್ಮ ಅಷ್ಟೂ ಲೆಕ್ಕಪತ್ರಗಳನ್ನು ಕಂಪ್ಯೂಟರೀಕರಣಗೊಳಿಸುವುದಕ್ಕೆ ಸಾಕಷ್ಟು ಹಣ ಕೊಡುತ್ತಿದ್ದಾರೆ. ಅ ಹಣದಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳಲ್ಲಿ ಈ ರೀತಿ ಲೆಕ್ಕಪತ್ರಗಳನ್ನಿಡುವ ವ್ಯವಸ್ಥೆಗಳನ್ನು ಮಾಡಬಹುದಾಗಿದೆ.

ಅದಕ್ಕೊಂದು ವ್ಯವಸ್ಥಿತವಾಗಿ ಸಮಿತಿಯೊಂದನ್ನು ನೇಮಕ ಮಾಡಿ, ಅಧ್ಯಯನ ಮಾಡಿ ಯಾವ ರೀತಿ ಲೆಕ್ಕ ಇಡಬೇಕು? ಹೇಗೆ ಅದರ ತಪಾಸಣೆ ಮಾಡಬೇಕು? ಪಾರದರ್ಶಕವಾಗಿ ಎಲ್ಲರ ಗಮನಕ್ಕೆ ಆ ಲೆಕ್ಕಾಚಾರಗಳು ಯಾವ ರೀತಿ ಇರಬೇಕು ಎಂಬುದನ್ನು ಇವೊತ್ತಿನವರೆಗೂ ತರದೇ ಹೋದರೆ, ವಿಶೇಷವಾಗಿ ನಿಮಗೆ ಹೇಳುವುದಾದರೆ, ಐದು ವರ್ಷಗಳಿಂದ ಯಾವುದೇ ಲೆಕ್ಕಪರಿಶೋಧನೆಯಾಗಲಿಲ್ಲ, ಯಾರಾದರೂ ಅಧಿಕಾರಿಗಳಿದ್ದರೆ ಸಿಎಜಿ ಪ್ಯಾರಾ ಪೇಜ್ ನಂಬರ್ 31 ಅನ್ನು ದಯವಿಟ್ಟು ನೋಡಬೇಕು. ಕೆಲವು ಜಿಲ್ಲಾ ಪಂಚಾಯತ್‌ಗಳಲ್ಲಿ ಐದು ವರ್ಷಗಳಿಂದ ಆಂತರಿಕ ಲೆಕ್ಕಪರಿಶೋಧನೆಯಾಗಲಿಲ್ಲ. ಹಾಗಾದರೆ, ನಾವು ಎಲ್ಲಿದ್ದೇವೆ? ನೀವು ಬೇಡಿಕೆಗಳನ್ನು ಮಂಡಿಸುತ್ತೀರಿ, ನಾವು ಕೈ ಎತ್ತುತ್ತೇವೆ. ಏಕೆಂದರೆ, ಮುಂದಿನ ತಿಂಗಳು ಒಂದನೇ ತಾರೀಖಿನಿಂದ ನಮಗೆ ಖರ್ಚಿಗೆ ಹಣ ಬೇಕು, ನಾವು ಇಲ್ಲಿ ಅನುಮೋದನೆ ಕೊಟ್ಟು ಹೋಗುವುದು, ಇನ್ನು ಒಂದು ವರ್ಷ ಕಾಲ ನೀವು ಏನು ಹೇಳುತ್ತೀರೋ ಅದನ್ನು ನಾವು ಕೇಳುವುದು, ಇದೇ ರೀತಿ ಆಗುವುದಾದರೆ, ಹಾಗಾದರೆ, ಸಾಮಾನ್ಯ ಜನರ ತೆರಿಗೆ ಹಣ ಎಲ್ಲಿ ಹೋಗುತ್ತದೆ? ಹೇಗೆ ಹೋಗುತ್ತದೆ? ಇದರ ಸದ್ಬಳಕೆಯಾಗುತ್ತಿದೆಯೇ? ಇಲ್ಲವೇ ಎಂಬುದನ್ನು ನೋಡುವುದಾದರೂ ಹೇಗೆ? ಆಂತರಿಕ ಲೆಕ್ಕಪರಿಶೋಧನೆಯಾಗುವುದಿಲ್ಲವೆಂದರೆ, ಈ ಸಂಸ್ಥೆ ಇವೊತ್ತು ಸೊರಗುತ್ತಿದೆ. ಹೇಗಿದೆಯೆಂದರೆ, ಬಾಹ್ಯ ಲೆಕ್ಕಪರಿಶೋಧನೆಯಾಗಬೇಕು, ಆಂತರಿಕ ಲೆಕ್ಕಪರಿಶೋಧನೆಯಾಗಲಿಲ್ಲ.

4.10 ಪಿ.ಎಂ.

ಆ ವರದಿ ಕೈ ಸೇರಿ ಒಂದು ತಿಂಗಳ ಒಳಗಾಗಿ ಅದರ ಬಗ್ಗೆ ಅನುಸರಣಾ ಕ್ರಮವನ್ನು ಕೈಗೊಳ್ಳಬೇಕು. ನಿಯಮದಲ್ಲಿ ಅದೆಲ್ಲವೂ ಇದೆ. ಅದರ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲ. ಐದು ಜಿಲ್ಲಾ ಪಂಚಾಯತ್‌ಗಳಲ್ಲಿ 5902 ಲೆಕ್ಕಪತ್ರ ತಪಾಸಣಾ ನ್ಯೂನತಾ ಪ್ರಕರಣದ ಬಗ್ಗೆ ಟಿಪ್ಪಣಿ ಕೊಟ್ಟರೆ ಅದಕ್ಕೆ ಉತ್ತರವನ್ನೇ ಕೊಡಲಿಲ್ಲ, ಒಂದೆರಡಲ್ಲಾ 5902 ಪ್ರಕರಣಗಳು. ಇದರಲ್ಲಿ ಕೋಟಿಗಟ್ಟಲೆ ಹಣ ಒಳಗೊಂಡಿದೆ ಎನ್ನತಕ್ಕದ್ದನ್ನು ಮರೆಯಬಾರದು. ಇಷ್ಟು ಹಣ ಒಳಗೊಂಡಿದೆ, ಇದರ ಲೆಕ್ಕ ತಪಾಸಣೆಯ ವರದಿಯನ್ನು ಕಳಿಸಿದರೆ ಇವತ್ತಿನವರೆಗೆ ಇದರ ಬಗ್ಗೆ ಒಂದು ಚಕಾರ ಉತ್ತರವನ್ನು ಕೊಡಲು ಹೋಗಲಿಲ್ಲವೆಂದರೆ ಹೇಗೆ? ಇದರಲ್ಲಿನ 180 ಪ್ರಕರಣಗಳು 20 ವರ್ಷಕ್ಕಿಂತ ಹೆಚ್ಚಿನದು, 175 ಪ್ರಕರಣಗಳು 16 ರಿಂದ 20 ವರ್ಷದ್ದು, 1051 ಪ್ರಕರಣಗಳು 11 ರಿಂದ 15 ವರ್ಷದ್ದು, 2231 ಪ್ರಕರಣಗಳು 6 ರಿಂದ 10 ವರ್ಷದ್ದು, 2261 ಪ್ರಕರಣಗಳು ಐದು ವರ್ಷಕ್ಕೆ ಸಂಬಂಧಪಟ್ಟಿದ್ದು, ಇದಕ್ಕೆ ಉತ್ತರ ಕೊಡಬೇಕು. ಇದರಲ್ಲಿನ ಇನ್‌ವಾಲ್ವ್ ಆಗಿರುವಂಥ ಅಧಿಕಾರಿಗಳು, ನಿವೃತ್ತಿಯಾಗಿ ಮುರ್ನಾಕು, ಐದು ವರ್ಷವಾದ ನಂತರ ನಾವು ಇದಕ್ಕೆ ಉತ್ತರ ಕೊಟ್ಟು ಏನು ಪ್ರಯೋಜನ? ಇವತ್ತು ಅನೇಕ ಇಲಾಖೆಗಳಲ್ಲಿ ಈ ಕ್ರಮವನ್ನು ಅನುಸರಿಸುತ್ತಿದ್ದೇವೆ, ಸಾರ್ವಜನಿಕರ ಹಣ ಅಪವ್ಯಯವಾಗುತ್ತಿದೆ, ಯಾರ್‍ಯಾರೋ ತಿಂದು ಏನೇನೋ ಆಗಿಹೋಗಿದೆ. ಅಭಿವೃದ್ಧಿಗೋಸ್ಕರ ಒಂದು ಕಡೆ ಹಣವಿಲ್ಲವೆಂದು ನಾವು ಹೇಳುತ್ತೇವೆ, ಇನ್ನೊಂದು ಕಡೆ ಹಣವನ್ನು ಕೊಟ್ಟರೂ ಕೂಡ ಸರಿಯಾದ ರೀತಿಯಲ್ಲಿ ವಿನಿಯೋಗವಾಗುತ್ತದೋ ಇಲ್ಲವೋ ಎನ್ನುವ ಬಗ್ಗೆ ಕಟ್ಟುನಿಟ್ಟಾಗಿ ಎಚ್ಚರಿಕೆ ವಹಿಸತಕ್ಕ ಕ್ರಮ ಈ ವ್ಯವಸ್ಥೆಯಲ್ಲಿ ಇಲ್ಲಾ ಎನ್ನುವಂಥಾದ್ದು ಅತ್ಯಂತ ಆತಂಕದ ಸ್ಥಿತಿಯಾಗುತ್ತದೆ. ಆಡಿಟ್‌ಗೆ ಉತ್ತರವನ್ನು ಕೊಡದಿದ್ದರೆ, ನಾನು ಇಲ್ಲಿ ಒಂದು ನಿರ್ಣಯವನ್ನು ಮಾಡೋಣ, ಆಡಿಟ್‌ನ್ನು ಇನ್ನು ಮಾಡುವುದು ಬೇಡ, ನಮ್ಮ ಯಾವುದೇ ಇಲಾಖೆಗೆ ಇನ್ನು ಆಡಿಟ್‌ನ್ನು ಮಾಡುವುದು ಬೇಡ, ಏಕೆಂದರೆ ಒಂದು

ಆಡಿಟ್ ವಿಂಗ್, ಅದಕ್ಕ ಒಂದಷ್ಟು ಸಂಬಳ, ಎಲ್ಲಾ ರೀತಿಯ ಭತ್ಯೆಗಳು, ಇವನ್ನು ಏತಕ್ಕೆ ಕೊಡಬೇಕು? ಅದಕ್ಕಾಗಿ ನಮಗೆ ಆಡಿಟ್‌ನ ಅವಶ್ಯಕತೆ ಇಲ್ಲ, ಹಣವನ್ನು ಕೊಡುವುದು ನೀವು ಏನಾದರೂ ಮಾಡಿಕೊಳ್ಳಿ ಎಂದು, ಅರ್ಥವೇ ಬರುವುದಿಲ್ಲ, ಆದ್ದರಿಂದ ಇನ್ನಾದರೂ ಮಾನ್ಯ ಮಂತ್ರಿಗಳು, ಇಲ್ಲಿ ಬಹಳ ಹಿರಿಯ ಅಧಿಕಾರಿಗಳು ಅನೇಕರಿದ್ದಾರೆ, ಐಎಎಸ್ ಮಾಡಿರತಕ್ಕವರಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಹಣಕಾಸು ಇಲಾಖೆಯನ್ನು ಅನೇಕ ವರ್ಷಗಳಿಂದ ಹ್ಯಾಂಡಲ್ ಮಾಡಿ ಅಭ್ಯಾಸವಿರತಕ್ಕ ಮುಖ್ಯಮಂತ್ರಿಗಳು ಈ ರಾಜ್ಯದಲ್ಲಿದ್ದಾರೆ, ಅವರೇ ಇದರ ಬಗ್ಗೆ ಗಮನಕೊಡದಿದ್ದರೆ ಇನ್ನು ಯಾರು ಗಮನಕೊಡಬೇಕು ಎಂಬ ಬಗ್ಗೆ ಹೇಳಬೇಕಾಗುತ್ತದೆ. ಏಕೆಂದರೆ, ಆಡಿಟ್, ಸಿಎಜಿ ವರದಿ ಇವ್ಯಾವುದಕ್ಕೂ ಕವಡೆಕಾಸಿನ ಕಿಮ್ಮತ್ತನ್ನು ನಮ್ಮ ಇಲಾಖೆಗಳು ಕೊಡುವುದಿಲ್ಲ ವಿಶೇಷವಾಗಿ ನಮ್ಮ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ಗೆ ಸಂಬಂಧಪಟ್ಟಂತೆ 27–28 ಇಲಾಖೆಗಳು ಅದ್ಯಾವುದರ ಬಗ್ಗೆ ಚಕಾರವೆತ್ತುವುದಿಲ್ಲವೆಂದರೆ ಆ ಹಣವನ್ನು ಸಮುದ್ರಕ್ಕೆ ಎಸೆದಂತೆ, ಬೇರೆ ಏನೂ ಪ್ರಯೋಜನವಾಗುವುದಿಲ್ಲ, ಆದ್ದರಿಂದ ನಾನು ಹೇಳುತ್ತೇನೆ, ಈ ಬಗ್ಗೆ ಇಷ್ಟು ವರ್ಷದ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ, ಆಡಿಟ್, ಹಣದ ಅವ್ಯವಹಾರ ಎಲ್ಲದರ ಬಗ್ಗೆ ಸರ್ಕಾರ ಶ್ವೇತಪತ್ರವನ್ನು ಹೊರಡಿಸಲಿ. ಜನರಿಗಾದರೂ ಈ ವ್ಯವಸ್ಥೆ ಹೇಗೆ ನಡೆಯುತ್ತಿದೆ ಎಂದು ಗೊತ್ತಾಗಲಿ, ಈ ವ್ಯವಸ್ಥೆಯಲ್ಲಿ ನಾವು ಎಲ್ಲಿದ್ದೇವೆ ಎಂಬುದಾದರೂ ಜನರಿಗೆ ಅರ್ಥವಾಗಲಿ ಎಂಬುದು ನನ್ನ ಅಪೇಕ್ಷೆ, ಆದ್ದರಿಂದ ಇಂಥ ಒಂದು ಶ್ವೇತಪತ್ರವನ್ನು ಸರ್ಕಾರ ಹೊರಕ್ಕೆ ತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಒಂದೊಂದು ಜಿಲ್ಲಾಪಂಚಾಯತಿಯ ಇಂಜಿನಿಯರಿಂಗ್ ಉಪ ವಿಭಾಗದ ಸ್ಟೋರ್‌ಗಳಲ್ಲಿ ಐವತ್ತು ಲಕ್ಷದಿಂದ ಒಂದು ಕೋಟಿ ರೂಪಾಯಿಗಳ ಲೆಕ್ಕವೇ ಸಿಕ್ಕುತ್ತಿಲ್ಲ. ಇಂಜಿನಿಯರಿಂಗ್ ಸಬ್‌ಡಿವಿಜನ್‌ಗಳಲ್ಲಿ ಮೆಶಿನರಿಗಳೇ ಇಲ್ಲ. ಸ್ಪೇರ್‌ಪಾರ್ಟ್ಸ್ ಇಲ್ಲ. ಮೆಟೀರಿಯಲ್‌ನ ಲೆಕ್ಕವಿಲ್ಲ, ಮೋಟಾರ್‌ಗಳೇ ನಾಪತ್ತೆಯಾಗಿದೆ, ಜೀಪುಗಳೇ ನಾಪತ್ತೆಯಾಗಿದೆ, ಹತ್ತಾರುಕೋಟಿ ರೂಪಾಯಿಗಳ ಪೈಪುಗಳೇ ಇಲ್ಲ, ಇದಕ್ಕೆ ಯಾರನ್ನು ಹೊಣೆ ಮಾಡುತ್ತೀರಿ? ಅಲ್ಲಿರುವ ಎ.ಇ.ಇ. ಅಥವಾ ಸ್ಟೋರ್ ಕೀಪರ್‌ಗಳ್ಯಾರನ್ನಾದರೂ ಹೊಣೆ ಮಾಡಿದ್ದೇವೆಯೇ? ಈ ರಾಜ್ಯದಲ್ಲಿ ಅಂಥ ಎಷ್ಟು ಜನರ ಮೇಲೆ ಕ್ರಮ ಕೈಗೊಂಡಿದ್ದೇವೆ? ಎಷ್ಟು ಜನ ಸ್ಟೋರ್‌ಕೀಪರ್‌ಗಳನ್ನು ಇದಕ್ಕೆ ಬದ್ಧತೆ ಮಾಡಿ ಅವರನ್ನು ಕೋರ್ಟಿಗೆ ಎಳೆದಿದ್ದೇವೆ? ಅಥವಾ ಅವರ ಕೆಲಸ ಕಳೆದಿದ್ದೇವೆ? ಏನೂ ಇಲ್ಲ, ಈ ರಾಜ್ಯದಲ್ಲಿ ಏನು ಬೇಕಾದರೂ ಆಗಿಹೋಗಿಬಿಡಬಹುದು, ಎಷ್ಟು ಬೇಕಾದರೂ ತಿಂದು ಹೋಗಬಹುದು, ಈ ನಿಟ್ಟಿನಲ್ಲಿ ಯಾರೂ ಕೂಡ ಗಮನಕೊಡದಿದ್ದರೆ, ವಸೂಲಿ ಕ್ರಮ ಕೈಗೊಳ್ಳದಿದ್ದರೆ ಎಷ್ಟು ಹಣ ಕೊಟ್ಟರೂ, ಎಷ್ಟೇ ಸಾವಿರಾರು ಕೋಟಿ ರೂ. ಹಣದ ಬೇಡಿಕೆ ತಂದರೂ ಅದು ಈ ರಾಜ್ಯದ ಅಭಿವೃದ್ಧಿಗೋಸ್ಕರ ಹೋಗುವುದಿಲ್ಲ, ಈ ರಾಜ್ಯದಲ್ಲಿ ಯಾರದೊ ಒಬ್ಬರನ್ನು, ಕೆಲವರನ್ನು ಶ್ರೀಮಂತಿಕೆ ಮಾಡಲು ಹೋಗುತ್ತದೆ. ಹೇಗಾಗಿದೆಯೆಂದರ, ದೇಶ ಬಡವಾಗುತ್ತ ಹೋಗುತ್ತದೆ ವ್ಯಕ್ತಿ ಶ್ರೀಮಂತನಾಗುತ್ತಾ ಹೋಗುತ್ತಾನೆ, ಈ ರಾಜ್ಯದ, ದೇಶದ ವಿಶೇಷತೆ ಇದು, ಏಕೆಂದರೆ ಇಂಥ ಭ್ರಷ್ಟಾಚಾರಗಳು, ಇದನ್ನು ಕಡಿವಾಣ ಹಾಕಬೇಕೆಂದರೆ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕಾಗಿತ್ತು, ಆದರೆ ದುರಾದೃಷ್ಟವಶಾತ್ ಇಷ್ಟು ವರ್ಷ ಆ ಕೆಲಸ ಆಗಲಿಲ್ಲ, ಅನೇಕ ಸಲ ಚರ್ಚೆ ಸಹ ಇಲ್ಲಿ ಆಗಿದೆ. ಒಬ್ಬರು ಮುಖ್ಯಲೆಕ್ಕಾಧಿಕಾರಿ, ಇವರ ಹೆಸರು ಶಾಂತಕುಮಾರಿ ಎಂದು, ಉತ್ತರ ಕನ್ನಡ ಜಿಲ್ಲೆಯಲ್ಲಿನ ಜಿಲ್ಲಾ ಪಂಚಾಯತ್

ಮುಖ್ಯಲೆಕ್ಕಾಧಿಕಾರಿಯಾಗಿ ಇದ್ದರು, ಆನಂತರ ಬೆಂಗಳೂರಿಗೆ ಬಂದರು, ಬೆಂಗಳೂರಿನಲ್ಲೂ ಮುಖ್ಯಲೆಕ್ಕಾಧಿಕಾರಿಯಾಗಿದ್ದರು. ಜಿಲ್ಲಾಪರಿಷತ್ತಿನ 18.8 ಕೋಟಿ ರೂ. ಹಣವನ್ನು ತನ್ನ ಸ್ವಂತ ಬ್ಯಾಂಕ್ ಖಾತೆಯಲ್ಲಿಟ್ಟುಕೊಂಡಿದ್ದರು, ಅದರಲ್ಲಿ ಸಾಕಷ್ಟು ವ್ಯವಹಾರಗಳಾಗಿತ್ತು, ಎಷ್ಟು ವರ್ಷಗಳ ನಂತನ ಅದನ್ನು ಕಂಡು ಹಿಡಿದಿರತಕ್ಕದ್ದು ಅಧ್ಯಕ್ಷರೆ? ಸಿ.ಎ.ಜಿ. ರವರು ಹೋಗಿ ತಪಾಸಣೆ ಮಾಡಿದ ಮೇಲೆ ಅದು ಗೊತ್ತಾಗಿರತಕ್ಕದ್ದು, ಇವತ್ತು ಅವರನ್ನೇನೋ ಅಮಾನತ್ತಿನಲ್ಲೋ, ಸಿ.ಬಿ.ಐ. ತನಿಖೆಗೆ ಒಳಪಡಿಸಿರುವುದನ್ನು ನಾವು ಗಮನಿಸಿದ್ದೇವೆ, ಆದರೆ ಇದರ ಹಿಂದೆ ಅವರೊಬ್ಬರೇ ಇದ್ದಾರೆಯೇ? ಇಷ್ಟೆಲ್ಲಾ ನಡೆಯುವಾಗ ಅಲ್ಲಿರುವ ಐ.ಎ.ಎಸ್. ಅಧಿಕಾರಿ ಯಾರು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿದ್ದರು ಅವರನ್ನೇಕೆ ಹೊಣೆಗಾರರನ್ನಾಗಿ ಮಾಡಲಿಲ್ಲ? ಅವರಿಗೆ ಕಾರು, ಬಂಗಲೆ ಕೊಟ್ಟು ರಾಜಕುಮಾರರನ್ನು ಸಾಕುವಂಥ ಅವಶ್ಯಕತೆ ಏನಿದೆ? ತನ್ನ ಜಿಲ್ಲಾ ಪಂಚಾಯತ್‌ವ ವ್ಯಾಪ್ತಿಯಲ್ಲಿ 18 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ, ಒಬ್ಬರು ಮುಖ್ಯಲೆಕ್ಕಾಧಿಕಾರಿಯವರು ಅದನ್ನು ಡ್ರಾ ಮಾಡಿ ತನ್ನ ಅಕೌಂಟ್‌ನಲ್ಲಿಟ್ಟುಕೊಂಡಿದ್ದಾರೆಂದರೆ, ಅದನ್ನು ನೋಡಲು ಬರುವುದಿಲ್ಲವೆಂದರೆ, ಅಂಥ ಅಯೋಗ್ಯ ಅಧಿಕಾರಿಗಳನ್ನು ಇಂಥ ಮಹತ್ವವಾದ ಇಲಾಖೆಯಲ್ಲೇಕೆ ನೇಮಕ ಮಾಡಬೇಕು? ಇವರ ಮೇಲೆ ಕ್ರಮಕೈಗೊಂಡಂತೆಯೇ ಆವತ್ತಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಅವರು ಎಷ್ಟೇ ದೊಡ್ಡವರಾಗಿರಲಿ, ಯಾರು ಬೇಕಾದರೂ ಆಗಿರಲಿ ಅವರ ಮೇಲೂ ಕೂಡ ಕ್ರಮ ಕೈಗೊಳ್ಳಬೇಕು, ಅವರನ್ನೂ ಇದರ ವ್ಯಾಪ್ತಿಯಲ್ಲಿ ತರಬೇಕು, ಅವರಿಗೂ ಶಿಕ್ಷೆಯಾಗಬೇಕಾಗುತ್ತದೆ, ಇವತ್ತು ಈ ರಾಜ್ಯ ಯಾವ ದಿಕ್ಕಿನಲ್ಲಿ ಹೋಗಬೇಕು ಎಂಬುದನ್ನು ನಿರ್ಧಾರ ಮಾಡಬೇಕಾಗುತ್ತದೆ, ಏಕೆಂದರೆ ನಮ್ಮ ಲೆಕ್ಕಾಚಾರಗಳು ನಮ್ಮ ಭ್ರಷ್ಟ ವ್ಯವಸ್ಥೆಯನ್ನು ಸರಿ ಮಾಡತಕ್ಕದ್ದು ಎಂದರೆ ಕೇವಲ ಭಾಷಣ ಮಾಡುವುದೇನಿದೆ? ಇಂಥ ಒಂದೊಂದು ಪ್ರಕರಣಗಳು ಪತ್ತೆಯಾದಾಗ ಬೇರು ಸಹಿತ ಕಿತ್ತು ಹಾಕಿದರೆ ಅದರ ಮೆಸೇಜ್ ಇಡೀ ರಾಜ್ಯದಾದ್ಯಂತ ಹೋಗಬೇಕು. ಎಲ್ಲಾ ಅಧಿಕಾರಿಗಳಿಗೂ ಹೋಗಬೇಕು. ಈ ವ್ಯವಸ್ಥೆಯನ್ನು ನಾವು ಮಾಡಿದಾಗ ಮಾತ್ರ ಅದು ಸರಿಯಾಗುತ್ತದೆ. ಆದ್ದರಿಂದ ನಿಮ್ಮ ಲೆಕ್ಕಪತ್ರದ ಆಡಿಟ್‌ನ ಸಿಸ್ಟಂ ಸರಿಯಾಗಿದ್ದರೆ, ನಾವು ಇವತ್ತು ಹೈಟೆಕ್, ರಾಜ್ಯದ ಮುಖ್ಯಮಂತ್ರಿಯಿಂದ ಹಿಡಿದು ಸರ್ಕಾರಕ್ಕೆ ಒಂದು ವಿಶೇಷವಾಗಿರತಕ್ಕ ಹೆಸರು, ಎಲ್ಲಾ ಕಂಪ್ಯೂಟರೀಕರಣ, ಆಧುನಿಕ ಎಲ್ಲಾ ಸಂಶೋಧನೆಗಳ ಫಲವನ್ನು ಪಡೆದಿದ್ದೇವೆ ಎಂದು ಇಡೀ ದೇಶಕ್ಕೆ ಒಂದು ಚಿತ್ರಣವನ್ನು ನಾವು ಮೂಡಿಸಿದ್ದೇವೆ, ಆದರೆ ನಮ್ಮ ದೀಪದ ಬುಡ ನೆರಳಾಗಿದೆ, ಕತ್ತಲಾಗಿದೆ. ನಮ್ಮಲ್ಲಿ ಇಲ್ಲ, ಇದನ್ನೆಲ್ಲದಕ್ಕೂ ಹೈಟೆಕ್ ವಿಧಾನವನ್ನು ಉಪಯೋಗಿಸಿದರೆ ಹೇಗೆ? ಬೆಂಗಳೂರಿನಲ್ಲಿ ಕುಳಿತು ಗುಂಡಿ ಒತ್ತಿದರೆ ಯಾವ್ಯಾವ ಹೆಡ್ ಆಫ್ ಅಕೌಂಟ್‌ನಲ್ಲಿ ಎಷ್ಟು ಹಣವಿದೆ, ಇದು ಗೊತ್ತಾಗಬೇಕಲ್ಲಾ? ಇಲ್ಲಿರುವ ನಮ್ಮ ಕಾರ್ಯದರ್ಶಿಯವರಿಗೆ ಗೊತ್ತಾಗಬೇಕಲ್ಲ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು): ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ತಾನೇ ನಾನು ಖಜಾನೆ ಪ್ರೋಗ್ರಾಮ್‌ನ್ನು ಇನಾಗ್ಯುರೇಟ್ ಮಾಡಿದೆ. ಪ್ರತಿಯೊಂದು ರೂಪಾಯಿ ಹೇಗೆ ಹೋಗುತ್ತದೆ ಎನ್ನತಕ್ಕದ್ದರ ಪೂರ್ತಿ ದಾಖಲು ಇಲ್ಲಿ ಬಟನ್ ಒತ್ತಿದಾಗ ತಮಗೂ ಸಿಗುತ್ತದೆ, ನಾನು ಈ ಸದನದ ಗೌರವಾನ್ವಿತ ಸದಸ್ಯರಲ್ಲಿ ಮಾಡತಕ್ಕ ವಿಶೇಷವಾದ ಪ್ರಾರ್ಥನೆ ಏನೆಂದರೆ, ಈ ವಿಚಾರದಲ್ಲಿ ತಾವು ಖನಿಜ ಭವನದಲ್ಲಿ ನಮ್ಮ ಮೈನ್ ಸರ್ವರ್ ಇದೆ, ಅಲ್ಲಿಗೆ ಹೋಗಿ ಖಜಾನೆಗಳ

ಕಂಪ್ಯೂಟರೈಜೇಷನ್‌ನ ಗಣಕೀಕರಣ ಹೇಗೆ ನಡೆಯುತ್ತದೆ, ಹೇಗೆ ವ್ಯವಸ್ಥಿತವಾಗಿ ಇಡೀ ಎಲ್ಲಾ ಖಜಾನೆಗಳು ನಡೆಯುತ್ತಿದೆ ಎಂಬುದನ್ನು ನೋಡಬೇಕೆಂಬುದು ನನ್ನ ಮನವಿ. ಈಗ ಅದು ಕಾರ್ಯರೂಪಕ್ಕೆ ಬಂದಿದೆ.

ಶ್ರೀ ಆರಗ ಜ್ಞಾನೇಂದ್ರ: ನಾನು ಇಲ್ಲ ಎಂದು ಹೇಳುತ್ತಿಲ್ಲ, ಖಜಾನೆ ಮತ್ತು ಸಬ್ ರಿಜಿಸ್ಟಾರ್ ಕೆಲವು ಕಛೇರಿಗಳನ್ನು ಕಂಪ್ಯೂಟರೀಕರಣ ಮಾಡುವಂಥ ಪ್ರಯತ್ನವನ್ನು ಮಾಡಿದ್ದೀರಿ, ಸಂಪೂರ್ಣವಾಗಿ ಇದನ್ನು ಅಲ್ಲಗೆಳೆಯಲು ನಾನು ಎದ್ದು ನಿಲ್ಲಲಿಲ್ಲ, ಆದರೆ ನಾನು ಹೇಳುವಂಥದ್ದು, ಜಿಲ್ಲಾ ಪಂಚಾಯತಿ ಜಿಲ್ಲಾ ಮಟ್ಟದಲ್ಲಿ ಒಂದು ಸರ್ಕಾರ, ಆ ಸರ್ಕಾರವೂ ಈ ಎಲ್ಲಾ ವ್ಯವಸ್ಥೆಯ ಅಡಿಯಲ್ಲಿ ಬರಬೇಕು, ಎಲ್ಲಿ ಮುಖ್ಯಲೆಕ್ಕಾಧಿಕಾರಿ 18 ಕೋಟಿ ರೂ. ಚಿಲ್ಲರೆ ಹಣವನ್ನು ತನ್ನ ಅಕೌಂಟ್‌ನಲ್ಲಿ ಡ್ರಾ ಮಾಡಿ ಇಟ್ಟುಕೊಳ್ಳುತ್ತಾನೆ ಎಂದರೆ ಇವೆಲ್ಲಾ ಹಿಡಿತಕ್ಕೆ ಸಿಕ್ಕುವುದಿಲ್ಲ, ಆದ್ದರಿಂದ ಇವೆಲ್ಲವೂ ಕೂಡ ಹಿಡಿತಕ್ಕೆ ಸಿಗತಕ್ಕ ಒಂದು ವ್ಯವಸ್ಥೆಯನ್ನು ನಾವು ಇನ್ನಾದರೂ ಅಳವಡಿಸಬೇಕಾಗುತ್ತದೆ. ಇದಕ್ಕಾಗಿ ಕೇಂದ್ರವೂ ಕೂಡ ನಮಗೆ ಸಾಕಷ್ಟು ಅನುದಾನವನ್ನು ಇವತ್ತು ಕೊಡುತ್ತಿದೆ. ಅವೆಲ್ಲವನ್ನೂ ಕೂಡ ಉಪಯೋಗಿಸಿ ಇದನ್ನು ಬಲವಾಗಿ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಸಾರ್ವಜನಿಕರ ಹಣಕ್ಕೆ ಲೆಕ್ಕ ಇಲ್ಲ, ಪತ್ರ ಇಲ್ಲ, ಯಾರು ಬೇಕಾದರೂ ಮಾಡಿಕೊಂಡು ಹೋಗಬಹುದು ಎಂದಾಗುತ್ತದೆ. ಹೀಗಾದರೆ ಬೀದಿಯಲ್ಲಿ ರಾಜಕಾರಣಿಗಳನ್ನೆಲ್ಲಾ ಜನರು ಬೈಯ್ದುಕೊಂಡು ಹೋಗುವಂತಾಗುತ್ತದೆ. ಇವರೆಲ್ಲರೂ ಸೇರಿಕೊಂಡು ದುಡ್ಡು ಹೊಡೆದು ಬಿಟ್ಟಿದ್ದಾರೆ, ಅಷ್ಟು ತಿಂದಿದ್ದಾರೆ, ಇಷ್ಟು ತಿಂದಿದ್ದಾರೆ, ಎನ್ನುವುದು ಇವತ್ತು ಬೀದಿ ಮಾತಾಗುತ್ತದೆ. ಆದ್ದರಿಂದಾಗಿ ಎಲ್ಲೋ ಒಂದು ಕಡೆ ಜನ ಇವೆಲ್ಲವನ್ನೂ ಕೂಡ ಸಲುಗೆಯಿಂದ ಮಾತನಾಡುವ ಹಾಗೆ ಆಗಬಾರದು. ಇದಕ್ಕೆ ಎಲ್ಲಾದರೂ ಒಂದು ಕಡೆ ಬಿಗಿ ಇದೆ ಎನ್ನುವಂತಾಗಬೇಕು. ಅವ್ಯವಹಾರ ಮಾಡಿದವನು ಎಲ್ಲಾದರೂ ಸಿಕ್ಕಿ ಹಾಕಿಕೊಂಡಾಗ ಅವನಿಗೆ ಚಾಟಿ ಏಟು ಬೀಳುತ್ತದೆ, ಅಂತಹವನಿಗೆ ಶಿಕ್ಷೆ ಆಗುತ್ತದೆ, ಅಂತಹವನು ಜೈಲಿಗೆ ಹೋಗುತ್ತಾನೆ, ಇಂತಹ ಒಂದು ವ್ಯವಸ್ಥೆಯನ್ನು ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ನಾವು ಜಾರಿಗೆ ತರದಿದ್ದರೆ ಹೇಗೆ? ಸ್ವಾತಂತ್ರ್ಯ ಬಂದ ಕಾಲದಲ್ಲಿ ಅದೇನೋ ಗಾಂಧಿ ಎನ್ನುವ ಒಂದು ಫಿಲಾಸಫಿ ತಲೆಯೊಳಗೆ ಇತ್ತು. ರಾಜಕಾರಣಿಗಳು ಮತ್ತು ನಮ್ಮ ಅಧಿಕಾರಿಗಳಿಗೆ ಇದು ನೈತಿಕ, ಇದು ಅನೈತಿಕ, ಇದು ಪಥ್ಯ, ಇದು ಅಪಥ್ಯ ಎನ್ನುವಂತಹ ಒಂದು ಗುಂಗು ತಲೆಯೊಳಗೆ ಇತ್ತು. ಆದರೆ ಇವತ್ತು ಹಾಗಿಲ್ಲ. ಇವತ್ತು ಗಂಟು ಹೊಡೆದವನೇ ನಿಸ್ಸೀಮನಾಗಿದ್ದಾನೆ. ಹೆಚ್ಚು ಯಾರು ಭ್ರಷ್ಟಾಚಾರ ಮಾಡಿದ್ದಾನೋ ಅವನಿಗೆ ಹೆಚ್ಚು ಯೋಗ್ಯತೆ, ತಾಕತ್ತು ಇದೆ, ಅವನು ದೊಡ್ಡ ಮನುಷ್ಯ ಎನ್ನುತ್ತಾರೆ. ಈ ಕ್ವಾಲಿಫಿಕೇಷನ್‌ಗಳ ಒಂದು ಅಳತೆಗೋಲೇ ಬದಲಾವಣೆಯಾಗಿ ಬಿಟ್ಟಿದೆ. ಇಂತಹ ಯುಗದಲ್ಲಿ ನಾವು ಯಾವ ರೀತಿಯಾಗಿ ಬದಲಾವಣೆ ಮಾಡಬೇಕು ಅನ್ನುವಂತಾದ್ದು ಬಹಳ ಮುಖ್ಯವಾಗುತ್ತದೆ. ಆದ್ದರಿಂದಾಗಿ ಈ ವ್ಯವಸ್ಥೆಯನ್ನು ಕಟ್ಟುನಿಟ್ಟಿನಲ್ಲಿ ಜಾರಿಗೆ ತರಬೇಕಾಗುತ್ತದೆ. ಸಾವಿರಾರು ಕೋಟಿ ರೂಪಾಯಿಗಳನ್ನು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಸರ್ಕಾರ ಕೊಡುತ್ತಿದೆ. ಇದು ಎಷ್ಟರಮಟ್ಟಿಗೆ ಉಪಯೋಗವಾಗುತ್ತಿದೆ? ಕೆ.ಡಿ.ಪಿ. ಮೀಟಿಂಗ್‌ನಲ್ಲಿ ನಾನು ನನ್ನ ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳ ರಿವ್ಯೂ ಮಾಡುತ್ತಿದ್ದೆ. ಕೆ.ಇ.ಬಿ. ಬಿಲ್ ಪಾವತಿಸಿರುವ ಬಗೆಗಿನ ವಿವರಗಳನ್ನು ನಾನು ತರಿಸಿದೆ. ನನ್ನ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 38 ಪಂಚಾಯಿತಿಗಳಿವೆ. 38 ಪಂಚಾಯಿತಿಗಳಲ್ಲಿ ಕೆ.ಇ.ಬಿ. : ಕೆ.ಪಿ.ಟಿ.ಸಿ.ಎಲ್. ಮತ್ತು ನಮ್ಮ ಪಂಚಾಯಿತಿಗಳ ನಡುವೆ

ಹೊಂದಾಣಿಕೆ ಆಗಿದೆ. ಪ್ರತಿ ತಿಂಗಳೂ ಕೆ.ಪಿ.ಟಿ.ಸಿ.ಎಲ್.ಗೆ ಕಟ್ಟಬೇಕಾದ ಹಣವನ್ನು ಪಂಚಾಯಿತಿಗಳೂ ಕೂಡ ಇವತ್ತು ಇಲ್ಲ. ಕೆ.ಪಿ.ಟಿ.ಸಿ.ಎಲ್‌ಗೆ ಕಟ್ಟಲಿಕ್ಕೆ ಹಣ ಇಲ್ಲ ಎನ್ನುವಂತಹ ಸ್ಥಿತಿಯಲ್ಲಿ ಯಾವ ಪಂಚಾಯಿತಿಗಳು ಕೂಡ ಇವತ್ತು ಇಲ್ಲ. ನಮ್ಮ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಕೆ.ಪಿ.ಟಿ.ಸಿ.ಎಲ್ ಆಫೀಸಿಗೇ ಹೋಗಿಲ್ಲ. ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಗೆ, ನಾವೇ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಎನ್ನುವಂತಹ ಏನೋ ಒಂದು ಭಾವನೆ ಅವರ ತಲೆಯಲ್ಲಿ ಇದೆ. ಅಲ್ಲಿದ್ದಂತಹ ಎ.ಇ.ಇ. ನಮ್ಮ ಪಂಚಾಯಿತಿಗೆ ಒಂದು ನೋಟೀಸನ್ನೂ ಸಹ ಕೊಟ್ಟಿಲ್ಲ. ಮೊನ್ನೆ ನಾನು ಆ ಬಗ್ಗೆ ವರದಿಯೊಂದನ್ನು ತರಿಸಿಕೊಂಡೆ. ನಮ್ಮ 38 ಪಂಚಾಯಿತಿಗಳಿಂದ ಕೆ.ಪಿ.ಟಿ.ಸಿ.ಎಲ್ ಆಫೀಸಿಗೆ ನಾವು ಕಟ್ಟಬೇಕಾಗಿರುವ ಬಾಕಿ ಹಣಕ್ಕೆ ಸುಮಾರು ಮೂರುವರೆಯಿಂದ ನಾಲ್ಕು ಲಕ್ಷ ರೂಪಾಯಿಗಳವರೆಗೆ ಬಡ್ಡಿಯನ್ನೇ ನಾವು ಇವತ್ತು ಕಟ್ಟಬೇಕಾಗಿದೆ. ಮೂರುವರೆಯಿಂದ ನಾಲ್ಕು ಲಕ್ಷ ರೂಪಾಯಿಗಳವರೆಗಿನ ಹಣವನ್ನು ನಾವೇಕೆ ಬಡ್ಡಿ ಕಟ್ಟುವುದಕ್ಕೆ ವಿನಿಯೋಗ ಮಾಡಬೇಕು ಎಂದು ನಾನು ಕೇಳಿದೆ: ಪ್ರತಿ ತಿಂಗಳೂ ಕೆ.ಪಿ.ಟಿ.ಸಿ.ಎಲ್.ಗೆ ಹೋಗಿ ಬಿಲ್ ಕಟ್ಟಲಿಕ್ಕೆ ಆಗದೇ ಬಡ್ಡಿ ಕಟ್ಟುವಂತಹ ಪರಿಸ್ಥಿತಿ ಏಕೆ ತಂದುಕೊಂಡರು? ಒಂದೊಂದು ಪಂಚಾಯಿತಿಗಳು ಸರಾಸರಿ ಇವತ್ತು ಸುಮಾರು 10–12 ಸಾವಿರ ರೂಪಾಯಿಗಳಷ್ಟು ಬಡ್ಡಿ ಹಣವನ್ನು ಕೆ.ಪಿ.ಟಿ.ಸಿ.ಎಲ್.ಗೆ ಕಟ್ಟಬೇಕಾಗಿದೆ. ಒಂದು ಪಂಚಾಯಿತಿ ದೃಷ್ಟಿಯಿಂದ ನಮಗೆ 12 ಸಾವಿರ ರೂಪಾಯಿಗಳು ಅಂದರೆ ಅದು ಬಹಳ ದೊಡ್ಡ ಮೊತ್ತವೇ ಸರಿ. ಆ ಹಣದಿಂದ ಒಂದು ಊರಿಗೊಂದು ರಸ್ತೆ ಸಂಪರ್ಕವನ್ನು ಕಲ್ಪಿಸಬಹುದು. ಒಂದೆಡೆ ಎಲ್ಲೋ ರಸ್ತೆ ಕೊರೆದುಕೊಂಡು ಹೋಗುವುದನ್ನು ತಪ್ಪಿಸಿ ಮೋರಿಯನ್ನು ಕಟ್ಟಿಸಬಹುದಾಗಿತ್ತು ಅಥವಾ ಇನ್ನಾವುದೋ ಒಂದು ಬಡವರ ಕಾಲೋನಿಗೆ ನೀರು ಇಲ್ಲದಿರುವಂತಹ ಕಡೆಗೆ ಒಂದು ಪೈಪ್‌ಲೈನ್ ಅನ್ನು ಎಳೆದುಕೊಡಬಹುದಾಗಿತ್ತು ಅಥವಾ ನಮ್ಮಲ್ಲಿ 2–3 ಚಿಲುಮೆ ಬಾವಿಗಳನ್ನು ಮಾಡಿಕೊಡಬಹುದಾಗಿತ್ತು. ನಮ್ಮಲ್ಲೆಲ್ಲಾ ಗದ್ದೆಗಳಲ್ಲಿ ಹೊಂಡಗಳನ್ನು ತೋಡಿಕೊಡಬಹುದಾಗಿತ್ತು. ಅದನ್ನು 'ಕಪ್ಪೆ ಹೊಂಡ' ಎಂದು ಹೇಳುತ್ತಾರೆ. ಅದರಲ್ಲಿ ಕಪ್ಪೆಗಳು ಇರುತ್ತವೆ, ಅದರಿಂದ ನೀರನ್ನು ತುಂಬಿಕೊಂಡು ಬಂದು ನಮ್ಮಲ್ಲಿ ಕೆಲವು ಕಡೆ ಕುಡಿಯುತ್ತಾರೆ. ಅದು ಬಹಳ ಅನಾರೋಗ್ಯಕರವಾಗಿರತಕ್ಕಂಥ ನೀರು. ಅದಕ್ಕೊಂದು ಐದ್ಯೆದು ರಿಂಗ್ ಇಳಿಸಿ ಕೊಡಬಹುದಾಗಿತ್ತು. ಈ ರೀತಿ ಏಕೆ ಮಾಡುತ್ತೀರಿ ಎಂದು ನಾನು ಅಧಿಕಾರಿಗಳನ್ನು ಕೇಳಿದೆ. ಇದಕ್ಕೆ ಯಾರ ಬದ್ಧತೆ ಇದೆ? ಇದನ್ನು ಯಾರು ಕೇಳಬೇಕು? ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲೇ ಇದ್ದಾರೆ. 5–6 ವರ್ಷಗಳಿಂದ internal audit ಆಗಿಲ್ಲ. ಆಡಿಟ್‌ಗೆ ಉತ್ತರ ಅಥವಾ ವಿವರಣೆಯನ್ನೇ ಕೊಟ್ಟಿಲ್ಲ. ಕಾರ್ಯದರ್ಶಿಗಳು ಎಲ್ಲಿಗೆ ಹೋಗುತ್ತಾರೆ? ಒಬ್ಬೊಬ್ಬ ಕಾರ್ಯದರ್ಶಿಗಳ ಮೇಲೆ ಎಷ್ಟೆಷ್ಟು ಹಣ ದುರುಪಯೋಗದ ಪ್ರಕರಣಗಳಿವೆ? ಒಬ್ಬೊಬ್ಬ ಕಾರ್ಯದರ್ಶಿಗಳ ಮೇಲೆ ಒಂದೂವರೆ ಲಕ್ಷದಿಂದ ಎರಡು ಲಕ್ಷ ರೂಪಾಯಿಗಳವರೆಗಿನ ಹಣ ದುರುಪಯೋಗದ ಆಪಾದನೆಗಳಿದ್ದರೆ, ಆ ಪಂಚಾಯಿತಿ ವ್ಯವಸ್ಥೆ ಏನಾಗಬಹುದು? ಒಂದೊಂದು ಪಂಚಾಯಿತಿಗಳಿಗೆ ಒಂದೊಂದು ವರ್ಷಕ್ಕೆ ನಾವು ಎಷ್ಟೊಂದು ಹಣವನ್ನು ಕೊಡುತ್ತೇವೆ ಎಂಬುದು ಗೊತ್ತೇ ಎಂದು ಮೊನ್ನೆ ಮಾನ್ಯ ಘೋರ್ಪಡೆ ಸಾಹೇಬರು ಇಲ್ಲಿ ಬಹಳ ಸಂತೋಷದಿಂದ ಹೇಳಿಕೊಳ್ಳುತ್ತಾರೆ. ಹೌದು ಸ್ವಾಮಿ, ನೀವು ಹಣ ಕೊಡುತ್ತೀರಿ. ಅದು ಎಲ್ಲಿಗೆ ಹೋಗುತ್ತದೆ? ಅದು ರಸ್ತೆಗೆ ಹೋಗುತ್ತದಾ? ಕುಡಿಯುವ ನೀರಿಗೆ ಹೋಗುತ್ತದಾ ಅಥವಾ ಬೇರೆ ಯಾವುದಾದರೂ ಅಭಿವೃದ್ಧಿ ಕೆಲಸಕ್ಕೆ ಹೋಗಿದೆಯೋ ಎಂದರೆ ಅದು ಎಲ್ಲೂ

ಹೋಗಿಲ್ಲ. ಅದನ್ನು ಇನ್ನಾರೋ ತಿಂದುಕೊಂಡು ಹೋಗುತ್ತಾರೆಂದರೆ ಹೇಗೆ? ಈ ವ್ಯವಸ್ಥೆಯಲ್ಲಿ ಬದ್ಧತೆಯನ್ನು ಮತ್ತು ನಿಗಾ ಅಂದರೆ ಕಂಟ್ರೋಲ್ ಇಡತಕ್ಕಂಥ ವ್ಯವಸ್ಥೆಯನ್ನು ನಾವು ಇದುವರೆಗೂ ಕೂಡ ಮಾಡಿಲ್ಲ. ಅದನ್ನು ತಾವು ಮಾಡಿಕೊಂಡು ಬಂದಿಲ್ಲ. ಇದರ ಪರಿಣಾಮವಾಗಿ ಸಾವಿರಾರು ಕೋಟಿ ರೂಪಾಯಿಗಳ ದುರ್ವಿನಿಯೋಗವಾಗಿದೆ.

ಶ್ರೀ ಕರಿಯಣ್ಣ: ಮಾನ್ಯ ಉಪಾಧ್ಯಕ್ಷರೆ, ನಾವು ಪಂಚಾಯಿತಿ ವ್ಯಾಪ್ತಿಯಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಮಾಡಿ, ಅಲ್ಲಿ ಒಬ್ಬ ಅಧ್ಯಕ್ಷರನ್ನು ಮಾಡಿ, ಸದಸ್ಯರುಗಳನ್ನು ಮಾಡಿ, ಕಾರ್ಯದರ್ಶಿಗಳನ್ನು ಅವರ ಸ್ವಾಧೀನದಲ್ಲಿ ಕೊಟ್ಟು, ನಮ್ಮ ನಮ್ಮ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಇರತಕ್ಕಂಥ ಕೆಲಸ ಮಾಡುವುದಕ್ಕೆ ಅಧಿಕಾರ ವಿಕೇಂದ್ರಿಕರಣ ಮಾಡಿ ಕೊಟ್ಟಿದ್ದೇವೆ. ಇದರ ಮೇಲೊಬ್ಬರನ್ನು ಸೂಪರ್‌ವಿಷನ್‌ಗೆ ನಾನು ಹೇಗೆ ಇಡುವುದಕ್ಕಾಗುತ್ತದೆ? ಅದು ಮಾನ್ಯ ಜ್ಞಾನೇಂದ್ರರವರಿಗೂ ಕೂಡ ಗೊತ್ತಿದೆ. ಈಗ ನಾವು ಇಲ್ಲಿ ಸರ್ಕಾರವಾಗಿ ಬಂದಿದ್ದೇವೆ, ನಮ್ಮ ಮೇಲೊಬ್ಬರು ಸೂಪರ್‌ವಿಷನ್‌ಗೆ ಬೇಕು ಎಂದು ನಾವು ಕೇಳಿದಂತಾಗುತ್ತದೆ. ಈಗ ಇಷ್ಟೊಂದು ವಿಕೇಂದ್ರೀಕರಣವಾಗಿದೆ. ಗ್ರಾಮ ಪಂಚಾಯಿತಿ ವಿಕೇಂದ್ರೀಕರಣವಾಯಿತು. ತಾಲ್ಲೂಕು ಪಂಚಾಯಿತಿ ವಿಕೇಂದ್ರೀಕರಣವಾಯಿತು, ಜಿಲ್ಲಾ ಪಂಚಾಯಿತಿ ವಿಕೇಂದ್ರಿಕರಣವಾಯಿತು, ಅಲ್ಲಲ್ಲೇ ಕೇಳತಕ್ಕಂಥವರನ್ನು ನಮ್ಮ ಪ್ರತಿನಿಧಿಗಳಾಗಿ ವ್ಯವಸ್ಥೆ ಮಾಡಿರತಕ್ಕಂಥ ಇಂತಹ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇನ್ನೊಬ್ಬರು ಸೂಪರ್‌ವಿಷನ್‌ಗೆ ಬೇಕೆಂದರೆ ಹೇಗೆ? ಅದಕ್ಕಾಗಿ ಅಧಿಕಾರಿಗಳು ಬೇಕೋ, ಪೋಲೀಸ್‌ನವರು ಬೇಕೋ ಎಂದು ನನಗೆ ಅರ್ಥವಾಗುತ್ತಿಲ್ಲ

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಆರಗ ಜ್ಞಾನೇಂದ್ರರವರು ಇದುವರೆಗೂ ಕೂಡ ಹೇಳುತ್ತಿದ್ದಂತಹ ವಿಚಾರಗಳಲ್ಲಿ ಈ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಹಣದ ವ್ಯವಹಾರದಲ್ಲಿ ಗೊತ್ತಾಗುತ್ತಿಲ್ಲ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಕ್ಕೆ ಪೂರಕವಾಗಿ, ನನಗೆ ಗೊತ್ತಿದ ರೀತಿಯಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ಇಡೀ ರಾಜ್ಯದಲ್ಲಿ ಕಂಪ್ಯೂಟರ್ ವ್ಯವಸ್ಥೆಯನ್ನು ಜಾರಿಗೆ ತಂದಿರುವುದರಿಂದ, ಎಲ್ಲಾ ಶಾಸಕರುಗಳೂ ಕೂಡ ಕೆ.ಡಿ.ಪಿ. ಮೀಟಿಂಗ್ ಅನ್ನು ಮಾಡತಕ್ಕಂಥ ಸಂದರ್ಭದಲ್ಲಿ, ಪ್ರತಿ ಇಲಾಖೆಯಲ್ಲೂ ಕೂಡ ಎಷ್ಟು ಹಣ ಯಾವ ಯೋಜನೆಯಲ್ಲಿ ಮಂಜೂರಾಗಿದೆ? ಎಷ್ಟು ಅದರಲ್ಲಿ ಖರ್ಚಾಗಿದೆ? ಎಷ್ಟು ಉಳಿದಿದೆ ಎನ್ನತಕ್ಕಂಥ ಸಂಪೂರ್ಣವಾದ ವಿವರಗಳು ಆ ಕಂಪ್ಯೂಟರ್‌ನಿಂದ ಕೆ.ಡಿ.ಪಿ. ಸಭೆಗೆ ದೊರಕುವ ರೀತಿಯ ಸಾಧ್ಯತೆಗಳು ಆಗುತ್ತವೆ. ಆ ರೀತಿ ಮಾಹಿತಿ ದೊರೆತಂತಹ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಏನು ವ್ಯವಹಾರವಾಗಿದೆ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಎಷ್ಟು ಹಣ ಖರ್ಚಾಗಿದೆ? ಜಿಲ್ಲಾ ಪಂಚಾಯಿತಿಗಳಿಂದ ಎಷ್ಟು ಹಣ ಖರ್ಚಾಗಿದೆ ಎನ್ನತಕ್ಕಂಥ ಸಂಪೂರ್ಣವಾದ ಮಾಹಿತಿ ಕೆ.ಡಿ.ಪಿ. ಸಭೆಗೆ ದೊರಕುವ ರೀತಿಯಲ್ಲಿ ಆಗುತ್ತದೆ. ಆ ಸಂದರ್ಭದಲ್ಲಿ ಏನಾದರೂ ವ್ಯತ್ಯಾಸಗಳಾಗಿದ್ದರೆ, ಅದನ್ನು ತಡೆಗಟ್ಟತಕ್ಕಂಥ ಅಥವಾ ಕ್ರಮ ತೆಗೆದುಕೊಳ್ಳಲಿಕ್ಕೂ ಕೂಡ ಅವಕಾಶವಾಗುವಂತಹ ಸಾಧ್ಯತೆಗಳಾಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಅನೇಕ ವಿಚಾರಗಳನ್ನು ಮಾನ್ಯ ಕರಿಯಣ್ಣನವರು ಮತ್ತು ಮಾನ್ಯ ಸಚಿವರು ಹೇಳಿದರು. ಶಾಸಕರು ಕೇವಲ ಮೂರು ತಿಂಗಳಿಗೊಮ್ಮೆ

ಮಾತ್ರ ಕೆ.ಡಿ.ಪಿ. ಮೀಟಿಂಗ್ ಅನ್ನು ಕರೆಯುತ್ತಾರೆ. ಆವತ್ತೇನೋ ಹೇಳುತ್ತೇವೆ, ಒದರಾಡುತ್ತೇವೆ ಮತ್ತು ಹೋಗುತ್ತೇವೆ. ಪಂಚಾಯಿತಿಯಲ್ಲಿ ಒಂದು ಚುನಾಯಿತ ವ್ಯವಸ್ಥೆ ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಅದರಲ್ಲಿ ಇರತಕ್ಕಂಥವರು ಎಲ್ಲರೂ ಕೂಡ ಆಯೋಗ್ಯರು, ಆಳುವುದಕ್ಕಾಗದವರು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೂ ಕೂಡ ಇವೆಲ್ಲಾ ನಡೆದಿವೆಯಲ್ಲಾ? ಅದೆಲ್ಲವೂ ಇದೆ, ಆದರೂ ಕೂಡ ಇದೆಲ್ಲಾ ನಡೆಯುತ್ತಿದೆ. ಅದನ್ನು ತಪ್ಪಿಸುವುದು ಹೇಗೆ? ಇವತ್ತು ಹಣ ಕೊಡುವಂತಹ ಸರ್ಕಾರ ಅದರ ಬಗ್ಗೆ ನಿಗಾ ಇಡದೇ ಹೋದರೆ ಹೇಗೆ? ಅದು ಹೇಗೋ ನಡೆದುಕೊಂಡು ಹೋಗುತ್ತದೆ. ಚುನಾಯಿತ ಪ್ರತಿನಿಧಿಗಳು ಅಲ್ಲಿದ್ದಾರೆ ಎಂದು ನಂಬಿ ಕುಳಿತುಕೊಂಡರೆ ಹೇಗೆ? ಅದು ಇದ್ದರೂ ಕೂಡ ಅನೇಕ ಅವ್ಯವಹಾರಗಳು ಆಗಿವೆಯಲ್ಲಾ? ನಾನು ಅದಕ್ಕೆ ಅನೇಕ ಉದಾಹರಣೆಗಳನ್ನು ಆಗಲೇ ನೀಡಿದೆನಲ್ಲಾ? ಆಡಿಟ್ ಆಗಿದೆ, ಆದರೆ ಅದಕ್ಕೆ ಉತ್ತರ ಕೊಡಲಿಲ್ಲ. ಅದರ ಬಗ್ಗೆ ಯಾರನ್ನು ಕೇಳುವುದು? ಅಲ್ಲಿನ ಛೇರ್ಮನ್‌ರು ಕೇಳಬೇಕು. ಅವರು ಕೇಳದಿದ್ದರೆ ಅದನ್ನು ಇನ್ನಾರಾರೂ ಕೇಳಬೇಕಲ್ಲವೇ? ಯಾರೂ ಕೂಡ ಇದನ್ನು ಕೇಳುವುದಕ್ಕೆ ಸಾಧ್ಯವಾಗಲಿಲ್ಲ. ಈ ರೀತಿ ನಾವು ಅದರ ಮೇಲೆ ನಿಗಾ ವಹಿಸದೇ ಹೋದರೆ ಎಲ್ಲಾ ಹಣ ಸಾಕಷ್ಟು ಅಪವ್ಯಯವಾಗಲಿಕ್ಕೆ ಸಾದ್ಯವಾಗುತ್ತದೆ. ಇನ್ನು ಪಾರದರ್ಶಕ ಕಾಯ್ದೆಯನ್ನು ಸರ್ಕಾರದವರು ಜಾರಿಗೆ ತಂದಿದ್ದೀರಿ. ಅದರ ಮೂಲಕ ಟೆಂಡರ್ ಇತ್ಯಾದಿಗಳನ್ನು ಬಹಳ ಪಾರದರ್ಶಕವಾಗಿರಬೇಕು ಎನ್ನುವಂತಹ ಬಹಳ ದೊಡ್ಡ ಚಿಂತನೆ ಕಳೆದ ಕೆಲವಾರು ವರ್ಷಗಳಿಂದ ನಡೆಯುತ್ತಿದೆ. ದಯವಿಟ್ಟು ಅದು ಏನಾಗಿದೆ? ಎಂದು ಸರ್ಕಾರದವರು ರಿವ್ಯೂ ಮಾಡಿದ್ದಾರೆಯೇ? ಇದರ ಪರಿಣಾಮ ಏನಾಗಿದೆ ಎನ್ನುವಂತಾದ್ದನ್ನು ರಿವ್ಯೂ ಮಾಡಿದ್ದೀರಾ? ಇಂತಹ ಬಿಲ್‌ವೊಂದನ್ನು ತಂದಿದ್ದೇವೆ, ಅದಕ್ಕೆ ಅಮೆಂಡ್‌ಮೆಂಟ್ ಅನ್ನು ತಂದಿದ್ದೇವೆ, ಅದನ್ನು ಜಾರಿಗೆ ಕೊಟ್ಟಿದ್ದೇವೆ, ಆನಂತರದಲ್ಲಿ ಅದು ಎಲ್ಲಿಗೆ ಹೋಗಿದೆ ಎಂದು ನೋಡಿಯೇ ಇಲ್ಲ. ನನಗೆ ಗೊತ್ತಿದ್ದಂತೆ ಅದರಿಂದ ಏನೂ ವ್ಯತ್ಯಾಸವಾಗಿಲ್ಲ. ನಮ್ಮಲ್ಲಿ ಇರೋರೇ ಸ್ವಲ್ಪ ಜನ ಕಂಟ್ರಾಕ್ಟರ್‌ಗಳು ಮಾತ್ರ. ಅವರೆಲ್ಲಾ ರಿಂಗ್ ಮಾಡಿಕೊಳ್ಳುತ್ತಾರೆ. ಇದಕ್ಕೆ ಒಂದು ಉದಾಹರಣೆಗೆ ಹೇಳುವುದಾದರೆ, ಮೊನ್ನೆ ನಮ್ಮ ಜಿಲ್ಲಾ ಮಂತ್ರಿಗಳು ಬಂದಿದ್ದರು. ಅವರ ಕಡೆಯಿಂದ ಹೇಳಿಸಿ, ಹೈ ಪವರ್ ಕಮಿಟಿಯಲ್ಲಿ ನಾವು ನಿರ್ಣಯ ಮಾಡಿ, ಕೆ.ಪಿ.ಸಿ.ಯಿಂದ ಮುಳುಗಡೆ ರಸ್ತೆವೊಂದಕ್ಕೆ ಇಪ್ಪತ್ತೇಳೂವರೆ ಲಕ್ಷ ರೂಪಾಯಿಗಳನ್ನು ಕೊಡಿಸಿದೆವು. ಕೆ.ಪಿ.ಸಿ. ಇಪ್ಪತ್ತೇಳೂವರೆ ಲಕ್ಷ ರೂಪಾಯಿಗಳನ್ನು ನಮ್ಮ ಜಿಲ್ಲಾ ಪಂಚಾಯಿತಿಗೆ ಕೊಟ್ಟಿದೆ. ಅದರ ಟೆಂಡರ್ ಆಯಿತು. ಅದು ಎಷ್ಟಕ್ಕೆ ಆಯಿತು ಎಂದರೆ, 10% above ಎಸ್.ಅರ್. ರೇಟಿಗೆ ಹಾಕಿಕೊಂಡಿದ್ದಾರೆ. ನಾನು 10% above ಹಣವನ್ನು ಯಾರು ಕೊಡುತ್ತಾರೆ, ಟೆಂಡರ್ ಪ್ರೀಮಿಯಮ್ ಯಾರು ಕೊಡುತ್ತಾರೆ ಎಂದು ಕೇಳಿದೆ. ಇದು ಡಿಪಾಸಿಟ್ ಕಾಂಟ್ರಿಬ್ಯೂಷನ್ ಆಗಿದೆ. ಡಿಪಾಸಿಟ್ ಮಾಡಿದ್ದಾರೆ, ಉಳಿದ ಹಣವನ್ನು ಜಿಲ್ಲಾ ಪಂಚಾಯಿತಿಯವರು ಹಾಕಿಕೊಳ್ಳುವುದಿಲ. ಹಾಗಾದರೆ ಎರಡು ಲಕ್ಷದ ಎಪ್ಪತ್ತು ಸಾವಿರ ರೂಪಾಯಿಗಳನ್ನು ಯಾರು ಕೊಡುತ್ತಾರೆ? ಇದನ್ನು ಕೇಳಿದರೆ 'ಇಲ್ಲ' ಎನ್ನುತ್ತಾರೆ. ಕಂಟ್ರಾಕ್ಟರ್‌ಗಳೆಲ್ಲಾ ಸೇರಿಕೊಂಡು ಆಗಲೇ ರಿಂಗ್‌ವೊಂದನ್ನು ಮಾಡಿಕೊಂಡಿದ್ದಾರೆ. ಒಂದು ಪೈಸೆಯನ್ನೂ ಕೂಡ ನಾವು ಕೆ.ಪಿ.ಸಿ.ಯಿಂದಾಗಲೀ ಅಥವಾ ಸರ್ಕಾರದಿಂದಾಗಲೀ ಆ ರಸ್ತೆಗೆ ಕೊಡುವುದಕ್ಕಾಗುವುದಿಲ್ಲ ಎಂದು ನಾನು ಹೇಳಿದೆ 10% above ನೀವು ಹಾಕಿಕೊಂಡಿದ್ದರೆ ನೀವು 2 ಕಿಲೋಮೀಟರ್ ರಸ್ತೆಯನ್ನು ಕಡಿಮೆ ಮಾಡಬೇಕಾಗುತ್ತದೆ. ಅದಕ್ಕೆ ನಾನು ಒಪ್ಪುವುದಿಲ್ಲ ಎಂದು ಹೇಳಿದೆ. ಏಕೆಂದರೆ ನಾವು ಜನರಿಗೆ ಇಲ್ಲಿಂದ ಇಲ್ಲಿಯವರೆಗೆ ರಸ್ತೆ ಮಂಜೂರಾಗಿದೆ ಎಂದು ಹೇಳಿರುತ್ತೇವೆ. ಅವರು ರಿಂಗ್ ಮಾಡಿಕೊಂಡಿದ್ದರು. ನೀವು

ರಿಂಗ್ ಮಾಡಿಕೊಂಡು ಹಣ ಹಂಚಿಕೊಂಡಿದ್ದರೆ. ಅದನ್ನು ವಾಪಸ್ ಕೊಡದ್ದೇ ಹೋದರೆ ನಿಮ್ಮನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸುವುದಕ್ಕೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡುತ್ತೇನೆ ಎಂದು ನಾನು ಅವರಿಗೆ ಹೇಳಿದೆ. ಬಹುಶಃ ನಾನು ಹೇಳಿದ್ದರೂ ಕೂಡ ಅವರನ್ನು ಬ್ಲ್ಯಾಕ್ ಲಿಸ್ಟ್‌ಗೆ ಸೇರಿಸುವುದಕ್ಕೆ ಆಗುತ್ತಿತ್ತು ಎಂದು ಹೇಳುವುದಕ್ಕಾಗುವುದಿಲ್ಲ. ಅಂತಹ ಒಂದು ವ್ಯವಸ್ಥೆಯನ್ನು ಅವರು ನಾನು ಕೇಳುವವರೆಗೆ ಮಾಡಿಕೊಂಡಿದ್ದರು. ಆಮೇಲೆ ಅವರೆಲ್ಲರೂ ಕೂಡ ಚೆಕ್ಕಿನ ಹಣವನ್ನು ವಾಪಸ್ ಕೊಟ್ಟರು. ಇಪ್ಪತ್ತೇಳೂವರೆ ಲಕ್ಷ ರೂಪಾಯಿಗಳ ಎಸ್.ಆರ್. ರೇಟಿಗೆ ಒಪ್ಪಿಕೊಂಡು ಅಗ್ರಿಮೆಂಟ್ ಬರೆದು ಕೊಟ್ಟರು. ಎಲ್ಲಾ ಕಡೆ 10 ಪರ್ಸೆಂಟ್, 15 ಪರ್ಸೆಂಟ್ ಮೇಲ್ಪಟ್ಟು ಎಲ್ಲರೂ ಸೇರಿ ಹಂಚಿಕೊಳ್ಳುವುದು. ಈ ರೀತಿಯಲ್ಲಿ ಸರ್ಕಾರದ ಹಣ 10 ರಿಂದ 15 ಪರ್ಸೆಂಟ್ ಟೆಂಡರ್ ಆಗುವ ಸಂದರ್ಭದಲ್ಲಿ ಕೆಲವರಿಗೆ ಹಂಚಿಕೆ ಆಗುತ್ತದೆ, ಕಾಂಟ್ರಾಕ್ಟ್ ಮಾಡಬೇಕು ಎನ್ನುವುದಕ್ಕೋಸ್ಕರ ಕಾಂಟ್ರಾಕ್ಟ್ ಮಾಡುವುದು ಅಲ್ಲ. ಕಾಂಟ್ರಾಕ್ಟ್ ರಿಜಿಸ್ಟ್ರೇಷನ್ ಮಾಡುವುದು ಏಕೆಂದರೆ, ಟೆಂಡರ್‌ಗೆ ಹೋದರೆ ಲಾಭ ಇದೆ ಎಂದು ಕಾಂಟ್ರಾಕ್ಟ್ ರಿಜಿಸ್ಟರ್ ಮಾಡಿಸುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಉಪಾಧ್ಯಕ್ಷರೆ, ಕಾಂಟ್ರಾಕ್ಟ್‌ನಲ್ಲಿ ಮಾನ್ಯ ಕೃಷ್ಣರವರ ಸರ್ಕಾರ ಬಂದ ಮೇಲೆ ದೊಡ್ಡ ನೀರಾವರಿಯಲ್ಲಿ ನಮ್ಮ ಸರ್ಕಾರ ಇದ್ದಾಗ 55 ಪರ್ಸೆಂಟ್ ಮೇಲೆ ಇತ್ತು. 55 ಪರ್ಸೆಂಟ್ ಕಡಿಮೆಯಾಗಿದೆ. ಇದಕ್ಕೆ ನಿಜವಾಗಿ ಒಂದು ಎನ್‌ಕ್ವೈರಿ ಮಾಡಬೇಕು. ನೂರಕ್ಕೆ ನೂರರಷ್ಟು ಹಣ ಪೋಲು ಮಾಡುವ ಅಧಿಕಾರಿಗಳು ಯಾರೇ ಇರಲಿ, ಅಂತಹ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಿದರೆ ಮುಂದೆ ಇಂತಹವು ಮರುಕಳಿಸದ ಹಾಗೆ ಇರುತ್ತವೆ. ಇದು ನಿಮ್ಮ ಇಲಾಖೆಯಲ್ಲಿ ಹೀಗಾಗಿದೆ, ಹಿಂದೆ ಇದ್ದುದ್ದು ಇವತ್ತಿಗೂ ವ್ಯತ್ಯಾಸ ನೋಡಿದರೆ 100 ಪರ್ಸೆಂಟ್ ವ್ಯತ್ಯಾಸ ಇದೆ. 56–57 ಇದ್ದುದ್ದು ಟೆಂಡರ್ ಅದೇ ಕೆಲಸಕ್ಕೆ 56–55 ಕಡಿಮೆ ಆಗಿದೆ. ಇದಕ್ಕೆ ಏನು ವ್ಯತ್ಯಾಸ, ಈ ಸರ್ಕಾರ ಅದರ ಮೇಲೆ ಗಮನ ಹರಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಶ್ರೀನಿವಾಸಗೌಡರು ಹೇಳಿದರು, ಖಂಡಿತವಾಗಿ ಇದನ್ನು ಎನ್‌ಕ್ವೈರಿ ಮಾಡಿ ಅನೇಕ ವಿಚಿತ್ರ ಸಂಗತಿಗಳು ಬರುತ್ತವೆ. ನಾವು ಪಿಎಸಿ ಕಮಿಟಿಯಲ್ಲಿ ಇದ್ದಾಗ ಕೆಲವು ಕಡೆ ಹೋಗಿ ನೋಡಿದ್ದೇವೆ. ಇದು ಮೇಜರ್ ಇರಿಗೇಷನ್‌ನಲ್ಲಿ ಸಾರೋದ್ಧಾರ ಆಗಿ ನಡೆದಿದೆ ನಾವೂ ಕೂಡ ತಿಳಿದುಕೊಂಡಿದ್ದೇವೆ. 50 ಪರ್ಸೆಂಟ್ ಕಡಿಮೆಯಾಗಿದೆ ಎಂದರೆ, ಒಂದು ಕೋಟಿ ರೂಪಾಯಿ ಟೆಂಡರ್ ಆದರೆ ಕೆಲಸ ಪೂರ್ಣ ಆದಮೇಲೆ ಎಷ್ಟು ಹಣ ಪೇಮೆಂಟ್ ಆಗಬೇಕು, 50 ಲಕ್ಷ ರೂ. ಪೇಮೆಂಟ್ ಆಗಬೇಕು. 4 ಕೋಟಿ ರೂ. ಆಗಿದೆ, ಐದು ಕೋಟಿ ರೂ. ಆಗಿದೆ. ಒಂದು ಕೋಟಿ ರೂಪಾಯಿ 50 ಪರ್ಸೆಂಟ್ ಬಿಲೋ ಹೋದ ಟೆಂಡರ್‌ಗೆ ಮೂರು ಕೋಟಿ ರೂ. ಐದು ಕೋಟಿ ರೂ. ಜಾಸ್ತಿ ಪೇಮೆಂಟ್ ಆಗಿದೆ. ಇದು ಹೇಗಾಗಿದೆ ಎಂದು ಕೇಳಿದರೆ, ಇಲ್ಲಿ ಹಾರ್ಡ್ ರಾಕ್ ಬಂದಿದೆ ಎಂದು ಹೇಳಿದರು. ಇನ್ನೊಂದು ಕಡೆ ಕಂಟ್ರೋಲ್ ಬ್ಲಾಸ್ಟಿಂಗ್ ಮಾಡಬೇಕಾದ ಸಂದರ್ಭ ಬಂದಿತು ಅದಕ್ಕೆ ಹಣ ಜಾಸ್ತಿ ಆಯಿತು ಇದು ಬಹಳ ನಾಟಕೀಯ ಘಟನೆ ಈ ರಾಜ್ಯದಲ್ಲಿ ನಡೆಯುತ್ತಿದೆ. ಪೇಪರ್‌ನಲ್ಲಿ ಹೋಯಿತು, ಇವತ್ತು ಬಹಳ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದ್ದರಿಂದ ಎಲ್ಲ ಗುತ್ತಿಗೆಗಳು ಕೂಡ ಬಿಲೋ ಎಸ್‌ಆರ್ ರೇಟ್‌ಗೆ ಹೋಗುತ್ತವೆ ಎಂದು, ಈ ಪೇಮೆಂಟ್ ಶೇಕಡ 200–300 ಪಟ್ಟು ಜಾಸ್ತಿಯಾಗಿದೆ ಎಂದು ನಾವು ನೋಡಿದ್ದೇವೆ. ನಾನು

ಕೇಳಿದೆ, ಹಾರ್ಡ್ ರಾಕ್ ಬರುತ್ತದೆ, 100 ಮೀಟರ್‌ಗೆ ಒಂದು ಬೋರ್ ಹಾಕಿದ್ದೀರಿ ಎಲ್ಲಿ ಚಾನಲ್ ಹೋಗಿದೆ ಅಲ್ಲಿ ಬೋರ್ ಹಾಕುತ್ತಾ ಹೋಗಿದ್ದೀರಿ ಅಲ್ಲಿ ಬೋರ್‌ನಲ್ಲಿ ಕೆಳಗಡೆ ಏನೇನು ಬರುತ್ತದೆ ಎಂದು ಗೊತ್ತಿದ್ದೂ ಆಗ ಎಸ್ಟಿಮೇಟ್‌ನಲ್ಲಿ ಏಕೆ ಸೇರಿಸಿಲ್ಲಿವೆಂದು ಕೇಳಿದರೆ, ಅದಕ್ಕೆ ಉತ್ತರ ಇಲ್ಲ. ಕಂಟ್ರೋಲ್ ಬ್ಲಾಸ್ಟಿಂಗ್‌ನಲ್ಲಿ ಮನೆಗಳು ಬರುತ್ತವೆ, ಅಲ್ಲಿ ಕಂಟ್ರೋಲ್ ಬ್ಲಾಸ್ಟಿಂಗ್ ಮಾಡಬೇಕಾಗುತ್ತದೆ, ಅದಕ್ಕೆ ಎಕ್ಸ್‌ಟ್ರಾ ಖರ್ಚು ಬರುತ್ತದೆ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಚಾನಲ್ ಹೋಗಿತ್ತು, ಆ ಊರು ಯಾವಾಗ ನಿರ್ಮಾಣವಾಯಿತು, ನಿಮ್ಮ ಚಾನಲ್ ಟೆಂಡರ್ ಆದ ಮೇಲೆ ನಿರ್ಮಾಣವಾಯಿತಾ? 100 ವರ್ಷದ ಹಿಂದಿನಿಂದ ಆ ಊರು ಇತ್ತು. ಪಕ್ಕದಲ್ಲಿ ಚಾನಲ್ ಹೋಗಿದೆ. ಎಸ್ಟಿಮೇಟ್ ಮಾಡುವಾಗ ಊರು ಇತ್ತು. ಎಸ್ಟಿಮೇಟ್‌ನಲ್ಲಿ ಕಂಟ್ರೋಲ್ ಬ್ಲಾಸ್ಟಿಂಗ್‌ಗೆ ಎಷ್ಟು ಎಸ್.ಆರ್. ರೇಟ್ ಎಂದು ಸೇರಿಸಬೇಕಾಗಿತ್ತು ಇದನ್ನು ಕೇಳಿದರೆ ಬಹುಶಃ ನಮ್ಮ ಕೊನೆಯ ಓಟುಗಾರನಿಗೆ ಇದು ಏನು ಎಂಬುದು ಗೊತ್ತಿಲ್ಲ. ಬಹುಶಃ ಗೊತ್ತಾದರೆ ನಮ್ಮ ರಾಜಕಾರಣಿಗಳು ಯಾರೂ ರಸ್ತೆಯಲ್ಲಿ ತಿರುಗಾಡುವ ಹಾಗೆ ಇಲ್ಲ. ನಮ್ಮೆಲ್ಲರನ್ನು ಬಹಳ ಕೆಟ್ಟದಾಗಿ ನೋಡುತ್ತಾನೆ. ಭ್ರಷ್ಟರನ್ನಾಗಿ ನೋಡುತ್ತಾನೆ. ದರೋಡೆಕೋರರಂತೆ ನೋಡುತ್ತಾನೆ. ಅವರಿಗೆ ಪೂರ್ತಿ ವಿಚಾರ ಗೊತ್ತಾಗುವುದಿಲ್ಲ. ಹಾಗಾಗಿ ನಾವು ಸ್ವಲ್ಪ ತಲೆ ಎತ್ತಿಕೊಂಡು ತಿರುಗಬಹುದು. ಇವತ್ತು ಪಾರದರ್ಶಕ ಕಾಯಿದೆಯ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು. ಅದರಲ್ಲಿಯೂ ವಿಶೇಷವಾಗಿ ನಮ್ಮ ಜಿಲ್ಲಾ ಪಂಚಾಯಿತಿ ಟೆಂಡರ್‌ಗಳು ಅಥವಾ ಜಿಲ್ಲ ಪಂಚಾಯಿತಿ ವ್ಯಾಪ್ತಿಯ ಟೆಂಡರ್‌ಗಳು ಯಾವ ರೀತಿ ಆಗುತ್ತವೆ, ಎಸ್‌ಆರ್, ಯಾವ ರೀತಿ ಮಾಡುತ್ತಿದ್ದಾರೆ, ಒಬ್ಬ ಜೆ.ಇ. ಎಸ್ಟಿಮೇಟ್ ಮಾಡುತ್ತಾರೆ. ಮಾಡಿರತಕ್ಕಂತಹ ಎಸ್ಟಿಮೇಟ್‌ಗೆ ಸುಮ್ಮನೆ ಸಿಗ್ನೇಚರ್ ಹಾಕದೆ ಪರ್ಸೆಂಟೇಜ್ ತೆಗೆದುಕೊಂಡು ಸಿಗ್ನೇಚರ್ ಹಾಕುವುದು ಬಿಟ್ಟರೆ ಆ ಎಸ್ಟಿಮೇಟ್ ಸರಿ ಇದೆಯೋ ಇಲ್ಲವೇ ಎಂಬುದನ್ನು ಯಾರೂ ನೋಡುವುದಿಲ್ಲ. ಅಬ್‌ನಾರ್ಮಲ್ ಎಸ್ಟಿಮೇಟ್! ಮಾನ್ಯ ಘೋರ್ಪಡೆ ಸಾಹೇಬರು ಸ್ವಲ್ಪ ಸ್ಯಾಂಪಲ್ ತಂದು ನೋಡಬೇಕು. ಕೆಲವು ಇಂಜಿನಿಯರ್ ಕಮಿಟಿ ಮಾಡಿ, ನಿಮ್ಮ ಎಸ್ಟಿಮೇಟ್‌ಗೆ ಕೆಲವೊಂದು ಜಿಲ್ಲಾ ಪಂಚಾಯತ್‌ನವರು ಏನು ಟೆಂಡರ್ ಕರೆದಿದ್ದಾರೆ, ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಏನು ಟೆಂಡರ್ ಕರೆದಿದ್ದಾರೆ ಯಾವ ರೀತಿ ಎಸ್ಟಿಮೇಟ್ ಆಗಿದೆ ಎಂಬುದನ್ನು ನೋಡಿ. ಮಣ್ಣು ತೆಗೆಯಲಿಕ್ಕೆ ಒಂದು ಎಸ್ಟಿಮೇಟ್, ಚಾನಲ್ ತೋಡಲಿಕ್ಕೆ ಒಂದು ಎಸ್ಟಿಮೇಟ್ ಅದರ ಮಣ್ಣನ್ನು ಎತ್ತಿ ಸಾಗಾಣಿಕೆ ಮಾಡಿ ಬೇರೆ ಕಡೆ ಹಾಕುವುದಕ್ಕೆ ಒಂದು ಎಸ್ಟಿಮೇಟ್, ಇನ್ನೊಂದು ಕಡೆ ಅದೇ ಮಣ್ಣು ತೆಗೆದುಕೊಂಡು ಹೋಗಿ ಒಂದು ಹೊಂಡ ಮುಚ್ಚುವುದಕ್ಕೆ ಅದಕ್ಕೆ ಒಂದು ಎಸ್ಟಿಮೇಟ್. ಲೀಡಿಂಗ್ ಜಾಸ್ತಿ ಕೊಡುತ್ತಾರೆ. ಅದನ್ನು ನೋಡಿದರೆ ನಮ್ಮ ಎಷ್ಟು ಹಣ ಬಂದರೂ ಕೂಡ ನಮ್ಮ ರಾಜ್ಯದ ಸಾರ್ವಜನಿಕರು ಎಷ್ಟೇ ತೆರಿಗೆ ಕೊಡಿ, ನಮ್ಮ ಉದ್ಧಾರ ಆಗುವುದಕ್ಕೆ ಸಾಧ್ಯವಿಲ್ಲ. ಇಂತಹ ಅನೇಕ ಘಟನೆಗಳು ಇವೆ. ಇದನ್ನು ಯಾರಾದರೂ ಕೂತು ಸ್ವಲ್ಪ ರಿವ್ಯೂ ಮಾಡಿದರೆ ಒಳ್ಳೆಯದು. ಸಣ್ಣ ಸಣ್ಣ ಸಂಗತಿ ಎಂದು ನಮಗೆ ಕಾಣಬಹುದು. ನಮ್ಮ ಸೋರಿಕೆಗಳು ಎಲ್ಲಿ ಆಗುತ್ತವೆ ಎಂದು ನಾವು ನೋಡದೆ ಹೋದರೆ ಈ ಸಾರ್ವಜನಿಕ ಹಣಕ್ಕೆ ನಾವು ಗೌರವ ಕೊಟ್ಟ ಹಾಗೆ ಹಾಗಾಗುವುದಿಲ್ಲ. ಕೇಂದ್ರ ಸರ್ಕಾರದ ಬಹಳಷ್ಟು ಹಣ ಇದು ಬಂದಿದ್ದರೂ ಕೂಡ ರಾಜ್ಯ ಸರ್ಕಾರ ಬಿಡುಗಡೆ ಮಾಡದೆ ಆ ಮೇಲೆ ನಮಗೆ ಬರತಕ್ಕಂತಹ ಕೇಂದ್ರ ಸರ್ಕಾರದ ಹಣ ಕಟ್ ಆಗಿರತಕ್ಕಂಥದ್ದು ಉದಾಹರಣೆಗೆ ಜೆಆರ್‌ವೈ, ಐಎವೈ, ಜವಾಹರ ಗ್ರಾಮ ಸಂವೃದ್ಧಿ ಯೋಜನೆ, ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್

ಯೋಜನೆ, ಐಆರ್‌ಡಿಪಿ ಇವೆಲ್ಲವೂ ಕೂಡ ಉದಾಹರಣೆಗೆ ನಮ್ಮ ಗುಲ್ಬರ್ಗ, ಬಿಜಾಪುರ, ಚಿತ್ರದುರ್ಗ, ದಾವಣಗೆರೆ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಐದು ವರ್ಷಗಳಲ್ಲಿ ಇದರಲ್ಲಿ ಖರ್ಚಾಗದೆ ಹಣ ಉಳಿದಿದೆ. ಇದರಲ್ಲಿ ಸಾಕಷ್ಟು ಹಣ ಉಳಿದಿದೆ. ಇದರಲ್ಲಿ ಹಣ ಉಳಿಸಿದ್ದರಿಂದ ಕ್ಲುಪ್ತ ಸಮಯಕ್ಕೆ ಇದನ್ನು ಖರ್ಚು ಮಾಡದೆ ಇರುವುದರಿಂದ ಅವುಗಳನ್ನು ಪಂಚಾಯಿತಿಗಳು ಬಿಡುಗಡೆ ಮಾಡದೆ ಇರುವುದರಿಂದ ಈ ಐದು ಜಿಲ್ಲಾ ಪಂಚಾಯಿತಿಗಳಿಗೆ 30 ಕೋಟಿ ರೂಪಾಯಿ ಹಣ ಕಡಿತವಾಯಿತು. 30 ಕೋಟಿಗೆ ಎಷ್ಟು ಕೆಲಸ ಆಗುತ್ತಿತ್ತು, ಇವತ್ತು ಆ ಭಾಗ ಬರ, ಹಣ ಇಲ್ಲವೆಂದು ಹೇಳುತ್ತಾರೆ. ಇದರಲ್ಲಿ 30 ಕೋಟಿ ರೂಪಾಯಿ ಕಡಿತವಾಗುತ್ತದೆ ಎಂದು ಹೇಳಿದರೆ, ಇದಕ್ಕೆ ಹೊಣೆಗಾರರು ಯಾರು? ಇದನ್ನು ಏಕೆ ಸರಿಯಾದ ಸಮಯಕ್ಕೆ ಬಿಡುಗಡೆ ಮಾಡಲಿಲ್ಲ, ಇದನ್ನು ಗಮನಿಸುವ ಅವಶ್ಯಕತೆ ಇದೆ. ಇಂದಿರಾ ಆವಾಸ್ ಯೋಜನೆ ಕೇಂದ್ರ ಸರ್ಕಾರದಿಂದ ಹಣ ಬಂದರೂ ಕೂಡ ನಮ್ಮ ರಾಜ್ಯ ಸರ್ಕಾರ ಬಿಡಗಡೆ ಮಾಡದೆ ಇದ್ದುದರಿಂದ 8.14 ಕೋಟಿ ರೂ. ಕೇಂದ್ರದ ನೆರವು ಕಡಿತವಾಗಿದೆ. ಇದಕ್ಕೆ ರಾಜ್ಯ ಸರ್ಕಾರದ ಪಾಲು ಸೇರಿಸಬೇಕಾಗಿತ್ತು. ರಾಜ್ಯ ಸರ್ಕಾರದ ಪಾಲನ್ನು ಬಿಡುಗಡೆ ಮಾಡಲಿಲ್ಲ. ಇದರ ಪರಿಣಾಮ ಎಷ್ಟು ಎಂದರೆ 8.14 ಕೋಟಿ ರೂಪಾಯಿ ಬಡವರಿಗೆ ಮನೆ ಕಟ್ಟುವ ಸ್ಕೀಮ್ ಇದರಿಂದಾಗಿ ನಮಗೆ 4,068 ಮನೆಗಳು ಕಳೆದುಕೊಂಡಿದ್ದೇವೆ. ಈ ಮನೆಗಳ ಅಗತ್ಯ ಇರಲಿಲ್ಲವಾ? ಬಡವರಿಗೆ ಮನೆ ಕಟ್ಟಿ ಆಗಿ ಹೋಗಿದೆಯಾ? ನಮ್ಮ ಹತ್ತಿರ ಅಷ್ಟು ಹಣ ಇಲ್ಲ, ಕೇಂದ್ರ ಸರ್ಕಾರ ಕೊಡುತ್ತದೆ ಎಂದು ಹೇಳಿದರೂ ಕೂಡ, ನಮ್ಮ ಪಾಲನ್ನು ತುಂಬದೆ ಇರುವುದರಿಂದ ಇಂದಿರಾ ಆವಾಸ್ ಯೋಜನೆಯಲ್ಲಿ 4068 ಮನೆಗಳು ಬಡವರಿಗೆ ಇಲ್ಲದಾಯಿತು. ಇದಕ್ಕೆ ಯಾರು ಹೊಣೆಗಾರರು? ಇದಕ್ಕೆ ಯಾರು ಜವಾಬ್ದಾರಿ? 4068 ಮನೆಗಳ ಕುಟುಂಬಗಳಿಗೆ ಆದ ನಷ್ಟವನ್ನು ತುಂಬಿ ಕೊಡುವವರು ಯಾರು? ಇವತ್ತು ಆಶ್ರಯದಲ್ಲಿ 10,000 ರೂಪಾಯಿ ಸಾಲ 10,000 ರೂಪಾಯಿ ವಾಪಸ್ ಕೊಡುವುದು ಆದರೆ, ಇಂದಿರಾ ಆವಾಸ್‌ನಲ್ಲಿ ಸಂಪೂರ್ಣ ಹಣ ಅನುದಾನ ಉಚಿತ. ಹಾಗಾಗಿ ಈ ಬಡವರು ವಾಪಸ್ ಕೊಡುವುದು ಇಲ್ಲ. ಪೂರ್ತಿ ಸಬ್ಸಿಡಿ. ಇಂತಹ 4068 ಮನೆಗಳನ್ನು ಇವತ್ತು ರಾಜ್ಯ ಸರ್ಕಾರ ಕಳೆದುಕೊಂಡಿದೆ. ಇದಕ್ಕೆ ಯಾರು ಹೊಣೆಗಾರರು?

ಶ್ರೀ ಕರಿಯಣ್ಣ: ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಕಳೆದ ವರ್ಷದ್ದು ಹಣ ಬಂದಿಲ್ಲ ಈ ವರ್ಷದ್ದೂ ಹಣ ಬಂದಿಲ್ಲ, ಮನೆಗಳು ಬೀಳುತ್ತಾ ಬಂದಿವೆ. ಇಂದಿರಾ ಆವಾಸ್‌ದು ಹಣ ಬಂದಿಲ್ಲ, ಬಂದಿದ್ದರೆ ಆಶ್ರಯಕ್ಕೆ. ನಾವೂ ರಿವ್ಯೂ ಮಾಡಿದ್ದೇವೆ, ನೀವೂ ರಿವ್ಯೂ ಮಾಡಿ ನೋಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್: ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗಬೇಕು. ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸ್ನೇಹಿತರು ಹಾಗೂ ಶಾಸಕರಾದ ಜ್ಞಾನೇಂದ್ರರವರು ಮಾತನಾಡುವುದರಲ್ಲಿ ಬಹಳ ನಿಸ್ಸೀಮರು. ಅದರಲ್ಲಿ ಏನೂ ಮುಚ್ಚುಮರೆ ಇಲ್ಲ; ಆಳುವ ಸಂದರ್ಭದಲ್ಲಿ ಹೇಗೆ ಆಳುತ್ತಿದ್ದಾರೆಂದರೆ, ತಾನು ಮಾಡಿದ ತಪ್ಪಿಗೆ ನನ್ನನ್ನು ಹೊಣೆಗಾರರನ್ನಾಗಿ ನನ್ನನ್ನೂ ಜವಾಬ್ದಾರನನ್ನಾಗಿ ಮಾಡುತ್ತಿದ್ದಾರೆ. ಮಾನ್ಯ ಕರಿಯಣ್ಣನವರು ಸರಿಯಾಗಿ ಹೇಳಿದರು. ಅವರೂ ಈ ಸದನದ ಸದಸ್ಯರು, ನಾನು ವಸತಿ ಸಚಿವ.

4.40 ಪಿ.ಎಂ.

ಎಲ್ಲಾ ಶಾಸಕರು ಇಲ್ಲಿ ಇದ್ದಾರೆ. ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಎರಡು ವರ್ಷದ ಹಣ ಬರದೇ ಇರುವುದಕ್ಕೆ ಯಾರು ಕಾರಣಕರ್ತರು ಎನ್ನುವ ಪ್ರಶ್ನೆಯನ್ನು ಅವರು ಹೇಳುತ್ತಾರೆ. ಇದಕ್ಕೆ ಯಾರು ಜವಾಬ್ದಾರರು ಎನ್ನುವ ಒಂದು ಪ್ರಶ್ನೆ. ಯುಟಿಲೈಸೇಶನ್ ಸರ್ಟಿಫಿಕೇಟ್ ಕೊಟ್ಟು ಎರಡು ವರ್ಷವಾಯಿತು. ಪದೇ ಪದೇ ನಾವು ಒತ್ತಾಯ ಮಾಡುತ್ತಿದ್ದೇವೆ, ತಾಲ್ಲೂಕು ಪಂಚಾಯಿತಿ ಸಭೆಗಳಲ್ಲಿ, ಆಶ್ರಯ ಸಮಿತಿ ಸಭೆಗಳಲ್ಲಿ, ಜಿಲ್ಲಾ ಪಂಚಾಯಿತಿ ಸಭೆಗಳಲ್ಲಿ ಈ ಹಣ ಬಂದಿಲ್ಲ, ರಾಜ್ಯ ಸರ್ಕಾರದಿಂದ ಪ್ರಸ್ತಾವನೆಯನ್ನು ನಾವು ಕಳುಹಿಸಿ ಕೊಟ್ಟಿದ್ದೇವೆ. ದಯಮಾಡಿ ತಮ್ಮ ಪ್ರಭಾವವನ್ನು ನನ್ನ ಮೇಲೆ ಏನು ಇಲ್ಲಿ ಬೀರುತ್ತಿದ್ದೀರಿ ಇದೇ ಪ್ರಭಾವವನ್ನು ಕೇಂದ್ರ ಸರ್ಕಾರದವರ ಮೇಲೆ ಬೀರುವುದರ ಮುಖಾಂತರ ದಯಮಾಡಿ ಈ ಹಣವನ್ನು ತಾವು ಒದಗಿಸಿಕೊಟ್ಟರೆ ಈ ರಾಜ್ಯದ ಬಡ ಜನರಿಗೆ, ವಸತಿ ಹೀನರಿಗೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆಂದು ಮಾನ್ಯ ಸದಸ್ಯರಲ್ಲಿ ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ಈ ವರದಿ ನನ್ನದಲ್ಲ. ನಾನು ಉದ್ದೇಶಪೂರ್ವಕವಾಗಿ ಹೇಳಿದ ಮಾತು ಇದಲ್ಲ. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ವರದಿಯಲ್ಲಿರುವುದನ್ನು ನಾನು ಈಗ ಓದುತ್ತೇನೆ. ಪುಟ ಸಂಖ್ಯೆ 32ರಲ್ಲಿ ಏನು ಹೇಳಿದ್ದಾರೆ ಎಂದರೆ 2000–2001 ರಲ್ಲಿ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಆರಂಭಿಕ ಶಿಲ್ಕು ಅಧಿಕವಾಗಿದ್ದರಿಂದ ಅಂದರೆ ಹಿಂದಿನ ವರ್ಷದಲ್ಲಿ ಹಣ ಖರ್ಚು ಮಾಡದೇ ಇಗುವುದರಿಂದ ರಾಜ್ಯದ ಪಾಲಿನ ಹಣ ಬಿಡುಗಡೆಯಲ್ಲಿ ಕಡಿಮೆಯಾದ್ದರಿಂದಾಗಿ ನಷ್ಟವಾದ ಕೇಂದ್ರದ ನೆರವು 813.67 ಲಕ್ಷ ರೂಪಾಯಿಗಳು, ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಉದ್ದೇಶಿತ ಫಲಾನುಭವಿಗಳಿಗೆ 4068 ಮನೆಗಳನ್ನು ನಿರ್ಮಿಸಬಹುದಾಗಿತ್ತು ಎಂದು ಸಿ.ಎ.ಜಿ. ಯವರು ಹೇಳಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್: ತಾವು ಓದುತ್ತಿರುವಂಥ ವರದಿಯನ್ನು ನಾನು ಒಪ್ಪುತ್ತೇನೆ. ಆದರೆ ಇಂದಿರಾ ಆವಾಸ್ ಯೋಜನೆಯಲ್ಲಿ ಗುರಿ ನಿಗದಿಪಡಿಸುವಂಥದ್ದು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆಯೋ ಅಥವಾ ಕೇಂದ್ರ ಸರ್ಕಾರಕ್ಕೆ ಅಧಿಕಾರವಿದೆಯೋ ಎಂಬ ಬಗ್ಗೆ ದಯಮಾಡಿ ತಾವು ಹೇಳಬೇಕು. ಏಕೆಂದರೆ ಈಗ ಇಲ್ಲಿ ಎಲ್ಲಾ ಶಾಸಕರುಗಳು ಇದ್ದೇವೆ. ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಜಿಲ್ಲಾ ಪಂಚಾಯಿತಿಗೆ ಒಂದೇ ಕಂತಿನಲ್ಲಿ ಇಷ್ಟು ಮನೆ ಆ ಜಿಲ್ಲಾ ಪಂಚಾಯಿತಿಗೆ ನೀಡಲಾಗಿದೆ ಎಂದು ಹೇಳಿ ಕೇಂದ್ರ ಸರ್ಕಾರದವರು ನೇರವಾಗಿ ಗುರಿಯನ್ನು ನಿಗದಿಪಡಿಸುವಂಥದ್ದು. ರಾಜ್ಯ ಸರ್ಕಾರ ನಿಗದಿಪಡಿಸುವಂಥದ್ದಲ್ಲ. ಒಟ್ಟಾಗಿ ಬಂದಂಥ ಮನೆಗಳನ್ನು ಜಿಲ್ಲಾವಾರು ಹಂಚಿಕೆ ಮಾಡುವಂಥ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿಗೆ ನೀಡುವಂಥ ಅಧಿಕಾರ ಮಾತ್ರ ನಮಗೆ ಇದೆಯೇ ಹೊರತು ಇಷ್ಟೇ ಎಂದು ನಿಗದಿಪಡಿಸುವಂಥ ಅಧಿಕಾರ ನಮಗಿಲ್ಲ. ಅದ ನೇರವಾಗಿ ಕೇಂದ್ರ ಸರ್ಕಾರಕ್ಕೆ ಮಾತ್ರ ಅಧಿಕಾರ ಇರುವಂಥದ್ದು. ದಯಮಾಡಿ ಅದೇ ಪುಸ್ತಕದಲ್ಲಿ ನಮೂದಿಸಿರುವಂಥದ್ದನ್ನು ತಾವು ನೋಡಬೇಕು.

ಶ್ರೀ ಆರಗ ಜ್ಞಾನೇಂದ್ರ: ನಾನು ಅದನ್ನೇ ಹೇಳಿದ್ದು.

ಶ್ರೀ ಸಿ.ಆರ್. ಸಗೀರ್ ಅಹಮದ್: ಇದರಲ್ಲಿ ನಮ್ಮ ತಪ್ಪು ಇಲ್ಲ. ಅವರು ನಿಗದಿಪಡಿಸಬೇಕಾದಂಥ ಮನೆಗಳ ಅಂಕಿ ಸಂಖ್ಯೆಗಳನ್ನು ತಾವು ಮಾಡಿಸಬೇಕಾದ್ದು ಕೇಂದ್ರ ಸರ್ಕಾರದಿಂದ. ಕೇಂದ್ರ ಸರ್ಕಾರ ಏನು ಬಿಡುಗಡೆ ಮಾಡಿಕೊಡಬೇಕಾಗಿತ್ತೋ ಅದನ್ನು ಬಿಡುಗಡೆ

ಮಾಡದೇ ಇರುವುದರಿಮ ಅಷ್ಟು ದುಡ್ಡು ಹೋಗಿದೆ ಎನ್ನುವ ವಿಚಾರವಿದೆಯೇ ವಿನಃ ನಾವು ಅಷ್ಟು ಮನೆಗಳನ್ನು ಕೊಡಿ ಎನ್ನುವ ಪ್ರಸ್ತಾವನೆಯನ್ನು ಈಗಲೂ ಕಳುಹಿಸಿಲ್ಲ, ಮುಂದೆಯೂ ಕಳುಹಿಸುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ನಿಗದಿಪಡಿಸಿ ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡಿದರೂ ಕೂಡ ಆಯಾಯ ವರ್ಷದ್ದನ್ನು ಆಯಾಯ ವರ್ಷದಲ್ಲಿಯೇ ನೀವು ಖರ್ಚು ಮಾಡದೇ ಎಕ್ಸೆಸ್ ಉಳಿಸಿಕೊಂಡಿದ್ದೀರಿ. ಇದು ನಾನು ಹೇಳುತ್ತಿರುವ ಮಾತಲ್ಲ. ನಾನು ಯಾವುದೋ ಹೊಸ ರಿಪೋರ್ಟ್‌ನ್ನು ತರಲಿಲ್ಲ. ನಿಮ್ಮ ಸರ್ಕಾರದವರೇ ನಮಗೆ ಕೊಟ್ಟದ್ದು. ಶಾಸಕರ ಭವನದಲ್ಲಿರುವ ನಮ್ಮ ಕೊಠಡಿಗಳಿಗೆ ಹಾಕಿರುವ ಪುಸ್ತಕ ಇದು. ಅದನ್ನೇ ನಾನು ತೆಗೆದುಕೊಂಡು ಓದಿಕೊಂಡು ಬಂದಿದ್ದೇನೆ. ನಾನೇನಾದರೂ ಬೇರೆ ಪುಸ್ತಕ ಸೃಷ್ಟಿ ಮಾಡಿದ್ದೀನೆಯೇ?

ಶ್ರೀ ಸಿ.ಆರ್. ಸಗೀರ್ ಅಹಮದ್: ನಮ್ಮ ಸರ್ಕಾರ ಬಂದಾಗಿನಿಂದ ಇವೊತ್ತಿನವರೆಗೆ ಕೇಂದ್ರ ಸರ್ಕಾರದವರು ಎಷ್ಟು ಮನೆಗಳನ್ನು ಅಧಿಕೃತವಾಗಿ ನಮಗೆ ಕೊಟ್ಟಿದ್ದಾರೆ ಎನ್ನುವ ಮಾಹಿತಿಯನ್ನು ನಾನು ನಿಮಗೆ ಒದಗಿಸಿಕೊಡುತ್ತೇನೆ. ಸ್ವಾಮಿ, ನನ್ನ ಕ್ಷೇತ್ರವಲ್ಲ, ನನ್ನ ಕ್ಷೇತ್ರ ಹಾಗೂ ತಮ್ಮ ಕ್ಷೇತ್ರಕ್ಕೂ ಕೇಂದ್ರ ಸರ್ಕಾದವರು ಇಂದಿರಾ ಆವಾಸ್ ಯೋಜನೆ ಮನೆಗಳನ್ನು ಅಲಾಟ್ ಮಾಡಿದ್ದಾರೆ. ಆದರೆ ಇವೊತ್ತಿನವರೆಗೆ ದುಡ್ಡು ಬಂದಿಲ್ಲ ಸ್ವಾಮಿ. ನಿಮ್ಮ ತಾಲ್ಲೂಕು ಪಂಚಾಯತಿಯದ್ದೇ ಮಾಹಿತಿಯನ್ನು ತೆಗೆದುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್: ಹಾಗಾದರೆ ಸಿ.ಎ.ಜಿ.ಯವರು ಕೊಟ್ಟಿರುವ ವರದಿಯನ್ನು ತಪ್ಪು ಎಂದು ಹೇಳುತ್ತೀರೇನು? ಬಹಳ ಲ್ಯಾಪ್ಸ್ ಮಾಡಿದ್ದೀರಿ, ಸುಮ್ಮನೆ ಹೇಳಿದರೆ ಉಪಯೋಗವಿಲ್ಲ.

ಶ್ರೀ ಹೆಚ್.ಎಂ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಯಾವ ಕ್ಷೇತ್ರದಲ್ಲೂ ಕೂಡ ಇಂದಿರಾ ಆವಾಸ್ ಯೋಜನೆಗೆ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ ಆಗಿಲ್ಲ. ಕಳೆದ ನಾಲ್ಕು ವರ್ಷಗಳಿಂದ ನಾವು ಕೇಳುತ್ತಿದ್ದೇವೆ. ಆದರೆ ಹಣ ಬಂದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್: ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ದುಡ್ಡು ಬಂದಿಲ್ಲ. ನೀವು ನೋಡಿಕೊಂಡಿಲ್ಲ ಅಷ್ಟೆ. ಅಲಾಟ್‌ಮೆಂಟ್ ಮಾಡಿದ್ದಾರೆ, ಆದರೆ ಇಲ್ಲಿಯವರೆಗೆ ದುಡ್ಡು ಬಂದಿಲ್ಲವೆನ್ನುವ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಈಗಲೂ ನಾನು ಹೇಳುತ್ತೇನೆ. ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಅಲಾಟ್‌ಮೆಂಟ್ ಮಾಡಿದ್ದಾರೆ. ಆದರೆ ಹಣ ಬಂದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ನಿಮ್ಮ ವಾದ ವಿತಂಡ ವಾದವಾಗಿದೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ನಾನು ಕನ್ನಡದಲ್ಲಿಯೇ ಓದಿದ್ದೇನೆ. ಇನ್ನೊಂದು ಬಾರಿ ಕನ್ನಡದಲ್ಲಿಯೇ ಓದಬೇಕು ಎಂದರೆ ನಾನು ಓದುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಸಿ.ಎ.ಜಿ. ವರದಿಯಲ್ಲಿ ಹೇಳಿದ್ದಾರೆ. ಹೀಗೆ ಹೇಳಿದ್ದರೂ ಏನೋ ಒಂದು ಉತ್ತರ ಕೊಡುತ್ತೀರಲ್ಲ ನೀವು.

ಶ್ರೀ ಸಿ.ಆರ್. ಸಗೀರ್ ಅಹಮದ್: ನಾನು ಹೇಳುತ್ತಿದ್ದೇನಲ್ಲಾ ಸ್ವಾಮಿ. ಮನೆ ಅಲಾಟ್‌ಮೆಂಟ್ ಮಾಡಿದ್ದಾರೆ, ಆದರೆ ಹಣ ಬಂದಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಈಗ ಅನಾವಶ್ಯಕವಾಗಿ ಇವರು ವಾದ ಮಾಡುತ್ತಿದ್ದಾರೆ. ತಾವು ತಪ್ಪು ಮಾಡಿದ್ದೇವೆಂದು ಒಪ್ಪಿಕೊಳ್ಳುವ ಔದಾರ್ಯ ಅವರಿಗೆ ಇಲ್ಲ ಎಂದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ನಾನು ವರದಿಯಲ್ಲಿರತಕ್ಕಂಥದ್ದನ್ನು ಓದಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್: ನೀವು ಹೇಳಿದ ತಕ್ಷಣವೇ ತಪ್ಪು ಮಾಡಿದ್ದೇವೆಂದು ನಾವು ಒಪ್ಪಿಕೊಳ್ಳುವುದಕ್ಕಾಗುತ್ತದೆಯೆ? ಒಳ್ಳೆ ಕಥೆ ಹೇಳ್ತೀರಲ್ಲಾ. ನಾವು ತಪ್ಪು ಮಾಡಿಲ್ಲ ಎಂದೇ ವಾದ ಮಾಡುತ್ತಿದ್ದೇನೆ. ಕೇಂದ್ರ ಸರ್ಕಾರದವರು ಏನು ಮನೆಗಳನ್ನು ಬಿಡುಗಡೆ ಮಾಡಿಕೊಡಬೇಕಾಗಿತ್ತೋ ಅದನ್ನು ಮಾಡಿಕೊಟ್ಟಿದ್ದಾರೆ, ಆದರೆ ಹಣ ಬಿಡುಗಡೆಯಾಗಿಲ್ಲ. ಇನ್ನೂ ಏನನ್ನು ನಾನು ಹೇಳಲಿ?

ಶ್ರೀ ಆರಗ ಜ್ಞಾನೇಂದ್ರ: ಆದರೆ ಹಣ ನಿಮ್ಮದು ಆರಂಭಿಕ ಶಿಲ್ಕು ಹೆಚ್ಚಿತ್ತು. ಹಿಂದಿನ ವರ್ಷದಲ್ಲಿ ನೀವು ಹಣವನ್ನು ಖರ್ಚು ಮಾಡಿರಲಿಲ್ಲ. ಅದಕ್ಕಾಗಿ ಅದರ ಆಧಾರದ ಮೇಲೆ ನಮಗೆ ಎಂಟು ಕೋಟಿ ರೂ. ಚಿಲ್ಲರೆ ಹಣವನ್ನು ಕಡಿಮೆ ಮಾಡಿದ್ದರಿಂದಾಗಿ...

ಶ್ರೀ ಕರಿಯಣ್ಣ: ಅಲ್ರಿ ನೀವೇ ಜಿಲ್ಲಾ ಪಂಚಾಯತಿಯಲ್ಲಿ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಹಣ ಬಂದಿಲ್ಲವೆಂದು ವಾದವನ್ನು ಮಾಡಿದ್ದೀರಿ. ಏತಕ್ಕಾಗಿ ಹಣ ಬಂದಿಲ್ಲವೆಂದು ವಾದ ಮಾಡಿದ್ದೀರಿ. ಇನ್ನು ರಾಷ್ಟ್ರೀಯ ಕುಟುಂಬ ಪರಿಹಾರ ನಿಧಿ, ಗಂಡ ಸತ್ತು ಹೋದರೆ ಹೆಂಡತಿಗೆ ಪರಿಹಾರ ಕೊಡಬೇಕಲ್ಲಾ, ಅದರಲ್ಲೂ ಎರಡು ವರ್ಷದಿಂದ ಮೂರು ವರ್ಷದಿಂದ ಹಣ ಬಂದಿಲ್ಲ. ಸುಮ್ಮನೆ ಏಕೆ ನೀವು ಹೇಳುತ್ತೀರಿ?

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಇವರು ಯಾವುದನ್ನು ಯಾವುದಕ್ಕೋ ಗಂಟು ಹಾಕುತ್ತಿದ್ದಾರೆ. ನಾನು ಇಂದಿರಾ ಆವಾಸ್ ಯೋಜನೆ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್: ಕರಿಯಣ್ಣನವರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಮುನ್ನ ಸಿ.ಎ.ಜಿ. ವರದಿ ತಪ್ಪು ಇದೆ ಎಂದು ಅವರು ಹೇಳಿದರೆ ನಾವು ಒಪ್ಪಿಕೊಂಡು ಬಿಡುತ್ತೇವೆ. ಇದರಲ್ಲಿ ವಾದ ಬೇಡ. ಸಿ.ಎ.ಜಿ. ವರದಿ ತಪ್ಪು ಎಂದು ಮುಖ್ಯಮಂತ್ರಿಗಳು ಹೇಳಿಬಿಟ್ಟರೆ ಸಾಕು. ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ.

ಶ್ರೀ ಕರಿಯಣ್ಣ: ಮಾನ್ಯ ಪಾಟೀಲ್‌ರವರೆ, ಜಿಲ್ಲಾ ಪಂಚಾಯಿತಿಯಲ್ಲಿ ರಿವ್ಯೂ ಮಾಡುತ್ತೀರಿ ನೀವು, ಕೆ.ಡಿ.ಪಿ. ಮೀಟಿಂಗ್‌ನಲ್ಲಿ ತಾವೂ ರಿವ್ಯೂ ಮಾಡುತ್ತೀರಿ, ಇಂದಿರಾ ಆವಾಸ್ ಯೋಜನೆ ಮತ್ತು ರಾಷ್ಟ್ರೀಯ ಕುಟುಂಬ ಪರಿಹಾರ ನಿಧಿ ಬಗ್ಗೆ ರಿವ್ಯೂ ಮಾಡುತ್ತೀರಿ. ಮಂತ್ರಿಗಳಾಗಿ ಕೆಲಸ ಮಾಡಿರುವ ತಮಗೆ ಅಷ್ಟು ಮಾಹಿತಿ ಗೊತ್ತಿರುವುದಿಲ್ಲವೆ ಸ್ವಾಮಿ?

ಶ್ರೀ ಆರಗ ಜ್ಞಾನೇಂದ್ರ: ನಾನು ಓದುತ್ತೇನೆ ಸ್ವಲ್ಪ ತಾಳಿ. ಜಿಲ್ಲಾ ಪಂಚಾಯಿತಿಗಳು ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ನೆರವನ್ನು ಬಿಡುಗಡೆ ಮಾಡಲು ಭಾರತ ಸರ್ಕಾರ ವಿಧಿಸಿದ್ದ ಷರತ್ತುಗಳನ್ನು ಪೂರೈಸಲು ವಿಫಲವಾಗಿದ್ದವು. ಮತ್ತು ಅದರಿಂದಾಗಿ 30.20 ಕೋಟಿ ರೂ. ಕೇಂದ್ರದ ನೆರವನ್ನು ಕಳೆದುಕೊಂಡೆವು ಎಂದು ಮೇಲಿನ ಪ್ಯಾರಾದಲ್ಲಿ ಸರಿಯಾಗಿ ಹೇಳಿದ್ದಾರೆ. ಇದಾದ ಮೇಲೆ 2000–2001ರ ಅವಧಿಯಲ್ಲಿ ಇಂದಿರಾ ಅವಾಸ್ ಯೋಜನೆಯೊಂದರಲ್ಲಿಯೇ ಆರಂಭಿಕ ಶಿಲ್ಕು ಅಧಿಕವಾದ್ದರಿಂದ ಮತ್ತು ರಾಜ್ಯದ ಪಾಲಿನ ಹಣ ಬಿಡುಗಡೆಯಲ್ಲಿ ಕಡಿಮೆಯಾಗಿದ್ದರಿಂದ

ನಷ್ಟವಾದ ಯಾವ ಕೇಂದ್ರದ ನೆರವು ರೂಪಾಯಿ 813.67 ಲಕ್ಷ ರೂಪಾಯಿಗಳಾಗಿತ್ತು, ಅದರಿಂದ ಗ್ರಾಮೀಣ ಪ್ರದೇಶದಲ್ಲಿ ಉದ್ದೇಶಿತ ಫಲಾನುಭವಿಗಳಿಗಾಗಿ 4068 ಮನೆಗಳನ್ನು ನಿರ್ಮಿಸಬಹುದಾಗಿತ್ತು ಎಂದು ಹೇಳಿದ್ದಾರೆ. ಇದನ್ನು ತಮಗೆ ಕಳುಹಿಸಿಕೊಡಲಿ?

ಶ್ರೀ ಸಿ.ಆರ್. ಸಗೀರ್ ಅಹಮದ್: ನಾನೇ ತರಿಸಿಕೊಂಡು ನೋಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ಸಿ.ಎ.ಜಿ.ಯವರು ವರದಿಯನ್ನು ಕೊಟ್ಟರೂ ನಿಮ್ಮ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವುದಿಲ್ಲ. ಹೀಗಾದರೆ ಸಿ.ಎ.ಜಿ. ವರದಿಗೆ ಏನು ಮಹತ್ವ ಕೊಟ್ಟಂತಾಗುತ್ತದೆ. ನಿಮ್ಮ ಅಧಿಕಾರಿಗಳು ಏನು ಮಾಡುತ್ತಿರುತ್ತಾರೆ. ಸಿ.ಎ.ಜಿ. ವರದಿ ಬಂದಮೇಲೂ ಕೂಡ ಅದಕ್ಕೆ ಗಮನ ಕೊಡದ ಅಧಿಕಾರಿಗಳು ಈ ರಾಜ್ಯದಲ್ಲಿದ್ದಾರೆ. ಉತ್ತರವನ್ನೇ ಕೊಟ್ಟಿರುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್: 2001–2002ನೇ ಇಸವಿಯ ಇಂದಿರಾ ಆವಾಸ್ ಯೋಜನೆಗೆ ಮನೆಗಳಿಗೆ ಹಣ ಇನ್ನೂ ಬಂದಿಲ್ಲ. ಇನ್ನು ಯಾವ ಭಾಷೆಯಲ್ಲಿ ಇದನ್ನು ಹೇಳಲಿ. ಆವಾಗ ಆಡಿಟ್‌ಲ್ಲಿ ಫೈನಾನ್ಶಿಯಲ್ ಅಕೌಂಟ್ಸ್ ಇದೆಯಲ್ಲಾ, ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ, ಈಯರ್ ಎಂಡಿಂಗ್‌ನಲ್ಲಿ ಒಂದು ಕಡೆ ಜಮಾ ಆದರೆ ಇನ್ನೊಂದು ಕಡೆ ಖರ್ಚು ಆಗುತ್ತದೆ. ಹಣ ಬರದೇ ಹೋದರೆ ಲುಕ್ಸಾನ್‌ನಲ್ಲಿ ತೋರಿಸುತ್ತಾರೆ; ಲಾಭದಲ್ಲಿ ತೋರಿಸುತ್ತಾರೆ; ತೋರಿಸುವುದಕ್ಕೆ ಹೇಳಿ ಸ್ವಾಮಿ.

ಶ್ರೀ ಎಸ್.ಎಸ್. ಪಾಟೀಲ್: ಹುಡ್ಕೋದಿಂದ ಸಾಲವನ್ನು ತಂದು ಹೆಚ್ಚು ಮನೆಗಳನ್ನು ಕಟ್ಟಿದ್ದೀರಿ. ನಾವು ಯಾವತ್ತೂ ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಮುಕ್ತವಾಗಿ ಬರತಕ್ಕಂಥ ಕೇಂದ್ರ ಸರ್ಕಾರದ ಅನುದಾನವನ್ನು ಬಿಟ್ಟಿದ್ದೀರಿ. ಸಿ.ಎ.ಜಿ. ವರದಿಗೆ ಅನುಸರಣ ವರದಿ ಕಳುಹಿಸುತ್ತೀರಲ್ಲಾ ಅಲ್ಲಿ ನೀವು ಹೇಳಿಬಿಡ್ರಿ. ಸಿ.ಎ.ಜಿ. ವರದಿ ತಪ್ಪು ಕೊಟ್ಟಿದ್ದಿರಿ ಅದು ತಪ್ಪು ಎಂದು ನೀವು ಉತ್ತರ ಕೊಟ್ಟುಬಿಡ್ರಿ.

ಶ್ರೀ ಸಿ.ಆರ್. ಸಗೀರ್ ಅಹಮದ್: ಪಾಟೀಲ್‌ರೆ, ನಿಮಗೂ ಗೊತ್ತು ಆರಗ ಜ್ಞಾನೇಂದ್ರರವರಿಗೂ ನನ್ನದೊಂದು ಪ್ರಶ್ನೆ. ತಮ್ಮ ಕ್ಷೇತ್ರಕ್ಕೆ ಬಂದಿರುವಂಥ ಇಂದಿರಾ ಆವಾಸ್ ಅಲಾಟ್‌ಮೆಂಟ್‌ನಲ್ಲಿ ಎಲ್ಲಾದರೂ ಕಡಿಮೆಯಾಗಿದೆಯೇ ಹೇಳಿ. ಆರ್ಥಿಕ ವರ್ಷದ ಸಾಲಿನಲ್ಲಿಯೇ ದುಡ್ಡು ಬರಬೇಕಾಗಿತ್ತು. ಆವಾಗ ಸಿ.ಎ.ಜಿ.ಯವರೇನಾದರೂ ಜಮಾ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಜ್ಞಾನೇಂದ್ರರವರೆ, ಸಿ.ಎ.ಜಿ. ವರದಿ ಯಾವುದಾದರೂ ಒಂದು ಪರ್ಟಿಕ್ಯುಲರ್ ಇಶ್ಯೂ ಮೇಲೆ observation ಮಾಡಿದರೆ that is not a conclusive proof of an issue ಕೆಲವು ಸಾರಿ ಮಾಹಿತಿಗಳೇ ಸರಿಯಾಗಿ ಸಿಗದೇ ಹೋದರೆ adverse inference draw ಮಾಡಿಕೊಂಡು ಅವರು ವರದಿಯನ್ನು ಕೊಡುವುದಕ್ಕೆ ಅವಕಾಶವಿದೆ. ಕೇಂದ್ರ ಸರ್ಕಾರದ ಸಿ.ಎ.ಜಿ. ಸಂಸ್ಥೆ ಏನಿದೆ ಅದು ಕೊಡತಕ್ಕಂಥ ವರದಿಯೇ ಸಂಪೂರ್ಣವಾಗಿ ನಮಗೆ ಬೈಬಲ್, ಅದರಲ್ಲಿ ಎಲ್ಲಾ ಕರೆಕ್ಟಾಗಿ ಇರುತ್ತದೆ ಎಂದು ನಾವು ಹೇಳುವುದಕ್ಕಾಗುವುದಿಲ್ಲ. It is subject to criticism. ಪುನಃ ಅದನ್ನು ನಾವು ಪಿ.ಎ.ಸಿ. ಕಮಿಟಿಯಲ್ಲಿ ಸಂಪೂರ್ಣವಾಗಿ ಎಳೆ ಎಳೆಯಾಗಿ ಬಿಡಿಸಿ ಅದರ ಸತ್ಯಾಸತ್ಯತೆಯನ್ನು ಪರಿಶೀಲನೆ ಮಾಡುತ್ತೇವೆ. ಅಲ್ಲಿ ಅವರು ಕೊಟ್ಟಿರತಕ್ಕಂಥ ವರದಿಯನ್ನು ಸಂಪೂರ್ಣವಾಗಿ ನಾವು ನಂಬಬೇಕು ಎಂದೇನೂ ಇಲ್ಲ. ಅದನ್ನು ಒಪ್ಪಬೇಕು ಎಂದೇನೂ ಇಲ್ಲ. Sometimes we may differ from their opinion.

ಶ್ರೀ ಶಿವಾನಂದ ಎಸ್. ಪಾಟೀಲ್: ಹಾಗಾದರೆ ಬೋಫೋರ್ಸ್ ಯಾವುದರ ಮೇಲೆ ನಡೆದಿದೆ? ಮಾನ್ಯ ಮುದ್ದಹನುಮೇಗೌಡರೆ, ಅದು ಸಿ.ಎ.ಜಿ. ರಿಪೋರ್ಟ್ ಮೇಲೆ ನಡೆದಿದೆಯೋ ಅಥವಾ ನಮ್ಮ ರಿಪೋರ್ಟ್ ಮೇಲೆ ನಡೆದಿದೆಯೋ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಯಾವುದಾದರೂ ಆಗಲಿ. ನಾನು ಹೇಳುವುದು ಏನೆಂದರೆ ವರದಿ ಬಂದ ತಕ್ಷಣ ಅದು ಕನ್‌ಕ್ಲೋಸಿವ್ ಪ್ರೂಫ್, ಅದನ್ನು ಒಪ್ಪಲೇಬೇಕು ಎಂದೇನೂ ಇಲ್ಲ. ಈಗ ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಸಿ.ಎ.ಜಿ. ವರದಿ ಮೇಲೆ ನಾವು ಚರ್ಚೆ ಮಾಡುತ್ತೇವೆ ತಾನೇ? ನಾವು ಆ ರೀತಿ ಪರಿಶೀಲನೆ ಮಾಡಿದಂಥ ಸಂದರ್ಭದಲ್ಲಿ based on the circumstances, based on the evidence available we may differ from the opinion expressed by the CAG. It is not a conclusive proof. That is my argument.

ಶ್ರೀ ಆರಗ ಜ್ಞಾನೇಂದ್ರ: ಸ್ವಾಮಿ, ನೀವು ಕಾನೂನು ತಜ್ಞರು. ಆದರೆ ಬಹಳ ಕೆಟ್ಟ ಕೇಸ್ ಬಗ್ಗೆ ವಕಾಲತ್ತು ವಹಿಸುತ್ತಿದ್ದೀರಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಸಿ.ಎ.ಜಿ. ವರದಿಯಲ್ಲಿ ಇರತಕ್ಕಂಥಾದ್ದನ್ನೇ ನೋಡಿಕೊಂಡು ನೀವು ಇಂಪೋಸ್ ಮಾಡಿದ್ದರೆ ಈ ತರಹ ತಪ್ಪು ಮಾಡುತ್ತಿರಲಿಲ್ಲ. Government is still at liberty to defend. ನೀವು ವರದಿ ಆಧಾರದ ಮೇಲೆ ಅದು ದೊಡ್ಡ ತಪ್ಪಾಗಿದೆ ಎಂದಲ್ಲ. ಒಂದು ಪ್ರಶ್ನೆಗೆ ಮಾನ್ಯ ಪಾಟೀಲರು, ನೀವು ಉತ್ತರ ಕೊಡುತ್ತಿಲ್ಲ. ನಮಗೆ 98–99, 2000–01ರಲ್ಲಿ ಪ್ರತಿಯೊಂದು ಕ್ಷೇತ್ರಕ್ಕೆ ನಿಗದಿ ಪಡಿಸಿರತಕ್ಕಂಥ ಇಂದಿರಾ ಆವಾಸ್ ಯೋಜನೆಯಲ್ಲಿ ನಮಗೆ ಹಣ ಬಿಡುಗಡೆಯಾಗದೆ ಒಂದೆರಡು ಕಂತು ಕೊಟ್ಟು ಇವತ್ತು ಫಲಾನುಭವಿಗಳು ಅತಂತ್ರವಾಗಿರುವುದು ನಮಗೆಲ್ಲ ಕ್ಷೇತ್ರದಲ್ಲೂ ಅನುಭವ ಕೂಡ ಆಗಿದೆ. ಅದಕ್ಕೆ ಏನು ಹೇಳುತ್ತೀರಿ? Who is responsible for that; where that money has gone? You cannot base your argument completely on CAG's report. Where we can accept, we have to accept it. ಸರ್ಕಾರದ ಲೋಪದೋಷಗಳೇನಾದರೂ ಕಂಡಂತಹ ಸಂದರ್ಭದಲ್ಲಿ ಅದು ಫೇರ್ ಆಗಿದ್ದರೆ ಅದನ್ನು ಒಪ್ಪಬೇಕಾಗುತ್ತದೆ. ಆದರೆ ಹೇಳತಕ್ಕಂಥಾದ್ದನ್ನೆಲ್ಲವನ್ನೂ ಒಪ್ಪಬೇಕು ಎಂದು ಏನಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್: ಅಲ್ಲ ನೀವೇ ಜಡ್ಜ್ ಆಗಿ, ಕಾನ್ಸಿಟಿಟ್ಯೂಷನಲಿ ಕ್ರಿಯೇಟೆಡ್ ಬಾಡಿಯ ವರದಿಯನ್ನು ಒಪ್ಪುವುದಿಲ್ಲವೆಂದರೆ ಯಾರು ಹೇಳಬೇಕು? ನಾವು ಹೇಳಬೇಕಾ?

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ಪಿ.ಎ.ಸಿ. ಕಮಿಟಿಯಲ್ಲಿ ಸಿ.ಎ.ಜಿ ವರದಿ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ. ಯಾವುದಾದರೂ ಅಧಿಕಾರಿಗಳು ವರದಿ ಬಂದಮೇಲೆ ಕ್ರಮ ತೆಗೆದುಕೊಂಡಿದ್ದಾರಾ? ಅದಕ್ಕೆ ಒಂದು ಅವಧಿ ಇದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ತಾವೂ ಕೂಡ ಇವತ್ತು ಪಿ.ಎ.ಸಿ. ಕಮಿಟಿ ಚೇರ್‌ಮನ್ ಆಗಿದ್ದೀರಿ. ನಾನು ಸದಸ್ಯನಿದ್ದೇನೆ. ನಾವು ಹೇಳುವುದೇನೆಂದರೆ ....

ಶ್ರೀ ಕರಿಯಣ್ಣ: ಅದನ್ನು ಇನ್ನೂ ಪರಿಶೀಲನೆ ಮಾಡಬೇಕು. ಅದು ಇನ್ನೂ ಪರಿಶೀಲನೆಯಲ್ಲಿದೆ. ಅದರ ಪರಿಶೀಲನೆ ಮುಗಿದಿಲ್ಲ. ನೀವು ಹೇಳಿದ ಹಾಗೆ ಪರಿಶೀಲನೆ ಮಾಡಿದ ಮೇಲೆ ಸರಿ ತಪ್ಪು ಎನ್ನತಕ್ಕಂಥಾದ್ದು ಬರುವುದು. ಅದು ಇನ್ನೂ ಪರಿಶೀಲನೆಯಲ್ಲಿರುವುದನ್ನು ಓದಿದರೆ ನಾವು ಏನು ಮಾಡೋಣ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ಸಿ.ಎ.ಜಿ ಯವರಿಗೆ ಕೊಡುವಂತಹ ರಿಪೋರ್ಟ್‌ನ್ನು ಯಾರು ಕೊಡುತ್ತಾರೆ? ಕರ್ನಾಟಕ ಸರ್ಕಾರದಲ್ಲಿ ಇರುವಂತಹ ಅಧಿಕಾರಿಗಳೇ ಕೊಡುವುದು. ಅದರ ಬೇಸ್ ಮೇಲೆ ಅವರು ಲೆಕ್ಕಪರಿಶೋಧನೆ ಮಾಡುತ್ತಾರೆ. ಅವರೆ ಬೇರೆ ತೆಗೆದುಕೊಂಡು ಬರುವುದಿಲ್ಲ. ಕೇಂದ್ರ ಸರ್ಕಾರ ಮಾಡದೆ ಇದ್ದರೂ, ಲೆಕ್ಕ ಮಾಡಿದವರು ಯಾರು? ರಾಜ್ಯ ಸರ್ಕಾರ ತಾನೇ ಹಾಗಾದರೆ ಅವರು ಕೊಡಬೇಕಾಗಿತ್ತು. ಹಾಗಿದ್ದರೆ ಏಕೆ ಕೊಟ್ಟಿಲ್ಲ? ಆರಂಭಿಕ ಶುಲ್ಕ ಇನ್ನು 800 ಲಕ್ಷ ರೂಪಾಯಿ ಬಾಕಿ ಇದೆಯೆಂದು ಹೇಳಿದ್ದಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ನಾನು ಹೇಳುವುದು ಸಿ.ಎ.ಜಿ. ವರದಿ ಸಂಪೂರ್ಣವಾಗಿ ಸತ್ಯಕ್ಕೆ ದೂರವಾದುದು ಎಂಬುದು ನನ್ನ ವಾದ ಅಲ್ಲ. ಆದರೆ ಸಿ.ಎ.ಜಿ. ವರದಿಯಲ್ಲಿ ಇರುವಂತಹ ಪ್ರತಿಯೊಂದು ಅಂಶವನ್ನು ಕೂಡ ನಾವು ಒಪ್ಪಿಕೊಳ್ಳಲೇಬೇಕೆಂದೇನೂ ಇಲ್ಲ. We may differ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಉಪಾಧ್ಯಕ್ಷರೆ, ಈ ದೇಶದಲ್ಲಿ ಸಿಎಜಿ ಅಕೌಂಟ್ಸ್ ಅಕೌಂಟಬೆಲಿಟಿ ಈ ದೇಶದಲ್ಲಿ ಆ ಅಕೌಂಟಬಲಿಟಿಯನ್ನೇ ಇರುವುದನ್ನು ನಾವು ಡೌಟ್ ಬಿದ್ದರೆ, ನಮ್ಮ ಸರ್ಕಾರದಲ್ಲಿ ರಾಮರ ಲೆಕ್ಕ ಕೃಷ್ಣರ ಲೆಕ್ಕ ಎಂದು ಏನಾದರೂ ಇಟ್ಟಿದ್ದೀರಾ? ಇದನ್ನು ಪ್ರಶ್ನೆ ಮಾಡಬೇಕಾಗುತ್ತದೆ. ನೀವು ಯಾವಾಗ ಸಿ.ಎ.ಜಿ. ಅಕೌಂಟ್‌ನ್ನು ಆ ಅಕೌಂಟಬಲಿಟಿ ಮೇಲೆ ನಿಮ್ಮ ಅನುಮಾನಗಳನ್ನು ತೋರಿಸಿದಾಗ ಹಾಗಾದರೆ ಎರಡು ಆಡಿಟ್ ಸಿಸ್ಟಂ ಏನಾದರೂ ಈ ಸರ್ಕಾರದಲ್ಲಿ ಅಡಾಫ್ಟ್ ಮಾಡಿಕೊಂಡಿದ್ದೇವಾ ಎಂದು ಹೇಳಬೇಕಾಗುತ್ತದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಹಾಗೆ ಇದ್ದ ಮೇಲೆ ಸಿ.ಎ.ಜಿ. ವರದಿ ಕೊಟ್ಟ ಮೇಲೆ ನೀವು ಏಕೆ ಪುನಃ ಕಮಿಟಿಯಲ್ಲಿ ಚರ್ಚೆ ಮಾಡುತ್ತೀರಿ? ಸಿ.ಎ.ಜಿ. ಯವರು ವರದಿ ಕೊಟ್ಟ ಮೇಲೆ you can simply accept that report. Why do you discuss that report in the PAC? Why do you summon the concerned officer and seek the documents? ವರದಿಯ ಸತ್ಯಾಸತ್ಯತೆ ಬಗ್ಗೆ ನಾನು ಕಾಮೆಂಟ್ಸ್ ಮಾಡುತ್ತಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಮುದ್ದಹನುಮೇಗೌಡರು ಹೇಳುವಂತಾದ್ದು ನೂರಕ್ಕೆ ನೂರು ಸಮಂಜಸ, ಅದು ಸತ್ಯಸಂಗತಿ. ಏಕೆಂದರೆ ಸಿ.ಎ.ಜಿ. ಅವರ ಪರವಾಗಿ ಇದ್ದರೆ, ಅದು ಕನ್‌ಕ್ಲೂಸೀವ್ ಪ್ರೂಫ್. ಸಿ.ಎ.ಜಿ. ಅವರ ಪರವಾಗಿ ಇಲ್ಲದೇ ಇದ್ದರೆ ಅದು ಪರಿಶೀಲನೆಗೆ ತೆಗೆದುಕೊಳ್ಳಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಮಾನ್ಯ ಸದಾನಂದಗೌಡರೇ, ಇದು ವಿತ್ತಂಡ ವಾದ. ವಸ್ತುಸ್ಥಿತಿಯನ್ನು, ನೀವು ಪೊಸಿಷನ್ ಆಫ್ ಲಾ ಅನ್ನು ಅರ್ಥಮಾಡಿಕೊಳ್ಳಬೇಕು.

ಶ್ರೀ ಡಿ.ವಿ. ಸದಾನಂದಗೌಡ: ಪಿ.ಎ.ಸಿ. ಕಮಿಟಿ ಇದೆಯಲ್ಲಾ, ಅದು ಏಕೆ ಇದೆ? ಆ್ಯಕ್ಷನ್ ಟೇಕನ್ ರಿಪೋರ್ಟ್ ಏನಿದೆ ಅದನ್ನು ನಿಮಗೆ ಏನಾದರೂ ಹೆಚ್ಚುಕಡಿಮೆ ಕೊಟ್ಟಿದ್ದಾರೆ,

ಅದನ್ನು ಮತ್ತು ಸಬ್ಸೆಕ್ವೆಂಟ್ ಆಗಿ ಏನು ಮಾಡಿದ್ದೀರಿ ಎಂದು ನೋಡುವುದಕ್ಕೆ ಕೊಟ್ಟಿರುವುದು ಅದು ಕನ್‌ಕ್ಲೂಸೀವ್ ಪ್ರೂಫ್ ಹೌದೋ ಅಲ್ಲವೋ ಎಂದು ಹೇಳುವಂತಹ ವೆರಿಫಿಕೇಷನ್‌ಗೆ ಪಿ.ಎ.ಸಿ.ಗೆ ತರುವಂತಾದ್ದು ಅಲ್ಲ. ತಾವು ಜಡ್ಡ್ ಆಗಿ ಈ ರೀತಿ ಇಂಟರ್‌ಪ್ರಿಟ್ ಮಾಡುವುದಾದರೆ...

SRI S.P. MUDDAHANUME GOWDA: I stand by an argument. ಮಾನ್ಯ ಸದಾನಂದಗೌಡರೆ, ನಾನು ಹೇಳುತ್ತಿರುವುದು, ಆ ವಾದಕ್ಕೆ ನಾನು ಸ್ಟಿಕಾನ್ ಆಗುತ್ತೇನೆ. ನಾನು ಬಹಳ ಸ್ಪೆಸಿಫಿಕ್ ಆಗಿ ಹೇಳುತ್ತಿದ್ದೇನೆ. ನೀವು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಬೆಲ್ಲದ್ ಅವರು ಪಿ.ಎ.ಸಿ. ಕಮಿಟಿ ಚೇರ್‌ಮನ್ ಆಗಿದ್ದಾರೆ. ಆ ಸಿ.ಎ.ಜಿ. ವರದಿಯನ್ನು ಪುನಃ ಕಮಿಟಿ ಮುಂದೆ ತಂದು ಪ್ರತಿಯೊಂದನ್ನು ಪಾರ್ಟ್ ಬೈ ಪಾರ್ಟ್ ನಾವು ತೆಗೆದುಕೊಂಡು ಚರ್ಚೆ ಮಾಡುತ್ತೇವೆ. ಅಧಿಕಾರಿಗಳನ್ನು ಕರೆಸಿ ಅದರ ಸತ್ಯಾಸತ್ಯತೆಯನ್ನು....

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ನಾನು ಕೇಳುತ್ತಿರುವುದು ಪಿ.ಎ.ಸಿ. ಕಮಿಟಿ ರಿಪೋರ್ಟ್ಸ್ ಮೇಲೆ ಆ್ಯಕ್ಷನ್ ತೆಗೆದುಕೊಂಡಿರುವುದು ಯಾವುದಾದರೂ ಘಟನೆಗಳು ಇದೆಯಾ? ಇಲ್ಲಿಯವರೆಗೆ ಪಿ.ಎ.ಸಿ. ಕಮಿಟಿ ರಿಪೋರ್ಟ್ಸ್ ಏನು ಕೊಡುತ್ತಾರೆ ಎಲ್ಲಾ ಸಿ.ಎ.ಜಿ. ವರದಿ ಮೇಲೆ ಕೊಡುತ್ತಾರೆ. ಎಷ್ಟು ಕ್ರಮ ತೆಗೆದುಕೊಂಡಿದ್ದಾರೆ ಹೇಳಿ? ಸಿ.ಎ.ಜಿ. ರಿಪೋರ್ಟ್ ಏಕೆ ಕೊಡಬೇಕು? ಅದರ ಮೇಲೆ ಯಾರು ಕ್ರಮ ತೆಗೆದುಕೊಳ್ಳಬೇಕು? ಪಿ.ಎ.ಸಿ. ಕಮಿಟಿ ರಿಪೋರ್ಟ್ ಮೇಲೆ ಏನೂ ಆ್ಯಕ್ಷನ್ ಆಗಿದೆ?

ಶ್ರೀ ಸಿ.ಆರ್. ಸಗೀರ್ ಅಹಮದ್: ಒಳ್ಳೆ ಕತೆಯಾಯಿತಲ್ಲಾ ಅವರು ಹೇಳಿದ್ದನ್ನು ನಾವು ಕೇಳಬೇಕೆಂದು ಇದೆಯಾ? ಮರು ಪರಿಶೀಲನೆ ಮಾಡುವುದಕ್ಕೆ ಅವಕಾಶ ಇಲ್ಲವೇ?

ಶ್ರೀ ಆರಗ ಜ್ಞಾನೇಂದ್ರ: ನಾನೂ ಕೂಡ ಪಿ.ಎ.ಸಿ. ಚೇರ್‌ಮನ್ ಆಗಿದ್ದೆ. ನಾವು ಅಲ್ಲಿ ರಿವ್ಯೂ ಮಾಡತಕ್ಕದ್ದು ಸಿ.ಎ.ಜಿ. ವರದಿ ಮೇಲೆ, ಸರ್ಕಾರ ಯಾವ ರೀತಿ ಆ್ಯಕ್ಷನ್ ತೆಗೆದುಕೊಂಡಿದೆ ಎಂದು ರಿವ್ಯೂ ಮಾಡುತ್ತೇವೆ. ತಾವೂ ಕೂಡ ಆ ಕಮಿಟಿಗಳಲ್ಲಿ ಕೆಲಸ ಮಾಡಿದ್ದೀರಿ. ನಿಮಗೆ ಎಲ್ಲಾ ಅನುಭವ ಇದೆ. ಇದನ್ನು ನೀವು ಹೇಳುವಂತಾದ್ದು ಸರಿ. ನಮಗೆ ಹಣ ಕಡಿಮೆ ಬಂದಿದೆ ಬಿಡುಗಡೆಯಾಗಿಲ್ಲ. ಅದನ್ನೂ ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಏಕೆ ಹಣ ಬಿಡುಗಡೆಯಾಗಲಿಲ್ಲ? ಹಿಂದಿನ ವರ್ಷದ್ದು ನೀವು ಉಳಿಸಿದ್ದರಿಂದ ಅಷ್ಟು ಹಣ ಕಡಿಮೆ ಹಣವನ್ನು ಕೇಂದ್ರ ಸರ್ಕಾರದವರು ಅಲಾಟ್ ಮಾಡುತ್ತಾರೆ. ಅದನ್ನು ಸಿ.ಎ.ಜಿ. ಹೇಳಿದ್ದಾರೆ. ಹಿಂದಿನ ವರ್ಷ ನೀವು ಖರ್ಚು ಮಾಡಲಿಲ್ಲ. ಓಪನಿಂಗ್ ಬ್ಯಾಲೆನ್ಸ್ ಜಾಸ್ತಿ ತೋರಿಸುತ್ತಿತ್ತು ಅದರ ಆಧಾರದ ಮೇಲೆ ಎಂಟು ಚಿಲ್ಲರೆ ಕೋಟಿ ರೂಪಾಯಿ ಕಡಿತವಾಯಿತು. ಅದಕ್ಕಾಗಿ 4,000 ಚಿಲ್ಲರೆ ಮನೆಗಳು ನಿಮಗೆ ಲ್ಯಾಪ್ಸ್ ಆಯಿತು. ಈಗ ನೀವು ಏನು ವಾದ ಮಾಡುತ್ತೀರಿ? ಮಾನ್ಯ ಮಂತ್ರಿಗಳಾದ ಸಗೀರ್ ಸಾಹೇಬರೆ, ನಾಳೆ ನೀವು ಸ್ವಲ್ಪ ದಿವಸಕ್ಕೆ ಚುನಾವಣೆ ಬಂದಾಗ ಇದೇ ಬಡವರ ಮನೆಗೆ ಹೋಗಿ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಲಿಲ್ಲ, ಅದಕ್ಕಾಗಿ ನಿಮಗೆ ಕೊಡುವುದಕ್ಕಾಗಲಿಲ್ಲವೆಂದು ಹೇಳಿ. ಏಕೆಂದರೆ ನೀವು ಏನು ಹೇಳಿದರೂ ಜನ ಒಪ್ಪಿಕೊಳ್ಳುತ್ತಾರೆ. ಬಡವರು, ಹೆಬ್ಬೆಟ್ಟು ಒತ್ತುವಂತಹ ಜನ, ಇರುವಷ್ಟು ದಿನ ನಿಮ್ಮ ಕಾಂಗ್ರೆಸ್ಸಿನ ಮಾತು ನಡೆಯುತ್ತಾ ಹೋಗುತ್ತದೆ. ನೀವು ಅದಕ್ಕಾಗಿ ಅಧಿಕಾರದಲ್ಲಿ ಇದ್ದೀರಿ. ಜನ ನಿಮಗೆ ಓಟು ಕೊಟ್ಟು ಅಧಿಕಾರಕ್ಕೆ ನಿಮ್ಮನ್ನು ಕಳುಹಿಸಿದಾಗ ನಿಮಗೆ ಈ ಕೆಲಸ

ಮಾಡುವುದಕ್ಕಾಗಲಿಲ್ಲ. ಇದನ್ನೇ ನಾನು ಹೇಳುತ್ತಿರುವಂತಾದ್ದು. ನೀವು ಇವತ್ತು ಆ ಬಡವರಿಗೆ ಕೆಲಸ ಮಾಡಿ ಕೊಡುವುದಕ್ಕಾಗಲಿಲ್ಲವೆಂದಾಗ, ಆ ಬಡವರು ಮನೆ ಇಲ್ಲದ ಜನ ನಿಮಗೆ ಓಟು ಕೊಡಬೇಕಾ?

ಶ್ರೀ ಅಭಯಚಂದ್ರ: ನಿಮಗೆ ಏಕೆ ಓಟು ಕೊಡುವುದಿಲ್ಲ ಅವರು.

ಶ್ರೀ ಸಿ.ಆರ್. ಸಗೀರ್ ಅಹಮದ್: ಸತ್ಯ ಹೇಳಿ ಅವರು ಅಲ್ಲೇ ಉಳಿದಿದ್ದಾರೆ. ಸುಳ್ಳು ಹೇಳಿ ನಾವು ಇಲ್ಲಿ ಉಳಿದಿದ್ದೇವೆ ಎಂದು ಅವರು ಹೇಳುತ್ತಿದ್ದಾರೆ. ನಾವು ಸತ್ಯವನ್ನೇ ಹೇಳುವುದು.

ಶ್ರೀ ಆರಗ ಜ್ಞಾನೇಂದ್ರ: ಇವತ್ತು ಜನರಿಗೆ ಚುನಾವಣೆ ವೇದಿಕೆಯಲ್ಲಿ ನೀವು ಏನು ಬೇಕಾದರೂ ಹೇಳಬಹುದು. ಆದರೆ ಇಲ್ಲಿ ಹೇಳಬೇಡಿ. ನಮ್ಮ ಹತ್ತಿರ ದಾಖಲಾತಿ ಉಂಟು. ಸಿ.ಎ.ಜಿ. ವರದಿ ನಮಗೇ ಅದೇ ಬೈಬಲ್, ಇದೇ ಭಗವದ್ಗೀತೆ, ಕುರಾನ್ ಕೂಡ ಇದೆ, ಈ ಸದನಕ್ಕೆ ಕುರಾನ್ ಹೌದು, ಬೈಬಲ್ ಹೌದು, ಭಗವದ್ಗೀತೆ ಎಲ್ಲಾ ಹೌದು. ಇದನ್ನು ನಾನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಇವತ್ತು ಸಿ.ಎ.ಜಿ. ಒಂದು ಇಲಾಖೆ ನಮ್ಮ ಕಾನ್ಸ್‌ಟಿಟ್ಯೂಷನ್‌ನಲ್ಲಿ ನಿರ್ಮಾಣ ಮಾಡದೇ ಹೋಗಿದ್ದರೆ ಇನ್ನೂ ಏನೇನು ರಂಪವಾಗುತ್ತಿತ್ತೋ ಗೊತ್ತಿಲ್ಲ. ಇದನ್ನು ನಾವು ಇವತ್ತು ಒಪ್ಪಿಕೊಳ್ಳಬೇಕಾಗುತ್ತದೆ. ಪ್ರಾಮಾಣಿಕವಾಗಿ ಒಪ್ಪಿ, ನಿಮ್ಮ ಇಲಾಖಾಧಿಕಾರಿಗಳನ್ನು ಕೂರಿಸಿಕೊಳ್ಳಿ, ಏಕೆ ಖರ್ಚು ಮಾಡಲಿಲ್ಲ ಕೇಳಿ. ಏಕೆ ಹಣ ಬರಲಿಲ್ಲವೆಂದು ಕೇಳಿ. ಈ ಬಡವರಿಗೆ ಮನೆ ತಪ್ಪಿ ಹೋಗುವುದಕ್ಕೆ ಕಾರಣವಾಯಿತು ಎಂದು ನೀವು ಚಾಟಿ ತೆಗೆದುಕೊಂಡು ಕೇಳಬೇಕು. ನೀವು ನನಗಲ್ಲ ಇಲ್ಲಿ ಹೆದರಿಸುವುದು. ನೀವು ಅವರನ್ನು ಹೆದರಿಸಿ. ನೀವು ಮಂತ್ರಿಗಳಿದ್ದೀರಿ. ನಿಮಗೆ ಅಧಿಕಾರ ಇದೆ.

ಶ್ರೀ ಸಿ.ಆರ್. ಸಗೀರ್ ಅಹಮದ್: ನಾನು ನೇರವಾಗಿ ವಿಚಾರ ಅವರಿಗೆ ಹೇಳಿದೆ. ನಾನು ಇಲಾಖೆ ಮಂತ್ರಿಯಾಗಿ ತಿದ್ದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ. ಆದರೆ ಕೇಂದ್ರ ಸರ್ಕಾರ ನಿಗದಿಪಡಿಸಿರುವಂತಹ ಗುರಿ, ಹಾಗೂ ಆ ಗುರಿಗೆ ನಿಗದಿ ಪಡಿಸಿರುವಂತಹ ಹಣ ಬಿಡುಗಡೆ ಮಾಡಿದೆ ಎನ್ನುವುದರ ಬಗ್ಗೆ ಮಾಹಿತಿ ಕೊಡುವುದಾದರೆ ನಾನು ತಪ್ಪು ಎಂದು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ನಾನು ಹೇಳುವಂತಹದ್ದಲ್ಲ ಆದರೂ ಹೇಳುತ್ತೇನೆ. ಏಕೆಂದರೆ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 2002–03ರಲ್ಲಿ ಬಂದಿರುವಂತಹ ಮನೆಗಳು ಎಷ್ಟು? ಎಷ್ಟು ಖರ್ಚಾಗಿದೆ ಎನ್ನುವುದರ ಬಗ್ಗೆ ಟಾರ್ಜೆಟ್ ಕೊಟ್ಟಿದ್ದಾರೆ. ಹೋದ ವರ್ಷ 33,299 ಅದರಲ್ಲಿ ನಾವು ಅಚೀವ್‌ಮೆಂಟ್ ಮಾಡಿರುವುದು 28,910. ಉಳಿದಿರುವಂತಹ ಮನೆ ಬೇರೆ ಬೇರೆ ಹಂತದಲ್ಲಿ ಎಂದರೆ ನಾವು ನೆಲಮಟ್ಟದಲ್ಲಿ, ಚಾವಣಿ ಮಟ್ಟದಲ್ಲಿ ಇದೆ. ಇದು ಎಲ್ಲರಿಗೂ ಗೊತ್ತಿದೆ. ಅಲ್ಲಿ ಮಾನ್ಯ ಉಪನಾಯಕರಾದ ಸದಾನಂದಗೌಡರು ನಗುತ್ತಿದ್ದಾರೆ. ಅಲ್ಲಿ ಅವರ ಸ್ನೇಹಿತರು ಹೀಗೆ ಹೇಳಿ ಎಂದು ಹೇಳಿಕೊಡುತ್ತಿದ್ದಾರೆ. ಆದರೆ ನಡೆದಿರುವಂತಹ ಸಂಗತಿ, ಸದನದಲ್ಲಿ ಹೇಳುವಂತಹದ್ದು ಕೇಂದ್ರ ಸರ್ಕಾರದಿಂದ ಯಾವುದೇ ಹಣ ಬರಬೇಕಾದರೆ ಯುಟಿಲೈಸೇಷನ್ ಸರ್ಟಿಫಿಕೇಟ್ ಕೊಟ್ಟನಂತರವೂ ಕೂಡ ವಿಳಂಬವಾಗುತ್ತದೆ. ನಾವು ಬಂದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಜಮಾ ಖರ್ಚು ಮಾಡುವಾಗ, ಆ ವರ್ಷದಲ್ಲಿ ಎಷ್ಟು ಮನೆ ಉಳಿದಿದೆ ಎಂದು ತೋರಿಸಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಲ್ಯಾಪ್ಸ್ ಆಗಿದೆ ಎನ್ನುವ ಮಾತು ಏನು ಹೇಳುತ್ತಿದ್ದೀರಲ್ಲಾ ಅದನ್ನು ನಾನು ಒಪ್ಪುವುದಿಲ್ಲ. ಯಾವುದೇ ಲ್ಯಾಪ್ಸ್ ಆಗುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ನೀವು ಕೇಳಿ, ಮುಂದಿನ ವರ್ಷದ ಗುರಿಯನ್ನು ಯಾವ ಆಧಾರದ ಮೇಲೆ ನಿಗದಿ ಮಾಡುತ್ತಾರೆ ಎಂದರೆ ನೀವು ಹಿಂದಿನ ವರ್ಷದಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎನ್ನುವ ಆಧಾರದ ಮೇಲೆ. 1999–2002ನೇ ಇಸವಿಯಲ್ಲಿ ಎಷ್ಟು ಖರ್ಚು ಮಾಡಿದ್ದಾರೆ ಎನ್ನುವ ಆಧಾರದ ಮೇಲೆ ಮುಂದಿನ 2001ರ ಗುರಿಯನ್ನು ಫಿಕ್ಸ್ ಮಾಡುತ್ತಾರೆ. 2001ರಲ್ಲಿ ನೀವು ಎಷ್ಟು ಖರ್ಚು ಮಾಡುತ್ತೀರಿ ಎನ್ನುವುದರ ಮೇಲೆ 2002ರ ಗುರಿಯನ್ನು ನಿಗದಿ ಮಾಡುತ್ತಾ ಹೋಗುತ್ತಾರೆ. ಮಾನ್ಯ ಕರಿಯಣ್ಣನವರೆ, ನಾನು ಕುಳಿತಿಲ್ಲ. ಮಾನ್ಯ ಉಪಾಧ್ಯಕ್ಷರೆ, ನಮಗೆ ರಕ್ಷಣೆ ಕೊಡಬೇಕು.

ಶ್ರೀ ಕರಿಯಣ್ಣ: ಮಾನ್ಯ ಉಪಾಧ್ಯಕ್ಷರೆ, ಏನಾಗಿದೆ ಎಂದರೆ ಗುರಿ ನಿಗದಿ ಮಾಡುವುದಕ್ಕೆ ಕಳೆದ ವರ್ಷದ ಹಣವೇ ಬಿಡುಗಡೆಯಾಗಿಲ್ಲ, ನಾವು ಹೇಗೆ ಕಂಪ್ಲೀಟ್ ಎಂದು ತೋರಿಸುವುದು? ಹಣ ರಿಲೀಸ್ ಆಗದೆ ಕಂಪ್ಲೀಟ್ ಎಂದು ತೋರಿಸುವುದಕ್ಕೆ ಬರುವುದಿಲ್ಲ, ಕಂಪ್ಲೀಟ್ ಎಂದು ತೋರಿಸುವುದಕ್ಕೆ ಬರದೇ ಇರುವುದರಿಂದ ಮುಂದಿನ ವರ್ಷದ ಗುರಿಯನ್ನೇ ಅವರು ನಿಗದಿ ಮಾಡುವುದಕ್ಕಾಗುವುದಿಲ್ಲ ಅವರು ಆಗ ಸಿಎಜಿ ರಿಪೋರ್ಟ್ ತಪ್ಪಾಗಿ ಬಂದಿರುತ್ತದೆ. ನೀವು ಹಣವೇ ಕೊಡದೆ ಹೋದರೆ ಆತ ಮನೆಯನ್ನು ಹೇಗೆ ಕಟ್ಟುತ್ತಾನೆ. ತಪ್ಪಾಗಿ ಕಲ್ಪನೆ ಮಾಡುವುದು ಸರಿಯಲ್ಲ. ನೀವೇ ಜಿಲ್ಲೆಯಲ್ಲಿ ರಿವ್ಯೂ ಮಾಡುವಾಗ ನೋಡಿದ್ದೀರಿ.

ಶ್ರೀ ಡಿ.ವಿ. ಸದಾನಂದಗೌಡ: ನಿಮ್ಮ ಜಿಲ್ಲಾ ರಾಜಕಾರಣವನ್ನು ಇಲ್ಲಿ ಏತಕ್ಕೆ ತರುತ್ತೀರಿ? ನಿಮ್ಮ ಜಿಲ್ಲಾ ರಾಜಕಾರಣವನ್ನು ಅಲ್ಲಿ ನೋಡಿಕೊಳ್ಳಿ.

ಶ್ರೀ ಕರಿಯಣ್ಣ: ನೀವು ಎಲ್ಲಿಂದ ಬಂದಿದ್ದೀರಿ? ನಿಮ್ಮ ಜಿಲ್ಲೆಯಿಂದ ಬಂದಿಲ್ಲವೇ? ಜಿಲ್ಲೆಯ ರಾಜಕಾರಣವೇ ರಾಜ್ಯದ ರಾಜಕಾರಣ ನೀವು ಪಿಎಸಿ ಸದಸ್ಯರಾಗಿದ್ದವರು; ನಾವೂ ಪಿಎಸಿ ಸದಸ್ಯರಾಗಿದ್ದೆವು ಅಲ್ಲಿ ಚರ್ಚೆಯಾಗಿದ್ದನ್ನು ನೋಡಿದ್ದೇವೆ, ಇದ್ದವೆಲ್ಲಾ ಸರಿಯಾಗಿರುತ್ತದೆಯೇ ಉತ್ತರ ಕೊಟ್ಟ ಮೇಲೆ ಅಲ್ಲಿ ರ್‍ಯಾಟಿಫೈ ಆಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ: ತನ್ನ ಪಾಲಿನ ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡದೆ ಕೇಂದ್ರದ ಅನೇಕ ಯೋಜನೆಗಳು ನಮ್ಮ ರಾಜ್ಯದಲ್ಲಿ ಯಾವ ರೀತಿ ನಿಷ್ಪ್ರಯೋಜನವಾಗಿದ್ದಾವೆ? ಉದಾಹರಣೆಗೆ ರಾಷ್ಟ್ರೀಯ ಜೈವಿಕ ಅನಿಲ ಯೋಜನೆಯಡಿ ಬಯೊ ಗ್ಯಾಸ್ ಮಾಡುವುದಕ್ಕೆ 2002–03 ರಲ್ಲಿ ರಾಜ್ಯದ ಪಾಲು 7 ಕೋಟಿ 52 ಲಕ್ಷ ರೂ. ಕೊಡಬೇಕಾಗಿತ್ತು. ಇದಕ್ಕೆ ಕೇವಲ 4.35 ಕೋಟಿ ರೂ. ಬಿಡುಗಡೆ ಮಾಡಿದ್ದರಿಂದ 3 ಕೋಟಿ 17 ಲಕ್ಷ ರೂಪಾಯಿ ಕೊರತೆಯಾಗಿದ್ದರಿಂದ, ಇದರಿಂದ ದೊಡ್ಡ ಪರಿಣಾಮವಾಯಿತು. ಈ ಕಾರ್ಯಕ್ರಮ ಯಾವುದು? ಗೊತ್ತಿರುವಂತೆ ಬಯೋ ಗ್ಯಾಸ್ ಪ್ಲಂಟ್‌ಗಳನ್ನು ನಿರ್ಮಾಣ ಮಾಡುವುದು. ಹಳ್ಳಿಗಳಲ್ಲಿ ಪರಿಸರ ಸರಿಯಾಗಿರಬೇಕು, ಉರುವಲಿಗೆಗೆ ಕಾಡಿನ ಮರ ಕಡಿಯದಂತೆ ಕಾಡುಗಳು ಉಳಿಯಬೇಕು. ಗ್ಯಾಸ್ ಮೂಲಕ ನಮ್ಮ ಹಳ್ಳಿಯ ಜನರು ಅಡಿಗೆ ಮಾಡುವಂತಾಗಬೇಕು, ಉತ್ತಮವಾದ ಸಗಣಿ ಗೊಬ್ಬರ ಅವರಿಗೆ ಸಿಗಬೇಕು, ಇವುಗಳ ಆಧಾರದ ಮೇಲೆ ನಮ್ಮ ಬಯೋ ಗ್ಯಾಸ್ ಪ್ಲಾಂಟ್‌ಗಳನ್ನು ಮಾಡಲಿಕ್ಕೆ ಪ್ರಾರಂಭ ಮಾಡಿದರು. ಇದಕ್ಕಾಗಿ ಕೇಂದ್ರ ಸರ್ಕಾರ ನೀವು ಕೇಳಿದಷ್ಟು ಸಾಕಷ್ಟು ಗ್ರಾಂಟ್ ಅನ್ನು ಕೊಡುತ್ತಿದೆ, ರಾಜ್ಯ ಶೇಕಡ 25 ರಷ್ಟು ಕೊಡಬೇಕಾಗಿದೆ. ನಿಮ್ಮ ಪಾಲಿನ ಹಣವನ್ನು ನೀವು ಕೊಡದೆ ಇವತ್ತು ಕೇಂದ್ರ ಸರ್ಕಾರದ ಈ ಯೋಜನೆ ಅತ್ಯಂತ ನಿಷ್ಪ್ರಯೋಜಕವಾಗಿದೆ. ಪ್ರತಿ ವರ್ಷ 7.52 ಕೋಟಿ ರೂ. ಹಣ ಇದಕ್ಕಾಗಿ

ಮೀಸಲಿಡುವ ನೀವು, ಈ ಸಾರಿ ಈ ಯೋಜನೆಗೆ 1.6 ಕೋಟಿ ರೂಪಾಯಿ ಮಾತ್ರ ಮೀಸಲಾಗಿ ಇಟ್ಟಿದ್ದೀರಿ. ಈ ಯೋಜನೆಗೆ ನಿಮಗೆ ಅಗತ್ಯವಿಲ್ಲವೇ? ಬಯೋ ಗ್ಯಾಸ್ ಪ್ಲಾಂಟ್‌ಗಳು ನಮ್ಮ ರಾಜ್ಯದಲ್ಲಿ ಬೇಡವೆಂದೂ ಇದರ ಅಗತ್ಯವಿಲ್ಲವೆಂದು ಸರ್ಕಾರವೇನಾದರೂ ತೀರ್ಮಾನ ಮಾಡಿದೆಯೇ? ಗ್ರಾಮೀಣ ಪ್ರದೇಶಕ್ಕೆ ಅತ್ಯಂತ ಪರಿಸರ ಸ್ನೇಹಿಯಾಗಿರುವಂತಹ ಈ ಯೋಜನೆ ನಿಮಗೆ ಏತಕ್ಕೆ ಬೇಡವೆನ್ನುವುದಕ್ಕೆ ವಿವರಣೆಯನ್ನು ಇವತ್ತು ಈ ಸದನದಲ್ಲಿ ನೀವು ಕೊಡಬೇಕಾಗುತ್ತದೆ. ತಾವು ನಿಗದಿಪಡಿಸಿದ ಹಣವನ್ನು ಇಂತಹ ಯೋಜನೆಗೆ ಇವತ್ತು ಕೊಡದೆ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ವಿಷಯ ಸಮಿತಿಯು ಕೂಡ ಹೇಳಿದೆ, ಅವರು ಬಹಳ ಬೇಸರವನ್ನು ವ್ಯಕ್ತಪಡಿಸಿದ್ದಾರೆ. ನಿಗದಿಪಡಿಸಿದ ಅನುದಾನವನ್ನು ಪೂರ್ಣವಾಗಿ ಬಿಡುಗಡೆ ಮಾಡದೆ, ಪ್ರತಿವರ್ಷವೂ ಅನುದಾನವನ್ನು ಹೆಚ್ಚಿಸಿಕೊಂಡು ಹೋಗಿರುವುದರಿಂದ ಕಾರ್ಯಕ್ರಮ ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗದೆ ಇರುವುದನ್ನು ಸಮಿತಿಯು ಗಮನಿಸಿತು. ಆದುದರಿಂದ ಇದಕ್ಕೆ ಒಂದು ಪ್ರತ್ಯೇಕ ಕಾರ್ಯಕ್ರಮವನ್ನು ರೂಪಿಸಿ ನಿಗದಿಪಡಿಸಲಾದ ಹಣವನ್ನು ಸಕಾಲದಲ್ಲಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ ಎಂದು ವಿಷಯ ಸಮಿತಿ ಹೇಳಿದೆ. ಇದಲ್ಲದೆ, ಭಾರತದ ಹಸಿರು ಶಕ್ತಿ ಯೋಜನೆ, ಬಯೋ ಮಾಸ್ ಎನರ್ಜಿ ಫಾರ್ ರೂರಲ್ ಇಂಡಿಯಾ ಪ್ರಾಜೆಕ್ಟ್ ಬಹಳ ಒಳ್ಳೆಯದು. 2001 ರಲ್ಲಿ ನೀವು ಒಂದು ಒಡಂಬಡಿಕೆಯನ್ನು ಮಾಡಿಕೊಂಡಿರಿ, ಆದರೆ 2003ನೇ ಇಸವಿ ಮುಗಿಯುತ್ತಾ ಬಂದರೂ ಕೂಡ ಒಂದು ಘಟಕವನ್ನೂ ಕೂಡ ನೀವು ಆರಂಭ ಮಾಡಲಿಲ್ಲ. ಗ್ರಾಮೀಣ ಪ್ರದೇಶದ ಜನರಿಗೆ ಉತ್ತಮವಾದ ವಿದ್ಯುತ್ ಕೊಡುವ ಒಂದು ಯೋಜನೆ ಇದು. ಇದನ್ನು ಆರಂಭ ಮಾಡಲಿಲ್ಲವೇತಕ್ಕೆ? ನಿಮಗೇನು ತೊಂದರೆಯಾಗಿತ್ತೆನ್ನುವ ಮಾಹಿತಿಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ನಫೀಸ್ ಫಜಲ್ (ವಿಜ್ಞಾನ, ತಂತ್ರಜ್ಞಾನ, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ): ತುಮಕೂರು ಕಡೆ ನಡೆಯುತ್ತಿದೆ ನನಗೆ ಗೊತ್ತು, ಸೈನ್ಸ್ ಅಂಡ್ ಟೆಕ್ನಾಲಜಿ ಡಿಪಾರ್ಟ್‌ಮೆಂಟ್‌ನಿಂದ ಬಯೋ ಮಾಸ್ ಎನರ್ಜಿ ಯೋಜನೆ ನಡೆಯುತ್ತಿದೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಸಚಿವರು ಕೇಳಬೇಕು. ವಿಷಯ ಸಮಿತಿಯ ವರದಿಯಲ್ಲಿದೆ, ಅವರೇನಾದರೂ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೋ ಏನೋ ಗೊತ್ತಿಲ್ಲ. ಈ ಯೋಜನೆಯನ್ನು ಆರಂಭಿಸಲು 2001ರಲ್ಲಿ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿದ್ದು, ಇದರ ಅವಧಿಯು 2006ಕ್ಕೆ ಮುಕ್ತಾಯವಾಗುತ್ತದೆ, ಈ ಘಟಕವು ಇಲ್ಲಿಯವರೆಗೂ ಕಾರ್ಯಾರಂಭ ಮಾಡಿರುವುದಿಲ್ಲ, ಈ ಒಂದು ಪ್ರಾಜೆಕ್ಟ್‌ಗೆ ಹೆಚ್ಚು ಒತ್ತು ಕೊಟ್ಟು ಆದಷ್ಟು ಬೇಗ ಕಾರ್ಯನಿರ್ವಹಿಸುವಂತೆ ಮಾಡಿ ಗ್ರಾಮೀಣ ಪ್ರದೇಶದ ಜನತೆಗೆ ಉತ್ತಮ ಮಟ್ಟದ ವಿದ್ಯುತ್ ಪೂರೈಸುವ ಯೋಜನೆಯನ್ನು ಸಫಲಗೊಳಿಸಬೇಕೆಂದು ಸಮಿತಿಯು ಸೂಚಿಸುತ್ತದೆ. ಶ್ರೀಮಾನ್ ವಿಜಯಕುಮಾರ್ ಶೆಟ್ಟರು ಈ ವಿಷಯ ಸಮಿತಿಯಲ್ಲಿ ಇದ್ದಾರೆ, ಮಾನ್ಯ ಸಿರಾಜ್ ಶೇಖ್ ಇದರ ಅಧ್ಯಕ್ಷರು, ಅವರೆಲ್ಲಾ ನಿಮ್ಮ ಪಕ್ಷದವರೆಂದು ನಾನು ಭಾವಿಸಿದ್ದೇನೆ, ಅವರೇನಾದರೂ ನಿಮ್ಮ ಪಕ್ಷಕ್ಕೆ ತೊಂದರೆ ಮಾಡಬೇಕೆಂದು ಈ ವರದಿಯನ್ನು ಕೊಟ್ಟಿದ್ದಾರೋ ಏನೋ ನನಗೆ ಗೊತ್ತಿಲ್ಲ. ಆದರೆ ಅವರೆಲ್ಲ ಸೇರಿಕೊಂಡು ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆಂದು ನಾನು ಭಾವಿಸಿದ್ದೇನೆ. ಸತ್ಯವಾದ ವರದಿಯನ್ನು ಸದನಕ್ಕೆ ಕೊಟ್ಟಿದ್ದಾರೆ, ಸರ್ಕಾರ ಏನು ಮಾಡಬೇಕು, ಎಲ್ಲಿ ವಿಫಲವಾಗಿದೆ, ಎಲ್ಲಿ ಎಡವಿದೆ ಎನ್ನುವುದರ ಬಗ್ಗೆ

ವರದಿಯನ್ನೂನು ಕೊಟ್ಟಿದ್ದಾರೆಂದು ಭಾವಿಸುತ್ತೇನೆ, ಅಂತಹ ರಿಪೋರ್ಟ್ ಅನ್ನು ನೀವು ಅಲ್ಲಗೆಳೆಯುವುದಾದರೆ, ನನಗೇನು ತೊಂದರೆ ಇಲ್ಲ. ಪ್ರಧಾನಮಂತ್ರಿ ಗ್ರಾಮೀಣ ಆವಾಸ್ ಯೋಜನೆಗೆ ಸಂಬಂಧಿಸಿದಂತೆ 2002–03ರಲ್ಲಿ ಗುರಿ 8100, ಸಾಧನೆ 2900, ಆರ್ಥಿಕ ಸಾಧನೆ: ಗುರಿ 1500 ಆದರೆ ಖರ್ಚು ಮಾಡಿದ್ದು 738 ಲಕ್ಷ ಮಾತ್ರ, ಖರ್ಚು ಮಾಡಿದ್ದೀರಿ. 2001–02ರದ್ದು ಹೇಳುತ್ತೇನೆ, 6084 ಮನೆ, ಸಾಧನೆ 2385, ಆರ್ಥಿಕ ಸಾಧನೆ: 1500 ಲಕ್ಷ ಆ ವರ್ಷ ನಿಮಗೆ ಕೊಟ್ಟಿದ್ದು, 589.6 ಲಕ್ಷ ರೂ. ಮಾತ್ರ ಖರ್ಚು ಮಾಡಿದ್ದೀರಿ, ನೀವು ಸಾಧಿಸಲಿಲ್ಲ, ಸದ್ಬಳಕೆ ಮಾಡಿಕೊಳ್ಳಲಿಲ್ಲ. 2001–02ರಲ್ಲಿ ಕೇಂದ್ರ ಸರ್ಕಾರ ಮೊದಲನೇ ಕಂತಾಗಿ ಇವರಿಗೆ 6084 ಮನೆ ಕಟ್ಟಬೇಕೆಂದು 750 ಲಕ್ಷ ರೂಪಾಯಿ ಇವರಿಗೆ ಕೊಡುತ್ತಾರೆ. ಆದರೆ ಇಡೀ ವರ್ಷದಲ್ಲೇ ಖರ್ಚಾಗಿದ್ದು 589.6 ಲಕ್ಷ ರೂ. ಮಾತ್ರ. ಬಡವರ ಈ ಕಾರ್ಯಕ್ರಮದ ಬಗ್ಗೆ ನಿಮಗೆ ಅಸಡ್ಡೆ ನಾನು ಹೇಳುವುದಕ್ಕೆ ಹೋದರೆ ನೀವು ವಾದ ಮಾಡುತ್ತೀರಿ, ಆದರೆ ಈ ಲೆಕ್ಕಪತ್ರಗಳು, ಇವೆಲ್ಲಾ ತಪ್ಪೆಂದು ಅಲ್ಲಗಳಿಯುವುದಾದರೆ ನನಗೇನೂ ತೊಂದರೆ ಇಲ್ಲ. ತಾವು ಮಾನ್ಯ ಸಚಿವರು, ಜನರು, ದೇವರು ಅವಕಾಶ ಕೊಟ್ಟಿದ್ದಾರೆ ದಯವಿಟ್ಟು ಅಧಿಕಾರಿಗಳ ಮೇಲೆ ಹಿಡಿತ ಸಾಧಿಸಿ, ಯಾವ ಕಾರಣಕ್ಕಾಗಿ ಇದನ್ನು ಸಾಧಿಸಲಾಗಲಿಲ್ಲ, ಇಷ್ಟು ಕೋಟಿಗಟ್ಟಲೆ ಹಣವನ್ನು ಬಡವರ ಅಭ್ಯುದಯಕ್ಕೋಸ್ಕರ ಕೇಂದ್ರ ಸರ್ಕಾರ ಕೊಟ್ಟರೂ ಕೂಡ, ನಾವು ಬಡವರ ಪರವಾಗಿದ್ದೇವೆಂದು ಇಷ್ಟು ವರ್ಷ ಓಟನ್ನು ತೆಗೆದುಕೊಂಡು ಅಧಿಕಾರದಲ್ಲಿದ್ದ ಕಾಂಗ್ರೆಸ್‌ನವರು ನಮಗೆ ಅವಮಾನವಾಗುತ್ತದೆಂದು ತಾವು ಆ ಅಧಿಕಾರಿಗಳಿಗೆ ಹೇಳಬೇಕಲ್ಲಾ ಸರ್? ನಾನು ಇಲ್ಲಿ ಹೇಳಿದ ಕೂಡಲೇ ತಾವು ಇಲ್ಲಿ ಬೇಸರ ಮಾಡಿಕೊಳ್ಳುತ್ತೀರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸ್ನೇಹಿತರಿಗೆ ಏನು ಹೇಳಲಿ? ಇವರ ಕೇಂದ್ರ ಮಂತ್ರಿಗಳು ಬರುತ್ತಾರೆ, ನಮ್ಮ ರಾಜ್ಯದಲ್ಲಿ ನಡೆಯುವ ಪ್ರಗತಿಯನ್ನು ಪರಿಶೀಲಿಸುತ್ತಾರೆ, ನನ್ನ ಸಮಕ್ಷಮದಲ್ಲಿ ಇವರ ಮಂತ್ರಿಗಳು ಹೇಳುತ್ತಾರೆ, ವಸತಿ ಇಲಾಖೆಯಲ್ಲಿ ನಡೆದಿರುವಂತಹ ಮನೆ ನಿರ್ಮಾಣ ಕಾರ್ಯ ದೇಶದಲ್ಲೇ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿದೆ ಎಂದು ಹೇಳುತ್ತಾರೆ ಇದು ಪತ್ರಿಕೆಯಲ್ಲಿ ಅವರು ಕೊಟ್ಟಿರುವ ಹೇಳಿಕೆ. ಮಾನ್ಯ ಸದಸ್ಯರು ಏನೊಂದು ಅಂಕಿಅಂಶಗಳನ್ನು ಸದನದ ಮುಂದಿಟ್ಟಿದ್ದಕ್ಕೆ ನಾನು ಹೇಳಬೇಕಾಗುತ್ತದೆ, ನಾನು ಸರ್ಕಾರದ ವತಿಯಿಂದ ಹೇಳುತ್ತೇನೆ, 2002–03ರಲ್ಲಿ ನಮಗೆ ಅಲೊಕೇಷನ್ ಮಾಡಿದ್ದು 6786, ಹಣ ರಿಲೀಸ್ ಆಗಿದ್ದು ಎಷ್ಟೆಂದರೆ 5172 ಮಾತ್ರ, ದಯಮಾಡಿ ತಾವು ಫಿಗರ್ಸ್ ಟ್ಯಾಲಿ ಮಾಡಿಕೊಳ್ಳಬೇಕು, ಹಿಂದಿನ ವರ್ಷದ್ದು ತಕ್ಷಣಕ್ಕೆ ನನ್ನಲ್ಲಿ ಮಾಹಿತಿ ಇಲ್ಲ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕೇಂದ್ರ ಸರ್ಕಾರ ಯಾವುದೇ ಯೋಜನೆಗಳನ್ನು ರಾಜ್ಯಕ್ಕೆ ನೀಡುವ ಸಂದರ್ಭದಲ್ಲಿ ಅವರು ತಕ್ಷಣವೇ ನಿಗದಿಪಡಿಸಿರುವ ಎಲ್ಲಾ ಹಣವನ್ನು ಯಾವತ್ತೂ ಬಿಡುಗಡೆ ಮಾಡುವುದಿಲ್ಲ.

5.10 ಪಿ.ಎಂ.

ಇದು ನಿಮಗೂ ಗೊತ್ತಿದೆ, ನನಗೂ ಗೊತ್ತಿದೆ. ಈ ಗುರಿ ನಿಗದಿಪಡಿಸಿದ ನಂತರ ಅವರು ಹೇಗೇಗೆ ಬಿಡುಗಡೆ ಮಾಡುತ್ತಾರೋ, ನಾವು ಹಾಗಾಗೆ ಇಲ್ಲಿ ಗ್ರಾಮ ಪಂಚಾಯಿತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ, ಜಿಲ್ಲಾ ಪಂಚಾಯಿತಿಗಳಿಗೆ ಗುರಿಯನ್ನು ನಿಗದಿಪಡಿಸುತ್ತೇವೆ. ಅವರು ಎಷ್ಟು ನಿಗದಿಪಡಿಸಿದ್ದರು, ಅದರಲ್ಲಿ ನೂರಕ್ಕೆ ನೂರರಷ್ಟು ಹಣವನ್ನು ಯಾವ ಸಾಲಿನಲ್ಲಿಯೂ ನಮ್ಮ ರಾಜ್ಯಕ್ಕೆ ಬಿಡುಗಡೆ ಮಾಡಿಲ್ಲ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ: ಪ್ರತಿಸಲ ಇವರು ಮಾತನಾಡುವಾಗ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ, ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ ಎಂದು ಹೇಳುತ್ತಾರೆ. ಕೇಂದ್ರ ಸರ್ಕಾರ ಬಿಡುಗಡೆ ಮಾಡುವುದೇನಿದೆ ಸ್ವಾಮಿ? ಅದು ನಮ್ಮ ಕಾನ್ಸ್‌ಟಿಟ್ಯೂಷನಲ್ ರೈಟ್. ಇದಕ್ಕೇ ಇವರು ಪ್ರತಿಸಲವೂ ಮಾತನಾಡುವಾಗ ಕೇಂದ್ರ ಸರ್ಕಾರದವರು ನಮಗೆ ಏನೋ ದೊಡ್ಡದಾಗಿ ಕೊಟ್ಟ ಹಾಗೆ ಹೇಳುತ್ತಾರೆ, ಅದು ಆಕಾಶದಿಂದ ಬಿದ್ದ ಹಾಗೆ ಹೇಳುತ್ತಾರೆ. ನಿಜವಾಗಿಯೂ ಹೇಳುವುದಾದರೆ, ಕೇಂದ್ರ ಸರ್ಕಾರದವರು ಬಹಳ ಅನ್ಯಾಯ, ದ್ರೋಹ ಮಾಡುತ್ತಿದ್ದಾರೆ. ನಮಗೆ ಐದು ಕೋಟಿ ರೂ. ಕೊಟ್ಟಿದ್ದಾರೆ, ಆಂಧ್ರಕ್ಕೆ 50 ಕೋಟಿ ರೂ. ಕೊಟ್ಟಿದ್ದಾರೆ. ಇದಕ್ಕೆ ನಿಮಗೆ ಏನೆಂದು ಹೇಳಬೇಕೆಂದು ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ಕೇಂದ್ರ ಸರ್ಕಾರ ನಿಮಗೆ ಏನೇನು ದ್ರೋಹ ಮಾಡಿದೆ ಎನ್ನುವುದನ್ನೂ ನಾನು ಹೇಳುತ್ತೇನೆ. ಯಾರೋ ಮಂತ್ರಿಗಳು ಹೊಗಳಿ ಹೋದರು ಎಂದು ಹೇಳಿದರಲ್ಲಾ, ನಾನೂ ಹೊಗಳುತ್ತೇನೆ, ಅಲ್ಲಿಗೆ ಮುಗಿದು ಬಿಡುತ್ತದೆಯೇ? ಇದು ನೋಡಿ, ನಿರ್ವಹಣಾ ಮುಂಗಡ ಪತ್ರ. ಇದು ನಿಮ್ಮ ಸರ್ಕಾರದ್ದೇ ಅಲ್ಲವೇ? ಇದನ್ನು ಪ್ರಿಂಟ್ ಮಾಡಿರುವುದು ನಿಮ್ಮ ಅಧಿಕಾರಿಗಳೇ ಅಲ್ಲವೇ? ಕೇಂದ್ರ ಸರ್ಕಾರದಿಂದ ಹೊಸದಾಗಿ ನಾವೇನೂ ಸೇರಿಸಿದ್ದಲ್ಲ, ಇದು ನಮ್ಮ ಪಕ್ಷದ್ದೂ ಅಲ್ಲ. ಈ ಪುಸ್ತಕದ ಪುಟ 38ರಲ್ಲಿ ಬಂದಿದೆ. ಓದುತ್ತೇನೆ ಕೇಳಿ. ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ – ಗ್ರಾಮೀಣ ಆವಾಸ್ ಯೋಜನೆ. ಇದರಲ್ಲಿ 2001–02ನೇ ಸಾಲಿನಲ್ಲಿ ನಿಗದಿಪಡಿಸಿದ ಆರ್ಥಿಕ ಗುರಿ 1,499 ಲಕ್ಷ, ಭೌತಿಕ ಗುರಿ 6,084 ಮನೆಗಳು. ಅದರಲ್ಲಿ 589.61 ಲಕ್ಷ ಮಾತ್ರ ಸಾಧನೆಯಾಗಿದೆ, ಭೌತಿಕವಾಗಿ 6,084 ಮನೆಗಳನ್ನು ಕಟ್ಟಬೇಕಾಗಿದ್ದರೆ, 2,385 ಮನೆಗಳನ್ನು ಮಾತ್ರ ಕಟ್ಟಿದ್ದಾರೆ. ನಾವು ಹೇಳಿದರೆ ಇವರಿಗೆ ಸತ್ಯವನ್ನು ಸಹಿಸಲು ಆಗುವುದಿಲ್ಲ, ಇದನ್ನೆಲ್ಲ ಹೇಳಿದಾಗ ಇವರಿಗೆ ಬಹಳ ಬೇಜಾರಾಗುತ್ತದೆ. 2002–03ನೇ ಸಾಲಿನಲ್ಲಿ 1,499.99 ಲಕ್ಷ ಅಂದರೆ ಸುಮಾರು 1,500 ಲಕ್ಷ ರೂಪಾಯಿಗಳನ್ನಿಟ್ಟು 8,100 ಮನೆಗಳ ಗುರಿಯನ್ನು ನಿಗದಿಪಡಿಸಿದ್ದರೆ, ಅದರಲ್ಲಿ ನೀವು ಸಾಧಿಸಿರತಕ್ಕಂಥ ಸಾಧನೆ ಎಂದರೆ, 738.9 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 2,905 ಮನೆಗಳನ್ನು ಕಟ್ಟಿದ್ದೀರಿ 8100 ಮನೆಗಳಿಗೆ ಕೇವಲ 2905 ಮನೆಗಳು ಮಾತ್ರ ಪೂರ್ಣವಾಗಿವೆ. ದಯವಿಟ್ಟು ತಾವು ಈ ಪುಸ್ತಕವನ್ನು ತರಿಸಿಕೊಂಡು, ಈ ಅಂಕಿಅಂಶಗಳನ್ನು ಓದಿ, ಇದರಲ್ಲಿ ನಿಮ್ಮ ಇಲಾಖೆ ಎಷ್ಟರ ಮಟ್ಟಿಗೆ ವಿಫಲವಾಗಿದೆ, ಕೇಂದ್ರ ಸರ್ಕಾರದ ಈ ಒಂದು ಬಡವರ ಯೋಜನೆಯ ಹಣವನ್ನು ಬಳಕೆ ಮಾಡಿಕೊಳ್ಳುವುದರಲ್ಲಿ ನಿಮ್ಮ ಸರ್ಕಾರ ವಿಫಲವಾಗಿದೆ ಎನ್ನುವುದನ್ನು ತಾವು ದಯವಿಟ್ಟು ನೋಡಬೇಕು ಎಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಒಂದು ಪುಸ್ತಕವನ್ನು ಕೇವಲ ನಮಗೆ ಮಾತ್ರ ಓದಲು ಕೊಟ್ಟಿದ್ದಲ್ಲ, ನಿಮಗೂ ಓದಲು ಕೊಟ್ಟಿದ್ದು ಎಂದು ನಾನು ಭಾವಿಸುತ್ತೇನೆ. ದಯಮಾಡಿ ಓದುವಂಥ ಸೌಜನ್ಯವನ್ನು ತಾವು ಬೆಳೆಸಿಕೊಂಡರೆ ನಮ್ಮ ರಾಜ್ಯದ ಬಡವರಿಗೆ ಒಳ್ಳೆಯದಾಗುತ್ತದೆ. ಇದು ಮೊನ್ನೆಯಷ್ಟೇ ಬಂದಿದೆ. ಮಾನ್ಯ ವಿಜಯಕುಮಾರ ಶೆಟ್ಟಿಯವರಿಗೂ ಕಳುಹಿಸಿದ್ದಾರೆಂದು ಕಾಣುತ್ತದೆ, ಅವರೂ ಓದಿಲ್ಲ ಎಂದು ಕಾಣುತ್ತದೆ, ಅವರೂ ಓದಲಿ.

ಶ್ರೀ ಸಿ.ಆರ್. ಸಗೀರ್ ಅಹಮದ್: ನಾವು ಓದದೇ ಆ ಪುಸ್ತಕದಲ್ಲಿ ಬಂತೇ ಎಂದು ನಾನು ಇವರನ್ನು ಕೇಳಬೇಕಾಗುತ್ತದೆ. ಇವರಾಗಿಯೇ ಬರೆಸಿದರೆ ಎಂದು ಕಾಣುತ್ತದೆ. ನಮ್ಮ ಇಲಾಖೆಗೆ ಬಂದು, ನಾವು ಮಾಹಿತಿಯನ್ನು ಕೊಟ್ಟ ನಂತರವೇ ಅದು ಮುದ್ರಣವಾಗಿದೆ. ನಾವು ಓದದೇ, ನೋಡದೇ ಇದ್ದರೆ ಹೇಗೆ ಮುದ್ರಣವಾಗುತ್ತಿತ್ತು?

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಆಗಿನಿಂದ ನೀವೇ ನೋಡುತ್ತಿದ್ದೀರಿ. ಸಿ.ಎ.ಜಿ. ರಿಪೋರ್ಟ್ ಸರಿಯಿಲ್ಲ, ಅದು ಸರಿಯಿಲ್ಲ, ಇದು ಸರಿಯಿಲ್ಲ, ಅಂಕಿ ಅಂಶಗಳನ್ನು ನಮ್ಮದೇ ಸರಿ ಎಂದು ವಾದ ಮಾಡುವ ಇವರು, ಈಗ ಅದನ್ನು ನಾವೇ ಕಳುಹಿಸಿಕೊಟ್ಟಿದ್ದು ಎಂದು ಹೇಳುತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್: ಈ ಪುಸ್ತಕಗಳನ್ನು ನಮ್ಮ ಕಣ್ಣಿನಿಂದ ನೋಡಬೇಕು ಸ್ವಾಮಿ. ನಿಮ್ಮ ಕಣ್ಣಿನಿಂದ ನೋಡಿದರೆ ಎಲ್ಲಾ ಹಳದಿ ಬಣ್ಣವಾಗೆ ಕಾಣುತ್ತದೆ. ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ?

ಶ್ರೀ ಆರಗ ಜ್ಞಾನೇಂದ್ರ: ಇನ್ನು ಹೇಗೆ ನೋಡುವುದಕ್ಕಾಗುತ್ತದೆ?

ಶ್ರೀ ಸಿ.ಆರ್. ಸಗೀರ್ ಅಹಮದ್: ನಮ್ಮ ಕಣ್ಣಿನಿಂದ ನೋಡಿದರೆ ಎಲ್ಲಾ ಹಸಿರು ಕಾಣುತ್ತದೆ, ನಿಮ್ಮ ಕಣ್ಣಿನಿಂದ ನೋಡಿದರೆ ಹಳದಿ ಕಾಣುತ್ತದೆ. ಏನು ಮಾಡೋಣ ಹೇಳಿ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಹಾರ್ನಳ್ಳಿ ರಾಮಸ್ವಾಮಿಯವರ ರಿಪೋರ್ಟ್‌ನ್ನು ತಾವು ಓದಿರುವಿರಾ ಸ್ವಾಮಿ?

ಶ್ರೀ ಸಿ.ಆರ್. ಸಗೀರ್ ಅಹಮದ್: ಓದಿದ್ದೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಅದರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ? ಏನು ಮಾಡಿದ್ದೀರಿ? ನೋಡಿ ಇಡುತ್ತಿದ್ದೀರಿ ಅಷ್ಟೇ. ಅದನ್ನು ಎಷ್ಟು ಜನ ಓದಿದ್ದೀರಿ?

ಶ್ರೀ ಡಿ.ವಿ. ಸದಾನಂದಗೌಡ: ಬರಗಾಲದ ಪರಿಸ್ಥಿತಿಯೂ ನಿಮಗೆ ಹಾಗೆಯೇ ಕಾಣುತ್ತದೆಯೇ? ಗ್ರಾಮೀಣ ಪ್ರದೇಶದಲ್ಲಿಯೂ ನಿಮಗೆ ಹಸಿರಾಗಿ ಕಾಣುತ್ತದೆಯೇ? ಕರ್ನಾಟಕದ ಎಲ್ಲಾ ಭಾಗದಲ್ಲಿ ಹಸಿರು ಕಾಣುತ್ತದೆಯೇ?

ಶ್ರೀ ಆರಗ ಜ್ಞಾನೇಂದ್ರ: ಇದೇ ರೀತಿ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ. ಇದನ್ನು ನೀವೆಲ್ಲಾ ಒಪ್ಪಿಕೊಳ್ಳುತ್ತೀರೋ, ಇಲ್ಲವೋ ಗೊತ್ತಿಲ್ಲ. ಸ್ವಾತಂತ್ರ್ಯ ಬಂದ ನಂತರದ ಇತಿಹಾಸದಲ್ಲಿ ತಾಲ್ಲೂಕು ಮಟ್ಟದಲ್ಲಿ ರಸ್ತೆಗೋಸ್ಕರ ಇಷ್ಟೊಂದು ಹಣವನ್ನು ಯಾವತ್ತೂ ಕೂಡ ಬಿಡುಗಡೆ ಮಾಡಿರಲಿಲ್ಲ. ಸರ್ವಋತು ರಸ್ತೆ ಸಲುವಾಗಿ ಒಂದು ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. 2003ನೇ ಇಸವಿಯೊಳಗಾಗಿ ಒಂದು ಸಾವಿರ ಜನಸಂಖ್ಯೆ ಇರತಕ್ಕಂಥ ಎಲ್ಲಾ ಹಳ್ಳಿಗಳನ್ನು ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸತಕ್ಕಂಥ ರಸ್ತೆಗಳನ್ನು ನಿರ್ಮಾಣ ಮಾಡಬೇಕೆಂದು ಕೇಂದ್ರ ಸರ್ಕಾರ ನಿಮ್ಮ ಹಾಗೆ ಬರೀ ಭಾಷಣವನ್ನು ಮಾಡದೇ, ಈ ಯೋಜನೆಗೋಸ್ಕರ ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡಿದೆ. 2007ನೇ ಇಸವಿಯೊಳಗೆ 500 ಜನಸಂಖ್ಯೆ ಇರತಕ್ಕಂಥ ಪ್ರತಿಯೊಂದು ಹಳ್ಳಿಯನ್ನೂ ಕೂಡ ಮುಖ್ಯ ರಸ್ತೆಗೆ ಸೇರಿಸತಕ್ಕಂಥ ಸರ್ವಋತು ರಸ್ತೆಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ನಿಮ್ಮ ಹಾಗೆ ಒಂದು ಕಿಲೋಮೀಟರ್ ರಸ್ತೆಗೆ ಎರಡೂವರೆ ಲಕ್ಷ ರೂ. ಮೂರು ಲಕ್ಷ ರೂ. ಯನ್ನು ಕೊಡಲಿಲ್ಲ, ಒಂದು ಕಿಲೋ ಮೀಟರ್‌ಗೆ ಎಂಟೂವರೆ ಲಕ್ಷ ರೂ ಒಂಭತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನ್ಯಾಷನಲ್ ಹೈವೇ ಸ್ಪೆಸಿಫಿಕೇಷನ್ ಆಧಾರದ ಮೇಲೆ ಎಸ್ಟಿಮೇಟ್ ಮಾಡಿ ಹಣವನ್ನು ಕೊಟ್ಟರೆ, ಅದನ್ನು ನಿಮ್ಮ ಸರ್ಕಾರ ಯಾವ ರೀತಿ ಬಳಕೆ ಮಾಡಿಕೊಂಡಿದೆ ಎನ್ನುವುದನ್ನು ಸ್ವಲ್ಪ ನೋಡಿ. 2000–01ನೇ ಸಾಲಿನಲ್ಲಿ ಕೇಂದ್ರ ಸರ್ಕಾರ 409 ಕಾಮಗಾರಿಗಳನ್ನು ಮಂಜೂರು ಮಾಡಿದ್ದು, 1639.89 ಕಿಲೋ ಮೀಟರ್ ರಸ್ತೆ ಮಾಡಬೇಕು ಎಂದು 103 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿತು. ಇದರಲ್ಲಿ ನೀವು 2003ನೇ ಮಾರ್ಚ್‌ವರೆಗೆ ಪೂರ್ಣ ಮಾಡಿರತಕ್ಕಂಥ ಕಾಮಗಾರಿಗಳು 409ರಲ್ಲಿ 383 ಮಾತ್ರ ಹಾಗೂ 99.20

ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಅಂದರೆ, ಎರಡು ವರ್ಷಗಳಾದರೂ ನಿಮಗೆ ಈ ಕಾಮಗಾರಿಗಳನ್ನು ಪೂರ್ಣ ಮಾಡಲು ಆಗಲಿಲ್ಲ. ಒಂದೊಂದು ವರ್ಷಕ್ಕೆ ಇಷ್ಟೊಂದು ಹಣ ಕೊಡುತ್ತಾರೆ. ಆದರೆ ನೀವು ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದಿಲ್ಲ. ಇನ್ನು 2001–02ನೇ ಸಾಲಿನಲ್ಲಿ 903 ಕಾಮಗಾರಿಗಳಿಗೆ ಮಂಜೂರಾತಿ ನೀಡಿದ್ದು, 2705 ಕಿಲೋ ಮೀಟರ್ ರಸ್ತೆ ನಿರ್ಮಾಣದ ಗುರಿಯನ್ನಿಟ್ಟುಕೊಂಡು ಅದಕ್ಕೆ 219.8 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಅದರಲ್ಲಿ 2003ನೇ ಮಾರ್ಚ್‌ವರೆಗೆ ಆ 903 ಕಾಮಗಾರಿಗಳಲ್ಲಿ 7 ಕಾಮಗಾರಿಗಳು ಮಾತ್ರ ಪೂರ್ಣಗೊಂಡಿವೆ. ಅಂದರೆ ಕೇಂದ್ರ ಸರ್ಕಾರದವರು ಹಣ ಕೊಟ್ಟರೂ ನೀವು ರಸ್ತೆ ಮಾಡುವವರು ಅಲ್ಲ. ನೀವು ಆಡಳಿತ ಮಾಡುವವರು. ನಿಮ್ಮ ಪಕ್ಷದ ಸಂಸತ್ ಸದಸ್ಯರು ಮತ್ತು ನಿಮ್ಮ ಪಕ್ಷದ ಅಧ್ಯಕ್ಷರು ಸಂಸತ್ತಿನ ಎದುರುಗಡೆ ಇರುವಂಥ ಗಾಂಧಿ ಪ್ರತಿಮೆ ಎದುರಿಗೆ ಧರಣಿ ಮಾಡಿ, ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರ ಏನೂ ಕೊಡುವುದಿಲ್ಲ, ಕೊಟ್ಟಿದ್ದು ಸಾಲದು ಎಂದು ಘೋಷಣೆಗಳನ್ನು ಕೂಗುತ್ತಾರೆ. ಅವರು ಮತ್ತು ನೀವು ನಾಳೆ, ಇಲ್ಲಿಯ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯ ಎದುರಿಗೆ ಕುಳಿತುಕೊಂಡು ಬಾಯಿ ಮುಚ್ಚಿಕೊಳ್ಳಬೇಕು, ಇದನ್ನು ಖರ್ಚು ಮಾಡಲು ಆಗಲಿಲ್ಲ ಎಂದು. ಇದು ಒಂದು ಸರ್ಕಾರ ನಡೆಸುವಂಥ ರೀತಿಯೇ ಎಂದು ನೀವು ಹೇಳಬೇಕು. ಈ ಹಣವನ್ನು ಏಕೆ ಖರ್ಚು ಮಾಡಲು ಆಗಲಿಲ್ಲ? ಗ್ರಾಮೀಣ ಪ್ರದೇಶದ ಬಡವರಿಗೆ ರಸ್ತೆ ಸೌಕರ್ಯವನ್ನು ಕಲ್ಪಿಸುವುದಕ್ಕೋಸ್ಕರ ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡಿದರೆ ಅದನ್ನು ನೀವು ಖರ್ಚು ಮಾಡಲು ಆಗಲಿಲ್ಲ. ನೀವು ಟೆಂಡರ್ ಕರೆಯುವುದೇ ಒಂದು ವರ್ಷಕ್ಕೆ, ಎಸ್ಟಿಮೇಟ್ ಅಪ್ರೂವಲ್ ಮಾಡುವುದು ಒಂದು ವರ್ಷಕ್ಕೆ. ಅದನ್ನು ಅಪ್ರೂವಲ್ ಮಾಡಿ, ಅದನ್ನು ಡಿಸ್ಪ್ಯಾಚ್ ಮಾಡುವಂಥ ಕ್ಲರ್ಕಿಗೆ ಕೊಟ್ಟರೆ ಅವನು ಎರಡು ತಿಂಗಳು ತೆಗೆದುಕೊಳ್ಳುತ್ತಾನೆ. ಚೀಫ್ ಇಂಜಿನಿಯರ್ ಅವನ ಪರ್ಸಂಟೇಜನ್ನು ತೆಗೆದುಕೊಂಡು ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ಕೊಡುವುದು, ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರ ಪರ್ಸಂಟೇಜನ್ನು ತೆಗೆದುಕೊಂಡು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಕೊಡುವುದು ಆಗುತ್ತಿದೆ. ಇಲ್ಲಿ ನೀವು ದಂಧೆ ನಡೆಸುತ್ತೀರೇನು? ಗ್ರಾಮೀಣ ಪ್ರದೇಶದ ರಸ್ತೆ ಕಾಮಗಾರಿಗಳನ್ನು ಪೂರ್ಣ ಮಾಡಲು ನಿಮಗೆ ಆಗಲಿಲ್ಲ. 903 ಕಾಮಗಾರಿಗಳಲ್ಲಿ ನೀವು 7 ಕಾಮಗಾರಿಗಳನ್ನು ಮುಗಿಸಿದ್ದೀರಿ ಎಂದಾದರೆ ಇದರ ಅರ್ಥವೇನು? ನಿಮ್ಮಲ್ಲಿ ಇಂಜಿನಿಯರುಗಳು ಇಲ್ಲವೇ? ಅಧಿಕಾರಿಗಳು ಇಲ್ಲವೇ? ಅವರನ್ನು ಏಕೆ ನೀವು ಕೇಳಲಿಲ್ಲ? ಅಚೀವ್ ಮಾಡಲು ಏನು ತೊಂದರೆಯಾಯಿತು? ಕೆಲವು ಕಾಮಗಾರಿಗಳಿಗೆ ನಿಮ್ಮ ಹತ್ತಿರ ದುಡ್ಡು ಇಲ್ಲ. ಕಾಂಟ್ರಾಕ್ಟರುಗಳ ಬಿಲ್ಲಿನ ಸಾವಿರಾರು ಕೋಟಿ ರೂಪಾಯಿಗಳ ಹಣವನ್ನು ನೀವು ಪಾವತಿ ಮಾಡಲಿಲ್ಲ. ಕಾಂಟ್ರಾಕ್ಟರುಗಳು ಇಲ್ಲಿ ಸುತ್ತು ಹೊಡೆಯುತ್ತಾರೆ. ಯಾವ್ಯಾವದೋ ಫೈನಾನ್ಸ್‌ಗಳಲಿ ಸಾಲ ಮಾಡಿಕೊಂಡಿರುವ ಅವರು, ತಮ್ಮ ಹೆಂಡತಿ, ಮಕ್ಕಳ ಕೊರಳಲ್ಲಿ, ಕೈಯಲ್ಲಿ ಇದ್ದಂಥಾದ್ದನ್ನು ಅಡವಿಟ್ಟಿದ್ದಾರೆ. ಅವರಿಗೆ ನೀವು ಪೇಮೆಂಟ್ ಮಾಡಲು ಆಗಲಿಲ್ಲ. ನಿಮ್ಮನ್ನು ನಂಬಿಕೊಂಡು ಕೆಲಸ ಮಾಡಿದ ಅವರ ಮನೆಗಳು ಇವತ್ತು ಹಾಳಾಗುತ್ತಿವೆ. ಆದರೆ ಇಲ್ಲಿ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿದರೂ ಕೂಡ ನೂರಾರು ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡದೇ ಉಳಿಸಿಕೊಳ್ಳುತ್ತೀರಿ. ಬೇರೆಬೇರೆ ಬಾಬುಗಳಿಗಾಗಿ ಖರ್ಚು ಹಾಕುತ್ತೀರಿ. ಆದರೆ ಆ ರಸ್ತೆಗಳ ಕೆಲಸ ಮಾಡಿಸಲು ಆಗುವುದಿಲ್ಲ ಎಂದಾದರೆ, ನೀವು ಅಲ್ಲಿ ಕುಳಿತುಕೊಂಡು ಕಾಮಗಾರಿಗಳಿಗೆ ಹಣ ಬಿಡುಗಡೆ ಆಗಲಿಲ್ಲ, ಅಕ್ಕಿ

ಬಿಡುಗಡೆ ಆಗಲಿಲ್ಲ ಎಂದು ಹೇಳುತ್ತೀರಿ. ಈಗ ಹೇಳಿ ಸ್ವಾಮಿ. ಅಲ್ಲಿರುವ ನಿಮ್ಮವರನ್ನು ಸ್ವಲ್ಪ ಇಲ್ಲಿಗೆ ಸ್ಥಳಾಂತರ ಮಾಡಿ. ಯಾರು ಏನು ಮಾಡಿದ್ದಾರೆ ಎಂದು ಈ ರಾಜ್ಯದ ಜನತೆಗೆ ಗೊತ್ತಾಗಲಿ. ಒಂದು ಕಡೆ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ ಎಂದು ಹೇಳುತ್ತೀರಿ, ಇನ್ನೊಂದು ಕಡೆ ಕೇಂದ್ರ ಕೊಟ್ಟಿದ್ದನ್ನು ಖರ್ಚು ಮಾಡುವ ಶಕ್ತಿ ನಿಮಗೆ ಇಲ್ಲ. ನಿಮಗೆ ಈ ರಾಜ್ಯದಲ್ಲಿ ಆಡಳಿತ ನಡೆಸುವ ಸಾಮರ್ಥ್ಯ ಇಲ್ಲ. ಇದನ್ನು ಮಾಡುವ ಮನಸ್ಸು ಇಲ್ಲ, ಇದಕ್ಕೆ ಬದ್ಧತೆ ಇಲ್ಲ ಎಂದಾದರೆ ನೀವು ಆಡಳಿತವನ್ನು ಯಾವ ರೀತಿ ನಡೆಸುತ್ತಿದ್ದೀರಿ? ಜಿಆರ್‌ಡಬ್ಲ್ಯೂಎಸ್‌ಬಿ, ಕುಡಿಯುವ ನೀರಿನ ಯೋಜನೆಗಳು 2000–01ನೇ ಸಾಲಿನಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದ ಕೇಂದ್ರದಿಂದ ಬರುವ 67.21 ಕೋಟಿ ರೂಪಾಯಿಗಳನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳದೆ ನಷ್ಟ ಆಯಿತು. ಇವತ್ತೂ ಕೂಡ ನಮ್ಮ ರಾಜ್ಯದಲ್ಲಿ ಬರ ಇದೆ. ಕೇಂದ್ರದ 67.21 ಕೋಟ ರೂಪಾಯಿ ನಷ್ಟ ಆಯಿತು ಅಂದರೆ ನೀವು ಸರಿಯಾದಂಥ ಕಾಲದಲ್ಲಿ ಹಣ ಬಿಡುಗಡೆ ಮಾಡಿ ಹಿಂದಿನ ವರ್ಷದಲ್ಲಿ ಖರ್ಚು ಮಾಡದೆಯೇ ಕೇಂದ್ರದ ಶರತ್ತಿಗೆ ಅನುಗುಣವಾಗಿ ನೀವು ಕೆಲಸ ಮಾಡದೆಯೇ ಅಷ್ಟು ಹಣ ಕಟ್ ಆಯಿತು. ಇಷ್ಟು ಹಣ ಇದ್ದಿದ್ದರೆ ನಿಮ್ಮ ಮಿನಿ ವಾಟರ್ ಸಪ್ಲೈ ಸ್ಕೀಂನಲ್ಲಿ ಒಂದು ಸ್ಕೀಂಗೆ 5 ಲಕ್ಷ ರೂಪಾಯಿಗಳಂತೆ ನಮ್ಮ ಹಳ್ಳಿಗೆಲ್ಲಾ ಒಂದೊಂದು ಸ್ಕೀಂ ಆಗುತ್ತಿತ್ತು. ಏನು ಹೇಳುತ್ತೀರಿ ಸ್ವಾಮಿ?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಪೂರೈಕೆ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, 2002–03ರಲ್ಲಿ ಕೇಂದ್ರ ಸರ್ಕಾರದವರು ಕೊಟ್ಟಂಥ ಎಲ್ಲಾ ಹಣವನ್ನು ಉಪಯೋಗ ಮಾಡಿದ್ದರಿಂದ, ಚೆನ್ನಾಗಿ ಉಪಯೋಗ ಮಾಡಿಕೊಂಡಿದ್ದಾರೆಂದು ಲಾಸ್ಟ್ ಇಯರ್ 22.50 ಕೋಟಿ ರೂಪಾಯಿಗಳನ್ನು ಎಕ್ಸ್‌ಟ್ರಾ ಕೊಟ್ಟಿದ್ದಾರೆ. ಈ ಸಾರಿ ಪುನಃ ಮೊದಲನೇ ಕಂತಿನಲ್ಲಿ 6 ಕೋಟಿ ರೂಪಾಯಿಗಳನ್ನು ಎಕ್ಸ್‌ಟ್ರಾ ಕೊಟ್ಟಿದ್ದಾರೆ. ಆ ಹಣಕ್ಕೆ ಇಕ್ವಲ್ ಆಗಿ ನಮ್ಮ ರಾಜ್ಯ ಸರ್ಕಾರವೂ ಕೊಟ್ಟು ಕೆಲಸ ಎಲ್ಲಾ ಮಾಡುತ್ತಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ನಾನು ಮೊದಲು ಹೇಳುವಾಗಲೇ 2000–01 ಮತ್ತು 2001–02ರ ಅಂಕಿಅಂಶ ಎಂದು ಹೇಳಿದೆ. ತಾವು ಆ ವರ್ಷದಲ್ಲಿ ಮಂತ್ರಿಗಳಾಗಿರಲಿಲ್ಲ. 2000–01 ಮತ್ತು 2001–02ರ ಸಾಲಿನಲ್ಲಿ 67.21 ಕೋಟಿ ರೂಪಾಯಿ ನಷ್ಟವಾಯಿತು.

ಶ್ರೀ ವಿ. ಪಾಪಣ್ಣ: ಮಾನ್ಯ ಉಪಾಧ್ಯಕ್ಷರೆ, ಇವರು ಯಾವ ವರ್ಷದ ಬಜೆಟ್ ಮೇಲೆ ಮಾತನಾಡುತ್ತಿದ್ದಾರೆ ಎನ್ನುವುದನ್ನು ದಯವಿಟ್ಟು ಹೇಳಲಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ನಾನು ಈಲ್ಡ್ ಆಗಲಿಲ್ಲ. ನಾನು ಇನ್ನೂ ಈಲ್ಡ್ ಆಗಲಿಲ್ಲ.

ಶ್ರೀ ವಿ. ಪಾಪಣ್ಣ: ಮಾನ್ಯ ಸದಸ್ಯರು ಯಾವ ವರ್ಷದ ಬಜೆಟ್ ಮೇಲೆ ಮಾತನಾಡುತ್ತಾರೆ ಎನ್ನುವುದನ್ನು ಹೇಳಿ ಎಂದು ಕೇಳಿ. ಯಾವ ವರ್ಷದ ಬಜೆಟ್ ಮೇಲೆ ಭಾಷಣ ಮಾಡುತ್ತಾ ಇದ್ದಾರೆ ಎನ್ನುವುದನ್ನು ದಯವಿಟ್ಟು ಕೇಳಿ. ಅದನ್ನು ನಾನು ತಿಳಿದುಕೊಳ್ಳಬೇಕಾಗಿದೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಇದೆಲ್ಲಾ ನಷ್ಟವಾಗುವಾಗ ನಮ್ಮ ಜೊತೆಯಲ್ಲಿಯೇ ಇದ್ದರಲ್ಲ. ಈಗ ಅವರು ಆ ಕಡೆ ಹೋದ ಮೇಲೆ ನಷ್ಟ ಆಯಿತು. ನಷ್ಟ ಆದಮೇಲೆಯೇ ಆ ಕಡೆ ಹೋಗಿದ್ದು. ನಾನು ಹೇಳುವುದು ಏನೆಂದರೆ, 67.21 ಕೋಟಿ ರೂ.

ಹಣದಲ್ಲಿ ಎಷ್ಟು ಹಳ್ಳಿಗಳಿಗೆ ನಾವು ಶುದ್ಧವಾದ ನೀರನ್ನು ಕೊಡಬಹುದಾಗಿತ್ತು? ರಾಜ್ಯ ಸರ್ಕಾರದಲ್ಲಿ ಹಣ ಇಲ್ಲವೆಂದು ಹೇಳುತ್ತಾರೆ. ಬಾವಿ ತೋಡಬೇಕೆಂದು ಕೇಳಿದರೆ ಅದಕ್ಕೆ ಹಣ ಇಲ್ಲ ಎಂದು ಹೇಳುತ್ತಾರೆ, ನಲ್ಲಿ ಪೈಪ್ ಅನ್ನು ಎಕ್ಸ್‌ಟೆನ್‌ಷನ್ ಮಾಡಬೇಕು ಎಂದು ಹಣ ಕೇಳಿದರೆ ಅದಕ್ಕೆ ಇಲ್ಲ ಎಂದು ಹೇಳುತ್ತಾರೆ. ಬೇರೆ ಬೇರೆ ಯೋಜನೆಗಳನ್ನು ಅಲ್ಲಿಯೇ ನಿಲ್ಲಿಸಿ ಆ ಹಣವನ್ನು ಡೈವರ್ಟ್ ಮಾಡಿಕೊಳ್ಳುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಬರುವಂಥ ಹಣವನ್ನು ನಾವು ಸದುಪಯೋಗ ಮಾಡಿಕೊಳ್ಳದೆಯೇ ಈ ರೀತಿ ಕೋಟಿಗಟ್ಟಲೆ ಹಣ ನಷ್ಟವಾಗುತ್ತಿದೆ. ಒಂದೊಂದು ಬಾಬಿನಲ್ಲಿ ಕೂಡ ಇಷ್ಟಿಷ್ಟು ಕೋಟಿ ಹಣ ನಷ್ಟವಾಗುತ್ತಿದೆ. ನಾನು ಎಲ್ಲೋ ಕೆಲವು ಸ್ಯಾಂಪಲ್‌ಗಳನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನಷ್ಟೆ. ಪೂರ್ಣ ಹೇಳುತ್ತಿಲ್ಲ. ಇದನ್ನು ನಾನು ಹೇಳಿದ್ದು ಅಲ್ಲ. 'ಇಷ್ಟು ಹಣವನ್ನು ನೀವು ಲ್ಯಾಪ್ಸ್ ಮಾಡಿಕೊಂಡಿದ್ದೀರಿ, ರಾಜ್ಯಕ್ಕೆ ಸಿಗಬೇಕಾದ ಹಣವನ್ನು ಕಳೆದುಕೊಂಡಿದ್ದೀರಿ' ಎಂದು ಸಿಎಜಿ ರಿಪೋರ್ಟ್‌ನಲ್ಲಿ ಕಾಮೆಂಟ್ ಮಾಡಿದ್ದಾರೆ. ಇವೆಲ್ಲವನ್ನು ಮಂತ್ರಿಗಳಾಗಿರತಕ್ಕಂಥವರು ನೀವು ಆ ಪುಟಗಳನ್ನು ತೆಗೆದು ನೋಡದೇ ಹೋದರೆ ನಿಮ್ಮ ಇಲಾಖೆಯ ಮೇಲೆ ಏನು ಹತೋಟಿ ಬರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ ಅಧಿಕಾರಿಗಳು ಹೇಳುವಂಥದ್ದೇ ನಿಮ್ಮನ್ನು ಹೊಗಳುವಂಥದ್ದೇ ನಿಮಗೆ ವಿಧೇಯತೆಯಿಂದ ವರ್ತನೆ ಮಾಡುವಂಥದ್ದೇ ನಿಮ್ಮ ದೊಡ್ಡತನ ಎಂದು ತಿಳಿದುಕೊಂಡರೆ ಬಹುಶಃ ಬಹಳ ದೊಡ್ಡ ನಷ್ಟವನ್ನು ನಮ್ಮ ರಾಜ್ಯ ಅನುಭವಿಸಬೇಕಾಗುತ್ತದೆ.

ಶ್ರೀ ಎ. ಪಾಪಣ್ಣ: ಮಾನ್ಯ ಉಪಾಧ್ಯಕ್ಷರೆ, ಹೇಳುವವರಿಗೆ ಮತ್ತು ಕೇಳುವವರಿಗೂ ಕೈಮುಗಿದು ಕೇಳಿಕೊಳ್ಳುತ್ತೇನೆ. ಒಂದ್ನಿಮಿಷ ದಯವಿಟ್ಟು ನನ್ನ ಮಾತು ಕೇಳಿ.

(ಗೊಂದಲ)

ಶ್ರೀ ಎ. ಪಾಪಣ್ಣ: ಈ ಸದನದಲ್ಲಿ 2003–04ನೇ ಸಾಲಿನ ಬಜೆಟ್ ಮಂಡನೆ ಮಾಡಿರುವುದು. ಅದರ ಬಗ್ಗೆ ಮಾತನಾಡುವುದಕ್ಕೆ ಹೇಳಿ ಸ್ವಾಮಿ.

(ಗೊಂದಲ)

ಶ್ರೀ ಎ. ಪಾಪಣ್ಣ: ನಮಗೂ ಅವಕಾಶ ಮಾಡಿಕೊಡಿ. ನಿಮ್ಮಷ್ಟೇ ಹಕ್ಕು ನಮಗೂ ಇದೆ. ನಾವು ಒಬ್ಬರು ಮಾತನಾಡಿದರೆ ನೀವೇಕೆ ನಾಲ್ಕು ಜನ ಎದ್ದುನಿಂತುಕೊಳ್ಳುತ್ತೀರಿ?

ಶ್ರೀ ಎಸ್. ಸುರೇಶ್ ಕುಮಾರ್: ಅಲ್ಲ, ಇಲ್ಲಿ ಶ್ರೀ ಆರಗ ಜ್ಞಾನೇಂದ್ರರವರು ಏನು ಮಾತನಾಡುತ್ತಿದ್ದಾರೆ ಅದು ರಾಜ್ಯಸಭಾ ಚುನಾವಣೆಗಿಂತ ಮುಂಚಿನ ಅವಧಿಯದ್ದು. ರಾಜ್ಯಸಭಾ ಚುನಾವಣೆ ಆದ ಮೇಲಿನದಲ್ಲ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಶಾಸಕರಾದ ಪಾಪಣ್ಣನವರಿಗೂ ಅವಕಾಶ ಸಿಗುತ್ತದೆ. ಆಗ ತಾವೂ ಕೂಡ ಮಾತನಾಡಬಹುದು.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಅದಕ್ಕೆ ಸ್ಪೀಕರ್ ಇದ್ದಾರೆ ಸ್ವಾಮಿ. ಪಾಪಣ್ಣನವರನ್ನು ಅಲ್ಲಿ ತಂದು ಕೂರಿಸಿದಾಗ ಯಾವ ರೀತಿಯಲ್ಲಿ ಸಮಯ ವ್ಯಯ ಮಾಡುತ್ತಿದ್ದೇವೆ, ಏನು ಎನ್ನುವುದನ್ನು ಕೇಳೋಣ. ಈಗ ನನಗೆ ಸ್ಪೀಕರ್‌ರವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ ಪಾಪಣ್ಣನವರೇ. ದಯವಿಟ್ಟು ತಾವು ಹಿರಿಯರು, ಸುಮ್ಮನೆ ಕುಳಿತುಕೊಳ್ಳಿ. ಈಗ ವಿಷಯಕ್ಕೆ ಬರೋಣ. ನಮ್ಮ ಈ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಬೇಡಿಕೆ ಬಗ್ಗೆ ಮಾತನಾಡುತ್ತಿದ್ದೇವೆ. ಈ

ಬೇಡಿಕೆಗಳನ್ನು ನಾವು ಯಾವ ರೀತಿ ಒಪ್ಪಬೇಕೋ, ಎಲ್ಲಾದರೂ ನ್ಯೂನತೆಗಳು ಇವೆಯೋ, ಇದನ್ನು ನಾವು ಹೇಳದೇ ಹೋದರೆ ಬೇಡಿಕೆಗಳ ಮೇಲಿನ ಚರ್ಚೆಯ ಉದ್ದೇಶವಾದರೂ ಏನು? ಹಾಗಾದರೆ ಕೈ ಎತ್ತಿ ಹೋಗಿಬಿಡೋಣ. ಅವರಿಗೆ ಪಾಪ ಗಡಿಬಿಡಿ ಆಗಿಬಿಟ್ಟಿದೆ. ಕೈ ಎತ್ತಿ ಅವರಿಗೆ ಅರ್ಜೆಂಟ್ ಹೋಗಬೇಕಾಗಿದೆ. ನಮಗೆ ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ಇನ್ನು ರಾಜ್ಯದಲ್ಲಿ 21,008 ಜನವಸತಿ ಪ್ರದೇಶಗಳಲ್ಲಿ ಕುಡಿಯುವ ನೀರಿನ ಗುಣಮಟ್ಟದ ಸಮಸ್ಯೆ ಇದೆ. ಅಂದರೆ ಶುದ್ಧವಾದಂಥ ನೀರು ಸಿಗುವುದಿಲ್ಲ. ಲವಣಾಂಶ, ಫ್ಲೋರೈಡ್ ಇತ್ಯಾದಿ ಇದೆ. ಮೊನ್ನೆಯ ದಿನ ನಮ್ಮ ಅನೇಕ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಚರ್ಚೆ ಮಾಡಿದರು. ಅದಕ್ಕಾಗಿ ಕೇಂದ್ರ ಸರ್ಕಾರದ ಸಬ್‌ಮಿಷನ್ ಎನ್ನುವ ಒಂದು ಯೋಜನೆ ಇದೆ. ಇದು ನೀರಿನ ಗುಣಮಟ್ಟವನ್ನು ಹೆಚ್ಚಿಸತಕ್ಕಂಥ ಒಂದು ಪ್ರಾಜೆಕ್ಟ್ ಆಗಿದೆ. ಇದರ ಬಗ್ಗೆ ತಮಗೆ ಗೊತ್ತಿದೆ ಎಂದು ಭಾವಿಸುತ್ತೇನೆ. 1994–95 ರಿಂದ 2002–03ನೇ ವರ್ಷದ ವರೆಗೆ 99 ಯೋಜನೆಗಳಿಗೆ ಕೇಂದ್ರ ಸರ್ಕಾರ ಮಂಜೂರಾತಿ ಕೊಟ್ಟಿದೆ. ಇದರ ಪೈಕಿ 45 ಯೋಜನೆಗಳು ಮಾತ್ರ ರಾಜ್ಯದಲ್ಲಿ ಆರಂಭವಾಗಿದೆ. ಇದರಲ್ಲಿ 9 ಮಾತ್ರ ಪೂರ್ಣಗೊಂಡಿದೆ. ಇದು ಯಾವ ಕಾರಣಕ್ಕಾಗಿ ಎಂದು ನನಗೆ ಗೊತ್ತಿಲ್ಲ.

ಶ್ರೀ ಕೆ.ಬಿ. ಕೋಳಿವಾಡ್: ಕುಡಿಯುವ ನೀರಿನಲ್ಲಿ ಲವಣಾಂಶ ಇರತಕ್ಕ ಫ್ಲೋರೈಡ್ ನಮ್ಮ ರಾಜ್ಯದಲ್ಲಿ 5838 ವಸತಿ ಪ್ರದೇಶಗಳಲ್ಲಿದೆ, ಇದು ಬಹಳ ಆಘಾತಗಾರಿಯಾದಂಥ ಲವಣಾಂಶವಾಗಿದ್ದು, ಇದನ್ನು ಹೋಗಲಾಡಿಸಲಿಕ್ಕೆ ರಾಜೀವಗಾಂಧಿ ಸಬ್‌ಮಿಷನ್ ಸ್ಕೀಂ ಕೆಳಗೆ ಕೇಂದ್ರ ಸರ್ಕಾರ ಎಷ್ಟು ಹಣ ಕೊಡುತ್ತಿದೆ? ಆಕ್ಸಿಲರೇಟೆಡ್ ರೂರಲ್ ವಾಟರ್ ಸಪ್ಲೈಸ್ ಸ್ಕೀಂಗೆ 111 ಕೋಟಿ ರೂಪಾಯಿ ಕೊಡುತ್ತದೆ. ಅದರೊಳಗೆ ಅದರ 20 ಪರ್ಸೆಂಟ್ ಹಣವನ್ನು ಇದಕ್ಕೆ ನಾವು ಉಪಯೋಗ ಮಾಡಿಕೊಳ್ಳಬೇಕು. ಇದಕ್ಕಾಗಿ ಕೇಂದ್ರ ಸರ್ಕಾರ ಸಪರೇಟ್ ಆಗಿ ಹಣ ಕೊಡುತ್ತಿಲ್ಲ. ಎಆರ್‌ಡಬ್ಲ್ಯೂಎಸ್‌ಸಿಗೆ ಎಷ್ಟು ಹಣ ಕೊಡುತ್ತಾರೋ ಅದರೊಳಗೆ 20 ಪರ್ಸೆಂಟ್ ಅನ್ನು ನಾವು ಈ ರಾಜೀವಗಾಂಧಿ ಸಬ್‌ಮಿಷನ್ ಸ್ಕೀಂಗೆ ಉಪಯೋಗ ಮಾಡಬೇಕು. ಅದಕ್ಕಾಗಿಯೇ ಕೇಂದ್ರ ಸರ್ಕಾರಕ್ಕೆ ಕಳೆದ ಎರಡು ವರ್ಷಗಳಿಂದ ಇವುಗಳನ್ನೆಲ್ಲಾ ಹೋಗಲಾಡಿಸಲಿಕ್ಕೆ 1000 ಕೋಟಿ ರೂಪಾಯಿ ಹಣ ಬೇಕಾಗುತ್ತದೆ, ಪ್ರತೀ ವರ್ಷ 100 ಕೋಟಿ ರೂ. ನಂತೆ 5 ವರ್ಷ ನೀವು 500 ಕೋಟಿ ರೂ. ಹಣ ಕೊಡಿ ಮತ್ತು 500 ಕೋಟಿ ರೂಪಾಯಿ ಅನ್ನು ರಾಜ್ಯ ಸರ್ಕಾರ ಹಾಕಿ ಈ ಸಮಸ್ಯೆಯನ್ನು ಬಗೆಹರಿಸೋಣ ಎಂದು ಕೇಳಿದರೂ ಸಹಿತ, ಮಾನ್ಯ ಮುಖ್ಯಮಂತ್ರಿಗಳು ಸಹ ಪತ್ರ ಬರೆದಿದ್ದಾರೆ, ಆದರೆ ಅಲ್ಲಿಂದ ಇವತ್ತಿನವರೆಗೂ ಉತ್ತರ ಬಂದಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ನಿಮ್ಮ ವಿಷಯ ಸಮಿತಿಯ ವರದಿಯ ಪುಟ 12ರಲ್ಲಿ ಎಷ್ಟು ಹಣ ಕೇಂದ್ರದಿಂದ ಬಂದಿದೆ, ಎಷ್ಟು ಕಾಮಗಾರಿಗಳು ಎನ್ನುವುದು ಇದೆ. 99 ಯೋಜನೆಗಳು ಮಂಜೂರಾಗಿದೆ. 45 ಯೋಜನೆಗಳು ಮಾತ್ರ ರಾಜ್ಯದಲ್ಲಿ ಆರಂಭವಾಗಿದೆ. ಅದರಲ್ಲಿ 9 ಮಾತ್ರ ಪೂರ್ಣಗೊಂಡಿದೆ. ಇದನ್ನು ನಾನು ನಿಮ್ಮ ರಿಪೋರ್ಟ್‌ನ ಆಧಾರದ ಮೇಲೆ ಹೇಳಿರತಕ್ಕಂಥದ್ದು. ಅದರಿಂದಾಗಿ ನೀವು ಇಂಥ ಒಂದು ಜನಪರವಾಗಿರತಕ್ಕಂಥ ಯೋಜನೆ ಬಗ್ಗೆ ವಿಶೇಷವಾಗಿ ಗಮನಕೊಡತಕ್ಕಂಥ ಅವಶ್ಯಕತೆ ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, 10ನೇ ಹಣಕಾಸಿನ ಆಯೋಗಕ್ಕೆ ಸಂಬಂಧಿಸಿದಂತೆ, ಕೇಂದ್ರದಿಂದ ರಾಜ್ಯದ ಪಂಚಾಯಿತಿಗಳಿಗೆ 110.89 ಕೋಟಿ ರೂ. ಹಣವನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಗ್ರಾಮೀಣ ರಸ್ತೆ, ಚರಂಡಿ, ಕುಡಿಯುವ

ನೀರು ಮುಂತಾದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಇದನ್ನು ಬಿಡುಗಡೆ ಮಾಡಲಾಯಿತು. ನಿಮ್ಮ ಸರ್ಕಾರಕ್ಕೆ 2000ನೇ ಇಸ್ವಿಯಲ್ಲಿ 110.89 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿತ್ತು. ಹತ್ತನೇ ಹಣಕಾಸು ಇದರಲ್ಲಿ ಏನು ಬಿಡುಗಡೆ ಮಾಡಿತ್ತು ಅದನ್ನು ನಾನೀಗ ಹೇಳಿದಂಥ ಬಾಬ್ತುಗಳಿಗೆ ಖರ್ಚು ಮಾಡಬೇಕಾಗಿತ್ತು. ಆದರೆ ನಿಮ್ಮ ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿಗಳು ಒಂದು ಸುತ್ತೋಲೆ ಹೊರಡಿಸಿದ್ದಾರೆ. ಮಾನ್ಯ ಮಂತ್ರಿಗಳು ತಾವು ಇದನ್ನು ನೋಡಬೇಕು. ಅದನ್ನೆಲ್ಲಾ ತೆಗೆದುಕೊಂಡು ಹೋಗಿ ಪಂಚಾಯಿತಿ ಎಲೆಕ್ಟ್ರಿಕ್ ಬಿಲ್ ಕಟ್ಟಿ ಅಂತ, ಗ್ರಾಮೀಣ ಪ್ರದೇಶದ ಮೂಲಭೂತ ಸೌಕರ್ಯಗಳಿಗೋಸ್ಕರ ಕೇಂದ್ರ ಸರ್ಕಾರ 10ನೇ ಹಣಕಾಸು ಯೋಜನೆ ಆಯೋಗದ ವತಿಯಿಂದ ನಿಮಗೆ ಹಣ ಕೊಟ್ಟರೆ ಅದರಲ್ಲಿ 40.87 ಕೋಟಿ ರೂಪಾಯಿಗಳನ್ನು ರಾಜ್ಯದ ಗ್ರಾಮ ಪಂಚಾಯಿತಿಗಳು ಬೀದಿ ದೀಪ ಏನು ಉರಿಸಿದ್ದಾರೆ ಆ ಬೀದಿ ದೀಪದ ಎಲೆಕ್ಟ್ರಿಕ್ ಬಿಲ್ ಬಾಕಿ ಇತ್ತು. ಅದಕ್ಕೆ ಕಟ್ಟಿದ್ದಾರೆ. ಅಂದರೆ ಈ ರಾಜ್ಯದಲ್ಲಿ ಎಲೆಕ್ಟ್ರಿಕ್ ಬಿಲ್ ಕಟ್ಟುವುದಕ್ಕೂ ಕೂಡ ನಿಮ್ಮ ಸರ್ಕಾರಕ್ಕೆ ಹಾಗೂ ಗ್ರಾಮ ಪಂಚಾಯಿತಿಗಳಿಗೆ ಶಕ್ತಿ ಇಲ್ಲ. ಇದಕ್ಕೂ ಕೇಂದ್ರ ಸರ್ಕಾರದ ಹಣ ಬೇಕು, ಹಾಗಾದರೆ ನೀವು ಇಲ್ಲಿ ಕುಳಿತು ಏನು ಮಾಡುತ್ತೀರಿ? ನೀವು ಇಲ್ಲಿ ಕುಳಿತುಕೊಂಡು ಪಟೇಲ್‌ಗಿರಿ ಮಾಡುತ್ತೀರಾ? ನಮ್ಮಲ್ಲಿ ಮೊದಲು ಪಟೇಲ್‌ರು, ಶ್ಯಾನುಭೋಗರು ಎಂದು ಇದ್ದರು ಅವರು ಬಹಳ ಒಳ್ಳೆಯವರು ಇದ್ದರು, ನಾನು ಅವರಿಗೆ ಬಯ್ಯುವುದಿಲ್ಲ, ಏಕೆಂದರೆ ಆ ಕಾಲದಲ್ಲಿ ಅವರೆಲ್ಲರೂ ಬಹಳ ಒಳ್ಳೆಯವರು ಇದ್ದರು. ಅಂದರೆ ಸುಮ್ಮನೆ ಪೋಸ್ಟ್ ಆಫೀಸ್ ಕೆಲಸ, ಪೋಸ್ಟ್ ಮ್ಯಾನ್ ಕೆಲಸ ಅಲ್ಲಿಂದ ಬಂದಿದ್ದನ್ನು ಇಲ್ಲಿಂದ ಕೊಡುವುದು, ನಮ್ಮಲ್ಲಿ ಊಟದ ಮನೆಯಲ್ಲಿ ಕೆಲವರು ಯಜಮಾನಿಕೆ ಮಾಡುತ್ತಾರೆ, ಹೇಗೆಂದರೆ, ಅವನು ಬಡಿಸುವವನು ಬಡಿಸುತ್ತಿರುತ್ತಾನೆ ಆದರೆ ಇವನು ಸುಮ್ಮನೆ ನಿಂತುಕೊಂಡು ಯಜಮಾನಿಕೆ ಮಾಡುವುದು, ತಿಳಿಸಾರು, ರಸಂ ಬರುತ್ತಿರುತ್ತದೆ, ಇವರು ಏನು ತಂದಿದ್ದಿಯಾ? ಎಂದು ಕೇಳುವುದು ಅವನು ರಸಂ ತಂದಿದ್ದೇನೆ ಅಂದರೆ ಹೋಗಲಿ ಎಂದು ಹೇಳುವುದು, ಮತ್ತೊಂದು ಸಾರಿ ಇನ್ನೊಬ್ಬ ಪಾಯಸ ತರುತ್ತಾನೆ ಅದಕ್ಕವನು ಏನು ತಂದಿದ್ದೀಯೋ ಎಂದು ಕೇಳುವುದು, ಅದಕ್ಕವನು ಪಾಯಸ ಎಂದು ಹೇಳಿದರೆ ಸರಿ ಪಾಯಸ ಹೋಗಲಿ ಎಂದು ಹೇಳುವುದು, ಅಂದರೆ ಅವನು ಹೇಳದಿದ್ದರೂ ಅಲ್ಲಿಗೆ ಎಲ್ಲವೂ ಹೋಗುತ್ತಿದೆ ಆದರೂ ಇವನು ಸುಮ್ಮನೆ ಹೇಳುವುದು. ಹಾಗೆ ನಿಮ್ಮ ಸರ್ಕಾರ ಆಗುವುದಾದರೆ ನಮ್ಮದೇನೂ ತೊಂದರೆಯಿಲ್ಲ. ಆದರೆ ನೀವು ಇಲ್ಲಿ ಹೇಳಬೇಕಾಗುತ್ತದೆ, ಕೇಂದ್ರ ಸರ್ಕಾರ 110 ಕೋಟಿ ರೂಪಾಯಿ ಕೊಟ್ಟರೆ ನಿಮ್ಮ ರಾಜ್ಯದ ಕಾರ್ಯದರ್ಶಿಗಳು ನಿಮ್ಮ ಆರ್‌ಡಿಪಿಆರ್ ಕಾರ್ಯದರ್ಶಿಗಳು ಎಲೆಕ್ಟ್ರಿಕ್ ಬಿಲ್ ಕಟ್ಟಿ ಎಂದು ಸುತ್ತೋಲೆ ಕಳುಹಿಸುತ್ತಾರೆ. ಕೇಂದ್ರ ಸರ್ಕಾರದ ಯೋಜನೆಯನ್ನು ನೀವು ಯಾವ ರೀತಿ ನಿಷ್ಪ್ರಯೋಜನೆ ಮಾಡಿದಿರಿ, ನಿಮಗೆ ಕೇಂದ್ರ ಸರ್ಕಾರ ಹಣ ಕೊಡಬೇಕೆ? ಕೇಂದ್ರ ಸರ್ಕಾರ ಯಾವ ಬಾಬುಗಳಿಗೆ ಹಣ ಕೊಡುತ್ತದೆಯೋ ಆ ಬಾಬುಗಳಿಗೆ ನೀವು ಆ ಹಣವನ್ನು ಉಪಯೋಗಿಸುವುದಿಲ್ಲ. ಅದನ್ನು ಬೇರೆ ಕಡೆಗೆ ಡೈವರ್ಟ್ ಮಾಡಿಕೊಳ್ಳಲಿಕ್ಕೆ ನಿಮಗೆ ಅಧಿಕಾರ ಕೊಟ್ಟವರು ಯಾರು? ನೀವು ಯಾವ ರೀತಿ ಅಧಿಕಾರವನ್ನು ಚಲಾಯಿಸುತ್ತೀರಿ? ಇದು ಅತ್ಯಂತ ಬಹಳ ಸಂಕಟದ ವಿಚಾರ ನಾನು ಇದನ್ನು ಪ್ರತಿಭಟನೆ ಮಾಡುತ್ತೇನೆ, ಈ ರೀತಿಯಾಗಿ 27 ಜಿಲ್ಲಾ ಪಂಚಾಯತ್‌ಗಳು ಕೇಂದ್ರದ ಹಣವನ್ನು ಬೇರೆ ಬೇರೆ ಸಂಗತಿಗಳಿಗೆ ಉಪಯೋಗಿಸಿವೆ. ಕೇಂದ್ರ ಯಾವ ಕಾರ್ಯಕ್ರಮಗಳಿಗಾಗಿ ಬಿಡುಗಡೆ ಮಾಡಿತ್ತೋ ಅದಕ್ಕೆ ಬದಲಾಗಿ ಬೇರೆ ಬೇರೆ ಕಾರ್ಯಕ್ರಮಗಳಿಗಾಗಿ ಹಣವನ್ನು ಉಪಯೋಗಿಸಿದ್ದಾರೆ.

ಶ್ರೀ ಕೆ.ಬಿ. ಕೋಳಿವಾಡ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು): ಅದೇ ಗ್ರಾಮೀಣಾಭಿವೃದ್ಧಿಯ ಕಾರ್ಯದರ್ಶಿಯವರು ಮತ್ತೊಂದು ಸುತ್ತೋಲೆ ಹೊರಡಿಸಿದ್ದಾರೆ ಅದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿಗೆ ಏನು ಎಲೆಕ್ಟ್ರಿಸಿಟಿ ಖರ್ಚಾಗುತ್ತಿದೆ ಆ ಹಣವನ್ನು ಯಾವುದೇ ಅಭಿವೃದ್ಧಿ ಹಣದಲ್ಲಿ ಖರ್ಚು ಮಾಡಬಾರದು, ಜನರಿಂದ ಅದನ್ನು ವಸೂಲಿ ಮಾಡಿ ಅಂದರೆ ಯಾರು ನೀರನ್ನು ಉಪಯೋಗಿಸುತ್ತಾರೆ ಅವರಿಂದ ಹಣವನ್ನು ವಸೂಲಿ ಮಾಡಿ ಆ ಎಲೆಕ್ಟ್ರಿಕ್ ಬಿಲ್‌ನ್ನು ಕಟ್ಟಬೇಕೆಂದು ಮತ್ತೊಂದು ಸರ್ಕ್ಯೂಲರ್ ಇದೆ ಅದನ್ನು ತಾವು ನೋಡಬೇಕು.

ಶ್ರೀ ಆರಗ ಜ್ಞಾನೇಂದ್ರ: ಮೊನ್ನೆ ದಿನ ಕಳುಹಿಸಿದಿರೆ ನಾನು ಅದನ್ನು ನೋಡಿದ್ದೇನೆ, ಬಹುಶಃ ಮುಂದಿನ ತಿಂಗಳಿನಿಂದ ನಲ್ಲಿ ನೀರು ಕಟ್ ಆಗಬಹುದು. ಏಕೆಂದರೆ, ಅವರಿಂದ ಆಗುವುದಿಲ್ಲ ಸೋರ್ಸ್ ಕಲೆಕ್ಟ್ ಮಾಡುವುದಕ್ಕಾಗುವುದಿಲ್ಲವೆಂದು ಅವರು ಈಗಾಗಲೇ ಹೇಳುತ್ತಿದ್ದಾರೆ, ಮುಂದಿನ ತಿಂಗಳಿಂದ ಆ ಸುತ್ತೋಲೆಯನ್ನು ಬದಲಾಯಿಸಬೇಕಾಗಬಹುದು. ನಿಮ್ಮ ಚಿಂತನೆ ಸರಿಯಿದೆ ನಾನು ಒಪ್ಪುತ್ತೇನೆ, ಏಕೆಂದರೆ ಅವರ ಸೋರ್ಸ್‌ನಿಂದಾಗಿ ಎಲೆಕ್ಟ್ರಿಸಿಟಿ ಬಿಲ್ ಕಟ್ಟಬೇಕು, ಗ್ರಾಹಕರು ಯಾರು ಇದ್ದಾರೆ, ಅಂದರೆ ನೀರನ್ನು ಯಾರು ಉಪಯೋಗಿಸುತ್ತಾರೆ, ಅವರಿಂದ ಸ್ವಲ್ಪ ಹಣವನ್ನು ಕಲೆಕ್ಟ್ ಮಾಡಿ ಕೊಡಬೇಕು, ಅವರು ಕಲೆಕ್ಟ್ ಮಾಡುವುದಿಲ್ಲ ಎನ್ನುವ ಕಾರಣಕ್ಕಾಗಿ ಕೊಟ್ಟಿದ್ದಿರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ, ಆದರೆ ಅದು ಪ್ರಾಕ್ಟಿಕಲ್ಲಾಗಿ ಆಗುವುದಿಲ್ಲ, ಅವರು ಮಾಡುವುದಿಲ್ಲ, ಆದರೆ ಇದನ್ನು ನೀವು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ, ಕೇಂದ್ರ ಸರ್ಕಾರ ಮೂಲಭೂತ ಸೌಲಭ್ಯಗಳಿಗೋಸ್ಕರ ಏನು 110 ಕೋಟಿ ರೂಪಾಯಿ ತಮಗೆ ಕೊಟ್ಟಿದೆ, ಇದರಿಂದ ಏನು ಎಲೆಕ್ಟ್ರಿಸಿಟಿ ಬಿಲ್ ಕಟ್ಟಿದಿರಿ, ಅದನ್ನು ವಾಪಸ್ ಮಾಡಿ, ಯಾವ ಉದ್ದೇಶಕ್ಕೋಸ್ಕರ ಸರ್ಕಾರ ಕೊಟ್ಟಿತ್ತೋ ಆ ಉದ್ದೇಶಕ್ಕೋಸ್ಕರ ತಾವು ಕೊಡಬೇಕು, ಆ ರೀತಿಯಾಗಿ ತಾವೇನು ಸುತ್ತೋಲೆಯನ್ನು ಕಳುಹಿಸಿದ್ದೀರಿ ಆ ಸುತ್ತೋಲೆಯನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ಸ್ವಚ್ಛಗ್ರಾಮ ಯೋಜನೆಯ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಬಹಳ ದೊಡ್ಡ ಪ್ರಚಾರ ಬಂತು. ಸ್ವಚ್ಛ ಗ್ರಾಮ ಯೋಜನೆ, ನಿಮ್ಮ ಬಜೆಟ್, ನಿಮ್ಮ ಕನಸಿನ ಕೂಸು, ಬಹಳ ಚೆನ್ನಾಗಿ ನಾವು ಇದನ್ನು ಮಾಡುತ್ತೇವೆಂದು ಹೇಳಿದಿರಿ, ಅಂದರೆ 10 ಪರ್ಸೆಂಟ್ ಯಾವ ಹಳ್ಳಿಗಳಲ್ಲಿ ಈ ಯೋಜನೆ ಕಾರ್ಯಗತವಾಗುತ್ತದೆಯೋ ಅವರ ಸಹಭಾಗಿತ್ವ ಇರಬೇಕು, ತೊಂಭತ್ತು ಭಾಗ ನೀವು ದುಡ್ಡು ಕೊಡಬೇಕು ಎನ್ನುವುದನ್ನು ತಾವು ಮಾಡಿದಿರಿ, 10 ಲಕ್ಷ ರೂಪಾಯಿಗಳಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಹಳ್ಳಿಯ ಜನರಿಗೆ ಕಟ್ಟಬೇಕೆಂದು ನೀವು ಹೇಳಿದಿರಿ. ನೀವು ಆಯ್ಕೆ ಮಾಡಿರತಕ್ಕಂಥದ್ದು 1300 ಹಳ್ಳಿಗಳು, ಮಂಜೂರಾತಿ ಕೊಟ್ಟಿರುವುದು 1280 ಹಳ್ಳಿಗಳು, ಕಾಮಗಾರಿ ನಡೆಯುತ್ತಿರುವುದು 1164, ಇನ್ನೂ ಕೂಡ ಕಂಪ್ಲೀಟ್ ಆಗಿಲ್ಲ. ಇಷ್ಟು ವರ್ಷವಾದರೂ ನೀವು ಮಂಜೂರಾತಿ ಮಾಡಿರತಕ್ಕಂಥ ಹಳ್ಳಿಗಳಲ್ಲಿ, 136 ಹಳ್ಳಿಗಳಲ್ಲಿ ಕಾರ್ಯಕ್ರಮವೇ ಆರಂಭವಾಗಿಲ್ಲ. ಅದರಲ್ಲಿ ಮೈಸೂರು ವಲಯದಲ್ಲಿ 327 ಹಳ್ಳಿಗಳನ್ನು ಆಯ್ಕೆ ಮಾಡಲಾಯಿತು, 107ರಲ್ಲಿ ಮಾತ್ರ ಕಾಮಗಾರಿ ಪ್ರಾರಂಭವಾಗಿದೆ, ಅದರಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆ, ಮಂಡ್ಯ ಜಿಲ್ಲೆಯಲ್ಲಿ 60 ಹಳ್ಳಿಗಳನ್ನು ಆಯ್ಕೆ ಮಾಡಿದರು, ಕಾಮಗಾರಿ ಆರಂಭಿಸಿದ್ದು ಕೇವಲ 24 ಹಳ್ಳಿಗಳಲ್ಲಿ ಮಾತ್ರ. ಮಂಡ್ಯ ಜಿಲ್ಲಯ 36 ಹಳ್ಳಿಯಲ್ಲಿ ಸ್ವಚ್ಛಗ್ರಾಮ ಯೋಜನೆ ಪ್ರಾರಂಭವಾಗಲಿಲ್ಲ. ಅಂದರೆ

ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಅಲ್ಲಿಯ ಜನ ನಿಮಗೆ ಪ್ರತಿಭಟನೆ ಮಾಡಿದರಾ? ನಿಮ್ಮ ಯೋಜನೆಗೆ ನಮಗೆ ಅಗತ್ಯವಿಲ್ಲವೆಂದು ಹೇಳಿದಿರಾ? ಯಾವ ಕಾರಣಕ್ಕಾಗಿ ನಿಮಗೆ ಈ ಯೋಜನೆಯನ್ನು ಆರಂಭ ಮಾಡಲಿಕ್ಕೆ ಸಾಧ್ಯವಾಗಲಿಲ್ಲ? ಮಂಡ್ಯ ಜಿಲ್ಲೆಯಲ್ಲಿ ಅಲ್ಲಿಗೊಬ್ಬ ಸಚಿವರು ಇದ್ದರಲ್ಲವೆ? ಮುಖ್ಯಮಂತ್ರಿಗಳು ಇದ್ದರಲ್ಲವೆ? ಬೇರೆ ಬೇರೆಯವರು ಅಧಿಕಾರಿಗಳು ಇದ್ದರಲ್ಲವೆ? ಯಾವ ಕಾರಣಕ್ಕಾಗಿ ಆರಂಭ ಮಾಡಲಿಲ್ಲ? ಇದನ್ನು ನೀವು ಮಂಡ್ಯದ ಜನತೆಗೆ ಹೇಳಬೇಕಾಗುತ್ತದೆ. ಏಕೆಂದರೆ, ಸರ್ಕಾರದ ಕಾರ್ಯಕ್ರಮಗಳನ್ನು ನೀವು ಎಷ್ಟರಮಟ್ಟಿಗೆ ಕಾಳಜಿ ವಹಿಸಿ ಇದನ್ನು ಅನುಷ್ಠಾನಕ್ಕೆ ತರುತ್ತೀರಿ ಎನ್ನುವುದಕ್ಕೆ ನಾನು ಇದನ್ನು ಹೇಳುತ್ತಿದ್ದೇನೆ. ಈ ಸಂಗತಿಯನ್ನು ವಿಷಯ ಸಮಿತಿಯ ಅಧ್ಯಕ್ಷರಾದ ಮಾನ್ಯ ಸಿರಾಜ್ ಶೇಖ್ ಹಾಗೂ ವಿಜಯಕುಮಾರ್ ಶೆಟ್ಟಿ, ಲಮಾಣಿಯವರು, ಅಭಯಚಂದ್ರ, ಹುಕ್ಕೇರಿ ಪ್ರಕಾಶ್‌ರವರು, ಅನೇಕ ಜನ ಸದಸ್ಯರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ ಜೊತೆಗೆ ಒಳ್ಳೆಯ ವರದಿ ಕೊಟ್ಟಿದ್ದಾರೆ ಅದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇನೆ, ನಾನು ಇದನ್ನು ಓದಿದಾಗ ನನಗೆ ಬಹಳ ಸಂತೋಷವಾಯಿತು. ನಮ್ಮ ವಿಷಯ ಸಮಿತಿಯ ವರದಿಗಳು ಅತ್ಯಂತ ಪ್ರಾಮಾಣಿಕವಾಗಿವೆ, ಆಡಳಿತ ಪಕ್ಷದ ಸದಸ್ಯರೂ ಕೂಡ ಅದರಲ್ಲಿ ಭಾಗಿಯಾಗಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್: ಮಾನ್ಯ ಉಪಾಧ್ಯಕ್ಷರೆ, ಇದು ಹೇಗೆ ಅಂದರೆ, ನಮ್ಮ ಮಾನ್ಯ ಸ್ನೇಹಿತರಾದ ಪಾಪಣ್ಣನವರು ಹೇಳಿದ ಹಾಗೆ, ಇವರು ಈ ವರ್ಷದ್ದು, ಹೋದ ವರ್ಷದ್ದು ಬಜೆಟ್ ಮಂಡನೆ ಮೇಲೆ ಮಾತನಾಡುತ್ತಿದ್ದಾರೆ. ಈ ವರ್ಷದಲ್ಲಿ ಮಾಡಬೇಕಾದಂಥ ಖರ್ಚು ಮತ್ತು ಆದಾಯದ ಬಗ್ಗೆ ಈ ರಾಜ್ಯದ ಬಗ್ಗೆ ಮಾತನಾಡಿ ಎಂದು ಹೇಳಿದರು. ನಮ್ಮ ಈ ವರ್ಷದ ಬಜೆಟ್ 27,600 ಕೋಟಿ ರೂಪಾಯಿಗಳು. ಜ್ಞಾನೇಂದ್ರರವರು ಹೇಳುವುದು ಏನು ಎಂದರೆ, ಈ ರಾಜ್ಯವನ್ನು ಕೇಂದ್ರದವರು ಕೊಡುವಂಥ ಹಣದಲ್ಲಿ ನಾವು ನಡೆಸುತ್ತಿದ್ದೇವೆ ಎನ್ನುವ ಭಾವನೆಯಲ್ಲಿ ಅವರು ಮಾತನಾಡುತ್ತಿದ್ದಾರೆ. ಆದುದರಿಂದ ಹೆಚ್ಚಾಗಿ ಎಷ್ಟು ಹಣ ಈ 27,600 ಕೋಟಿ ರೂಪಾಯಿಗಳಲ್ಲಿ ಕೇಂದ್ರದಿಂದ ಬರುತ್ತದೆ ಎನ್ನುವ ಮಾಹಿತಿಯನ್ನು ದಯವಿಟ್ಟು ಸದನಕ್ಕೆ ಕೊಡಿ.

ಶ್ರೀ ಆರಗ ಜ್ಞಾನೇಂದ್ರ: ಅದನ್ನು ಕೊಡುವುಕ್ಕೆ ನೀವು ಇರುವುದು ನಿಮ್ಮ ಹತ್ತಿರ ಲೆಕ್ಕಚಾರವಿರುತ್ತದೆ. ನಾನು ಅದನ್ನು ಕೊಡಬೇಕೆಂದರೆ ನೀವು ಈ ಕಡೆಗೆ ಬರಬೇಕಾಗುತ್ತದೆ. ನಾನು ಆ ಕಡೆ ಹೋಗಬೇಕಾಗುತ್ತದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ತಾವು ಅಧಿಕಾರಿಗಳಿಗೆ, ಎಸ್ಟಾಬ್ಲಿಷ್‌ಮೆಂಟ್ ಕಾಸ್ಟ್ ಅದರಲ್ಲಿ 70 ಪರ್ಸೆಂಟ್ ಖರ್ಚು ಮಾಡುತ್ತೀರಿ. ಅದನ್ನು ಮರೆಯಬೇಡಿ ತಾವು ತಿಳಿದುಕೊಳ್ಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್: ಅಲ್ಲಿ ನೀವು ಕೂಡ ಅಷ್ಟೇ ಖರ್ಚು ಮಾಡುತ್ತೀರಿ ಎಲ್ಲಿ? ಡೆಲ್ಲಿಯಲ್ಲೂ ಅಷ್ಟೇ ಖರ್ಚು ಮಾಡುತ್ತೀರಿ, ಇಲ್ಲಿಯೂ ಅಷ್ಟೇ ಖರ್ಚು ಮಾಡುತ್ತಿದ್ದೇವೆ, ಅಲ್ಲಿ ಏನಾದರೂ ಕಡಿಮೆ ಮಾಡುವುದಾದರೆ ಅದರ ಲೆಕ್ಕ ಹೇಳಿ ನಂತರ ನೋಡೋಣ.

ಶ್ರೀ ಕೆ. ಗೋಪಾಲ ಭಂಡಾರಿ: ಕೇಂದ್ರ ಸರ್ಕಾರದಲ್ಲಿ ಏನಾದರೂ ಮಕ್ಸ್‌ಟೆಯಾಗುತ್ತುದೆಯೇ?

ಶ್ರೀ ಆರಗ ಜ್ಞಾನೇಂದ್ರ: ನಿಮ್ಮ ವಿಷಯ ಸಮಿತಿಯವರು ಹೇಳುತ್ತಾರೆ ಸ್ವಚ್ಛ ಗ್ರಾಮ ಯೋಜನೆಯ ಪ್ರಗತಿಯ ಬಗ್ಗೆ ಸಮಿತಿಯು ತೀವ್ರ ಅಸಮಾದಾನಗೊಂಡಿತು, ಈ ಯೋಜನೆಯ

ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಹೆಚ್ಚು ಒತ್ತು ನೀಡಬೇಕೆಂದು ಸಮಿತಿಯು ಒತ್ತಾಯಿಸುತ್ತದೆ. ನಿಮ್ಮ ಆಡಳಿತ ಪಕ್ಷದ ಸದಸ್ಯರ ನೇತೃತ್ವದ ಒಂದು ಕಮಿಟಿ ನಿಮಗೆ ಎಚ್ಚರಿಕೆ ಕೊಟ್ಟಿದೆ, ಈ ರಾಜ್ಯದ ಜನರ ಕೆಲಸ ಮಾಡುವುದರಲ್ಲಿ ನೀವು ವಿಫಲ ಆಗಿದ್ದೀರಿ, ಇಂಥ ಯೋಜನೆಯನ್ನು ಕಾರ್ಯಗತ ಮಾಡುವಲ್ಲಿ ನೀವು ವಿಫಲರಾಗಿದ್ದೀರಿ, ಅನಾವಶ್ಯಕವಾಗಿ ನೀವು ಹೇಗೆ ಭಾಷಣ ಮಾಡಿಕೊಂಡು ಓಡಾಡುತ್ತೀರಿ, ಸ್ವಲ್ಪ ಕೆಲಸ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಈ ಸ್ವಚ್ಛ ಗ್ರಾಮ ಯೋಜನೆಯಲ್ಲಿ ಒಂದು ಟಾರ್ಗೆಟ್ ತಾವೇನು ಟೆಂಡರ್ ಕರೆದು ಒಂದು ವರ್ಷದಲ್ಲಿ ಪೂರೈಸಬೇಕೆಂದು ಹೇಳುತ್ತೀರಿ, ಕಳೆದ 4 ವರ್ಷಗಳಿಂದಲೂ ಕಾಮಗಾರಿಗಳು ಮುಂದುವರಿಯುತ್ತಲೇ ಬಂದಿವೆ. ಇದರ ಪರಿಣಾಮ ಏನಾಗಿದೆ ಎಂದರೆ, ನಮ್ಮ ಕ್ಷೇತ್ರದಲ್ಲಿ ಈ ಸ್ವಚ್ಛಗ್ರಾಮ ಯೋಜನೆ ತೆಗೆದುಕೊಂಡಿರುವ ಒಂದು ಊರಿನಲ್ಲಿ ಒಂದು ಕೊಲೆಯಿಂದ ಅಂತ್ಯ ಆಯಿತು. ಏಕೆಂದರೆ, ಒಂದು ವರ್ಷಕ್ಕೆ ಕಾಮಗಾರಿಯನ್ನು ಪೂರೈಸಬೇಕೆಂದು ಮೂರು ವರ್ಷ ಅದನ್ನು ಮುಂದುವರಿಸಿಕೊಂಡು ಬಂದಿದ್ದರಿಂದ, ದೊಮ್ಮಲಾಪುರ ಎನ್ನುವ ಊರಿನಲ್ಲಿ ಕಾಮಗಾರಿ ಪೂರ್ಣವಾಗದೇ ಕೊನೆಗೆ ಅಲ್ಲಿ ಒಬ್ಬ ಆಹುತಿಯಾಗುವ ಪರಿಸ್ಥಿತಿ ನಿರ್ಮಾಣವಾಯಿತು. ಆದುದರಿಂದ, ತಾವೇನು ಸ್ವಚ್ಛಗ್ರಾಮ ಯೋಜನೆಯನ್ನು ಏನು ಜಾರಿಗೆ ಕೊಟ್ಟಿದ್ದೀರಿ ಈ ಯೋಜನೆಯನ್ನು ಇನ್‌ಟೈಂನಲ್ಲಿ ಕಾಮಗಾರಿಯನ್ನು ಪೂರೈಸುವಂಥ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಅದೇನೂ ಪ್ರಯೋಜನಕ್ಕೆ ಬರುವುದಿಲ್ಲ.

5.40 ಪಿ.ಎಂ.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಉಪಾಧ್ಯಕ್ಷರೆ, ಈ ಎಲ್ಲಾ ಪ್ರಶ್ನೆಗಳಿಗೆ ಮತ್ತೆ ಉತ್ತರ ಕೊಡಬಾರದೆಂದು ನಾನು ವಿಚಾರ ಮಾಡಿದ್ದೆ. ಆದರೆ, ನಾನು ಉತ್ತರ ಕೊಡುವಂಥ ಸಂದರ್ಭದಲ್ಲಿ ಸಂಪೂರ್ಣವಾದ ಸಡಕ್ ಯೋಜನೆ ಮತ್ತು ಸ್ವಚ್ಚ ಗ್ರಾಮ ಯೋಜನೆಗೆ ಸಂಬಂಧಪಟ್ಟಂತೆ ಸಂಪೂರ್ಣವಾದ ವಿವರಗಳನ್ನು ಕೊಡುತ್ತೇನೆ. ನೀವು ಹೇಳತಕ್ಕಂಥದ್ದನ್ನು ನಾನು ನಿರ್ಲಕ್ಷ್ಯ ಮಾಡುತ್ತೇವೆಂದು ತಾವ್ಯಾರು ತಿಳಿದುಕೊಳ್ಳಬಾರದು. ಈಗ 1300 ಸ್ವಚ್ಚ ಗ್ರಾಮ ಯೋಜನೆಯನ್ನು ನಾವೇನು ತೆಗೆದುಕೊಂಡಿದ್ದೇವೆ ಈ ಒಂದು ಕಾರ್ಯಕ್ರಮವನ್ನು ನಾವು ಮಾಡುವಂಥದ್ದಲ್ಲ. ಇದನ್ನು ಜನರೇ ಮಾಡಬೇಕಾಗುತ್ತದೆ. ಇದಕ್ಕೆ ಬೇಕಾಗಿರತಕ್ಕಂಥ ಹಣವನ್ನು ನಾವು ತೆಗೆದಿಟ್ಟಿದ್ದೇವೆ. ಇದು ನಿಮಗೂ ಕೂಡ ಗೊತ್ತಿದೆ. ಇದಕ್ಕೆ ಹಣದ ಕೊರತೆ ಏನಿಲ್ಲ. ಆದರೆ ಎಲ್ಲೆಲ್ಲಿ ಜನರು ಒಂದು ಲಕ್ಷ ರೂಪಾಯಿ ಕೊಟ್ಟಿದ್ದಾರೆ ಅಂಥ ಕಡೆ ಕಾಮಗಾರಿ ಮಾಡಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಉಪಾಧ್ಯಕ್ಷರೆ, ದುಡ್ಡು ಕೊಟ್ಟಿರತಕ್ಕಂಥ ಕಡೆ ಕಾಮಗಾರಿಗಳು ತ್ವರಿತಗತಿಯಲ್ಲಿ ಮಾಡುತ್ತಿಲ್ಲ. ಸದರಿ ಕೆಲಸಗಳನ್ನು ಮಾಡುವುದಕ್ಕೆ ಯಾವ್ಯಾವ ಏಜೆನ್ಸಿಗೆ ವಹಿಸಿಕೊಟ್ಟಿದ್ದೀರಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಒಂದು ಲಕ್ಷ ನೀವು ಕೊಟ್ಟ ಮೇಲೆ ಉಳಿದ 9 ಲಕ್ಷ ರೂ. ಅವರೇ ಹಾಕಿ 10 ಲಕ್ಷ ರೂಪಾಯಿಗಳಷ್ಟು ಕಾಮಗಾರಿಗಳನ್ನು ಮಾಡಬೇಕಾಗುತ್ತದೆ. ಆ ಕಾಮಗಾರಿಗಳನ್ನು ಟೆಂಡರ್ ಅವಧಿಯೊಳಗೆ ಮಾಡುವುದಕ್ಕೆ ಆಗದೇ ಇದ್ದರೆ ಅಂಥ ಗುತ್ತಿಗೆದಾರರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸುವಂಥ ಕೆಲಸವನ್ನು ತಾವು ಮಾಡಬೇಕು.

ಶ್ರೀ ಎಂ.ವೈ. ಘೋರ್ಪಡೆ: ನನಗೆ ಗೊತ್ತಿರುವ ಹಾಗೆ ನಮ್ಮಲ್ಲಿ ಇಂಜಿನಿಯರ್ ಡಿವಿಜನ್ ಇದೆ. ಇವರಿಗೆ ಕೆಲಸವನ್ನು ವಹಿಸಿಕೊಟ್ಟರೆ ಅವರೇ ಈ ಕೆಲಸವನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಲ್ಯಾಂಡ್ ಆರ್ಮಿಯವರು ಮಾಡಬೇಕಾಗುತ್ತದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಇಬ್ಬರೂ ಕೂಡ ಈ ಕೆಲಸವನ್ನು ಮಾಡದೇ ಇರುವಂಥ ಕಡೆ ತಾವೇನೂ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಂ.ವೈ. ಘೋರ್ಪಡೆ: ಅಲ್ಲಿರತಕ್ಕಂಥ ಕಮಿಟಿಯವರೇ ಅತ್ತಕಡೆ ಗಮನ ಕೊಡಬೇಕಾಗುತ್ತದೆ. ಇದನ್ನು ನೇರವಾಗಿ ಸರ್ಕಾರದ ಕಡೆಯಿಂದ ಮಾಡಿಸತಕ್ಕಂಥ ಕಾರ್ಯಕ್ರಮವಲ್ಲ. ಇದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಅವರು ಏನೇನು ಕೆಲಸ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದನ್ನು ಹೇಳುವುದು ಬಿಟ್ಟರೆ, ಉಳಿದಂಥ ಎಲ್ಲಾ ಕಾರ್ಯಕ್ರಮಗಳನ್ನು ಅಂದರೆ, ನಿರ್ವಹಣೆ, ಮೇಲ್ವಿಚಾರಣೆಯನ್ನು ಜಿಲ್ಲಾ ಪಂಚಾಯತ್‌ನ ಸಿ.ಇ.ಓ.ರವರಿಗೆ ಸಂಬಂಧಪಟ್ಟಿದ್ದು, ಇದಕ್ಕೆ ಸಂಬಂಧಪಟ್ಟಂತೆ ಅವರೇ ವೀಕ್ಷಣೆ ಕಾರ್ಯ ಮತ್ತು ಸಭೆ ಮಾಡಿ ನಿಗದಿತ ಅವಧಿಯಲ್ಲಿ ಮುಗಿಸುವುದಕ್ಕೆ ಕ್ರಮ ತೆಗೆದುಕೊಳ್ಳದಿದ್ದರೆ ಈ ಎಲ್ಲಾ ಕೆಲಸಗಳು ಹಾಗೆಯೇ ಮುಂದುವರಿಯುತ್ತಾ ಹೋಗುತ್ತವೆ. ಆದ್ದರಿಂ, ಈ ಕೆಲಸವನ್ನು ಮಾಡುವುದಕ್ಕೆ ಸಿ.ಇ.ಓ. ರವರಿಗೆ ಸೂಚನೆ ಕೊಡಬೇಕು.

ಶ್ರೀ ಆರಗ ಜ್ಞಾನೇಂದ್ರ: ಸ್ವಚ್ಛಗ್ರಾಮ ಯೋಜನೆಯನ್ನು ನೀವೇ ಮಾಡಿರತಕ್ಕಂಥ ಒಂದು ಯೋಜನೆಯಾಗಿದೆ. ಆದ್ದರಿಂದ ಸದರಿ ಯೋಜನೆಯನ್ನು ಯಾವ ಕಾರಣಕ್ಕಾಗಿ ಪೂರ್ಣಗೊಳ್ಳುವುದಕ್ಕೆ ವಿಳಂಬವಾಗುತ್ತಿದೆ ಎನ್ನತಕ್ಕಂಥದ್ದನ್ನು ತಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತಧೆ.

ಶ್ರೀ ಎಂ.ವೈ. ಘೋರ್ಪಡೆ: ತಾವು ಸಡಕ್ ಯೋಜನೆ ಬಗ್ಗೆಯೂ ಕೂಡ ಪ್ರಸ್ತಾಪ ಮಾಡಿದ್ದಿರಿ. ಇದರಲ್ಲಿ ಡೆಸಿಮೆಲ್ ಪಾಯಿಂಟ್ ಎಷ್ಟು ಎಂಬುದು ನನಗೆ ಗೊತ್ತಿಲ್ಲ. ಆದರೆ, ಈಗ ಹೆಚ್ಚು ಕಡಿಮೆ ಸುಮಾರು 200 ಕೋಟಿ ರೂಪಾಯಿಗಳಷ್ಟು ಸಾರ್ಥಕವಾದ ರೀತಿಯಲ್ಲಿ ನಾವು ಖರ್ಚು ಮಾಡಿದ್ದೇವೆ. ಮತ್ತೆ ಇನ್ನು 100 ಕೋಟಿ ರೂಪಾಯಿಗಳಷ್ಟು ಕಾರ್ಯಕ್ರಮ ಮಾಡಬೇಕಾಗಿರತಕ್ಕಂಥದ್ದು ಇದೆ. ಇದಕ್ಕೆ ತಡವಾಗಿ ಹಣ ಬಂದಿರತಕ್ಕಂಥದ್ದು ತಮಗೂ ಕೂಡ ಗೊತ್ತಿದೆ. ಇದನ್ನೂ ಕೂಡ ನಾವು ಇಷ್ಟರಲ್ಲಿಯೇ ಪೂರೈಸುತ್ತೇವೆ. ಸಡಕ್ ಯೋಜನೆ ಕೇಂದ್ರ ಸರ್ಕಾರದಿಂದ ಸುಮಾರು 200 ರಿಂದ 300 ಕೋಟಿ ರೂಪಾಯಿ ಏನು ಬರುತ್ತದೆ, ಅದರ ಉಪಯೋಗವನ್ನು ನಾವು ಸಂಪೂರ್ಣವಾಗಿ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ನಾವು ಖಂಡಿತ ನಿರ್ಲಕ್ಷ್ಯ ಮಾಡುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ತಾವು ಹಿರಿಯರು, ನಿಮ್ಮನ್ನು ನಾವು ವೈಯಕ್ತಿಕವಾಗಿ ದೂಷಣೆ ಮಾಡುವುದಿಲ್ಲ. ಆದರೆ, ತಮ್ಮಂಥ ಹಿರಿಯ ಮಂತ್ರಿಗಳು ಇದ್ದಂಥ ಸಂದರ್ಭದಲ್ಲಿ ಈ ಒಂದು ವ್ಯವಸ್ಥೆಯಲ್ಲಿರತಕ್ಕಂಥ ಲೋಪಗಳನ್ನು ಸರಿಪಡಿಸತಕ್ಕಂಥ ಕೆಲಸ ಆಗಬೇಕೆಂಬುದು ನಮ್ಮ ಇರಾದೆಯಾಗಿದೆ. ಇವತ್ತಿನ ದಿವಸ ಒಂದು ಅಂದಾಜು ಪಟ್ಟಿಯನ್ನು ಮಾಡಲು ಎಷ್ಟು ಸಮಯ ಬೇಕಾಗುತ್ತದೆ? ಮತ್ತೆ ಅಂದಾಜು ಪಟ್ಟಿಯನ್ನು ತಯಾರು ಮಾಡಿರತಕ್ಕಂಥದ್ದನ್ನು ಟೆಕ್ನಿಕಲ್ ಸ್ಕ್ರೂಟನಿ ಮಾಡುವುದಕ್ಕೆ ಎಷ್ಟು ಸಮಯ ಬೇಕಾಗುತ್ತದೆ? ಹಾಗೆಯೇ ಅದನ್ನು ಟೆಂಡರ್ ಕರೆಯುವುದಕ್ಕೆ ಎಷ್ಟು ಸಮಯ ಬೇಕಾಗುತ್ತದೆ? ಮತ್ತೆ, ಆ ಟೆಂಡರ್‌ನ್ನು ಅಪ್ರೂವೆಲ್ ಮಾಡುವುದಕ್ಕೆ ಎಷ್ಟು ಸಮಯಬೇಕಾಗುತ್ತದೆ? ಒಂದು ಟೆಂಡರ್ ಆದಮೇಲೆ ಅಪ್ರೂವಲ್ ತೆಗೆದುಕೊಂಡು ಅಗ್ರಿಮೆಂಟ್ ಕೊಡುವುದಕ್ಕೆ ಗುತ್ತಿಗೆದಾರರು ಮುಖ್ಯ ಇಂಜಿನಿಯರ್ ಕಛೇರಿಗೆ ಮತ್ತೆ ಬರಬೇಕಾಗುತ್ತದೆ. ಅಲ್ಲಿ

ಏನೇನು ವ್ಯವಹಾರ ನಡೆಯುತ್ತಿದೆ ಎನ್ನತಕ್ಕಂಥದ್ದು ನಮ್ಮೆಲ್ಲರಿಗೂ ಕೂಡ ಗೊತ್ತಿದೆ. ಹಗಲು ದರೋಡೆ ಎಷ್ಟು ಹಣ ಬಂದರೂ ಕೂಡ ಅವರಿಗೆ ಸಾಕಾಗುವುದಿಲ್ಲ. ಅಲ್ಲಿ ಇಷ್ಟು ಪರ್ಸೆಂಟ್ ಎಂದು ಕೊಟ್ಟರೆ ಮಾತ್ರ ಫೈಲ್ ತೆಗೆದುಕೊಂಡು ಹೋಗಬೇಕಾಗುತ್ತದೆ. ಪುಕ್ಕಟೆಯಾಗಿ ಅಲ್ಲಿ ಖಂಡಿತ ಮಾಡುವುದಿಲ್ಲ. ಈ ರೀತಿಯಾಗಿ ಇವತ್ತಿನ ದಿವಸ ಹಣ ಸೋರಿಕೆಯಾಗುತ್ತಿದ್ದರೆ ಇನ್ನು ಯಾವ ರೀತಿಯಾಗಿ ಕೆಲಸ ಮಾಡುವುದಕ್ಕೆ ಆಗುತ್ತದೆ? ಇದನ್ನು ಕೊಡುವುದಕ್ಕೆ ಗುತ್ತಿಗೆದಾರರು ಅಲ್ಲಿ ಬರದೇ ಹೋದರೆ ಸಂಬಂಧಪಟ್ಟಂಥ ಫೈಲ್ ಅಪ್ರೂವಲ್‌ಗೆ ಬರುವುದಿಲ್ಲ. ಮತ್ತೆ ಪೋಸ್ಟ್‌ನಲ್ಲಿಯೂ ಕೂಡ ಬರುವುದಿಲ್ಲ. ಪೋಸ್ಟ್‌ನಲ್ಲಿ ಬರತಕ್ಕಂಥ ವ್ಯವಸ್ಥೆ ಕೂಡ ಅಲ್ಲಿ ಇಲ್ಲ. ಹಣ ಕೊಡದೇ ಇದ್ದರೆ ತಿಂಗಳುಗಟ್ಟಲೇ ಸಂಬಂಧಪಟ್ಟಂಥ ಫೈಲ್ ಅಲ್ಲಿಯೇ ಇರುತ್ತದೆ. ಹಾಗೆಯೇ ಇವತ್ತಿನದಿವಸ ಕೆಲಸ ಮಾಡುವ ಹತ್ತಿರ ಜಲ್ಲಿಯನ್ನು ಅಳತೆ ಮಾಡುವುದಕ್ಕಾಗಿ ಮಹಾಶಯರು ಹೋಗಬೇಕಾದರೆ ಎರಡು ತಿಂಗಳಾದರೂ ಆಗುತ್ತದೆ. ಅಲ್ಲದೇ, ಇವರನ್ನು ದೊಡ್ಡ ಪಲ್ಲಕ್ಕಿ ಉತ್ಸವದಲ್ಲಿ ಮೆರವಣಿಗೆ ಮಾಡಿಕೊಂಡು ಹೋಗತಕ್ಕಂಥ ಸ್ಥಿತಿ ಇವತ್ತಿನದಿವಸ ಇದೆ. ಇದೇ ವ್ಯವಸ್ಥೆಯಲ್ಲಿ ಹೋದರೆ ರಾಜ್ಯದ ಪ್ರಗತಿ ಎಲ್ಲಿಗೆ ಹೋಗಿ ಮುಟ್ಟುತ್ತದೆ ಎನ್ನತಕ್ಕಂಥದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಈ ಎಲ್ಲಾ ಸಂಗತಿಗಳನ್ನು ನಾವು ಸರಿ ಮಾಡದೇ ಹೋದರೆ ಯಾವುದೇ ಒಂದು ಕಾರ್ಯಕ್ರಮವನ್ನು ನಾವು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸಡಕ್ ಯೋಜನೆಗೆ 306.68 ಕೋಟಿ ರೂಪಾಯಿ ನಿಮಗೆ ಕೊಟ್ಟಿದ್ದರೆ, ಇದರಲ್ಲಿ ಮೂರ ವರ್ಷಗಳಿಂದ ನೀವು 191.92 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದೀರಿ. ಈ ಮಾಹಿತಿ ನೀವು ಕೊಟ್ಟಿರತಕ್ಕಂಥ ಉತ್ತರದಲ್ಲಿಯೇ ಇದೆ. ಇವತ್ತಿನ ದಿವಸ ಹಣ ಕೊಡತಕ್ಕಂಥದ್ದಕ್ಕೆ ಹಣ ಕೊಡುವುದಕ್ಕೂ ಸಹ ನಿಮ್ಮ ಹತ್ತಿರ ಹಣವೇ ಇಲ್ಲ. ಮಾನ್ಯ ಸಗೀರ್ ಅಹಮದ್‌ರವರು ಈಗ ತಾನೇ ಇಲ್ಲಿದ್ದರು. ಆದರೆ, ಅವರು ಹೊರಕ್ಕೆ ಹೋಗಿರಬಹುದು. ಕೇಂದ್ರ ಸರ್ಕಾರ ಕೊಡತಕ್ಕಂಥ ಹಣದ ಮೇಲೆಯೇ ನಮ್ಮ ಸರ್ಕಾರ ನಡೆಯುತ್ತದೆ ಎನ್ನತಕ್ಕಂಥ ರೀತಿಯಲ್ಲಿ ತಾವು ಹೇಳುತ್ತಿದ್ದೀರಿ ಎಂದು ಮಾನ್ಯ ಸಗೀರ್ ಅಹಮದ್‌ರವರು ಹೇಳಿದರು. ನಿಮ್ಮ ಸರ್ಕಾರದಲ್ಲಿ ಹಣ ಇಲ್ಲ ಎನ್ನತಕ್ಕಂಥದ್ದು ನಮಗೆ ಖಾಯಂ ಆಗಿದೆ. ನೀವು ಈಗ ದುಡ್ಡು ಕೊಡುವುದಾದರೆ ಹೊಸ ಕೆಲಸ ಇನ್ನು ಮುಂದೆ ಮಾಡಿಸುವುದು ಬೇಡ. ಮೊದಲು ಆನ್ ಗೋಯಿಂಗ್ ಕೆಲಸವನ್ನು ಮುಗಿಸುತ್ತೇವೆಂದು ತಾವು ಹೇಳಿ. ಇವತ್ತಿನದಿವಸ ಎಂ.ಎ.ಡಿ.ಬಿ. ಮತ್ತು ಹೆಚ್.ಕೆ.ಡಿ.ಬಿ.ಯಲ್ಲಿ ಈಗಾಗಲೇ ಕೆಲಸ ಮಾಡಿ ಕೊಡಬೇಕಾಗಿರತಕ್ಕಂಥ ಪೆಂಡಿಂಗ್ ಬಿಲ್‌ಗೆ ಕೊಡುವುದಕ್ಕೆ ಹಣವನ್ನಾದರೂ ಕೊಡಿ. ಬೇರೇನೂ ಕೆಲಸ ಮಾಡಿಸುವುದು ಬೇಡ. ಅಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಕೆಲಸ ಅರ್ಧಂಬರ್ಧಕ್ಕೆ ನಿಂತುಕೊಂಡಿವೆ. ಇದನ್ನು ಯಾರು ನೋಡುತ್ತಾರೆ? ಮತ್ತೆ ಇದಕ್ಕೆ ಯಾರು ಹಣ ಬಿಡುಗಡೆ ಮಾಡುವವರು? ಇವತ್ತಿನದಿವಸ ಎಂ.ಎ.ಡಿ.ಬಿ.ಗೆ ಒಂದು ಪೈಸೆ ಕೂಡ ಬಿಡುಗಡೆ ಮಾಡಿಲ್ಲ. ನಿಮ್ಮದು ಇಲ್ಲದೇ ನಮ್ಮ ಸರ್ಕಾರ ನಡೆಯುತ್ತದೆ ಎಂದು ಹೇಳಿದರೆ ನಾವು ಏನು ಹೇಳಬೇಕಾಗುತ್ತದೆ? ಇವರು ಮಾಡಿರತಕ್ಕಂಥ ತಪ್ಪನ್ನು ಮತ್ತು ಅಸಮರ್ಥನೆಯನ್ನು ಒಪ್ಪಿಕೊಳ್ಳತಕ್ಕಂಥ ಔದಾರ್ಯತೆ ಇವರಿಗೆ ಇಲ್ಲದೇ ಹೋದರೆ ನಾವೇನೂ ಮಾಡುವುದಕ್ಕೆ ಆಗುವುದಿಲ್ಲ. ಈ ಎಲ್ಲಾ ವಿಷಯಗಳು ಇವತ್ತಿನದಿವಸ ಮಾಧ್ಯಮದ ಮೂಲಕ ಈ ರಾಜ್ಯದ ಜನರಿಗೆ ಗೊತ್ತಾಗಬೇಕಾಗುತ್ತದೆ. ಆದರೂ ಕೂಡ ನಾವು ಈ ಸದನದ ಮೂಲಕ ಹೇಳಬೇಕಾಗಿದೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಎಂ.ಎ.ಡಿ.ಬಿ.ಗೆ ಕನಿಷ್ಠಪಕ್ಷ 20 ಕೋಟಿ ರೂಪಾಯಿಗಳನ್ನಾದರೂ ಕೊಟ್ಟಿದ್ದಾರೆ. ಆದರೆ, ಬಯಲುಸೀಮೆ ಅಭಿವೃದ್ಧಿ ಮಂಡಳಿಯಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿಗೆ ಪಗಾರ ಕೊಡುವುದಕ್ಕೆ ಮಾತ್ರ ಹಣ ಇಟ್ಟಿದ್ದಾರೆ. ಆದರೆ ಈ ಹಣವನ್ನು ಇವರು ಬಿಡುಗಡೆ ಮಾಡಿಲ್ಲ. ಆದ್ದರಿಂದ ಇದನ್ನು ಮುಚ್ಚುಬಿಡುವುದು ಒಳ್ಳೆಯದು. ಈ ಎಲ್ಲಾ ವಿಷಯಗಳನ್ನು ಹೇಳತಕ್ಕಂಥ ಸಂದರ್ಭದಲ್ಲಿ ನಮ್ಮ ಮಂತ್ರಿಗಳೇ ಇಲ್ಲಿ ಇರುವುದಿಲ್ಲ. ಎರಡನೇ ತಾರೀಖು ಇದಕ್ಕೆ ಸಂಬಂಧಪಟ್ಟಂತೆ ಸಭೆ ಕರೆದಿದ್ದಾರೆ, ಬಯಲು ಸೀಮೆ ಅಭಿವೃದ್ಧಿ ಮಂಡಳಿಯನ್ನು ರದ್ದು ಮಾಡಬೇಕೆಂದು ಆ ಸಂದರ್ಭದಲ್ಲಿ ನಾವು ಠರಾವು ಮಾಡಿ ಕಳುಹಿಸಿಸೋಣ. ಅಧಿಕಾರಿಗಳಿಗೆ ಪಗಾರ ಕೊಡುವುದಕ್ಕೂ ಕೂಡ ಅಲ್ಲಿ ಹಣ ಇಲ್ಲ.

ಶ್ರೀ ರಾಜೇಂದ್ರ ವರ್ಮ: ಇವರ ಹತ್ತಿರ ಸಾಕಷ್ಟು ದುಡ್ಡು ಇದೇ ಎಂದು ಹೇಳುತ್ತಿದ್ದಾರೆ. ಆದರೆ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸರ್ಕಾರ ಇದುವರೆಗೂ ಒಂದು ಪೈಸೆಯನ್ನು ಕೊಟ್ಟಿಲ್ಲ. ಅಲ್ಲಿ ಆಗಬೇಕಾಗಿರತಕ್ಕಂಥ ಕೆಲಸಗಳೆಲ್ಲವೂ ಅರ್ಧಕ್ಕೆ ನಿಂತುಹೋಗಿವೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿಯೂ ಕೂಡ ಸುಮಾರು 60 ಕೋಟಿ ರೂಪಾಯಿ ಬಾಕಿ ಕೂಡಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ನಬಾರ್ಡ್ ಸಂಸ್ಥೆಯಿಂದ ನೀವು ತೆಗೆದುಕೊಂಡಿರತಕ್ಕಂಥ ಸಾಲದ ಹಣವನ್ನು ನೀವು ಬೇರೆ ಬೇರೆ ಭಾಗಗಳಿಗೆ ಅಂದರೆ ಸಂಬಳ ಕೊಡುವುದಕ್ಕೆ ಉಪಯೋಗಿಸುತ್ತಿದ್ದೀರಿ. ಇದಕ್ಕೆ ನಾವೇನು ಹೇಳಬೇಕು? ಇವತ್ತಿನ ದಿವಸ ನಬಾರ್ಡ್ ಕೆಲಸದ ಬಿಲ್‌ಗಳೂ ಕೂಡ ಪೆಂಡಿಂಗ್ ಇಡಲಾಗಿದೆ ಏಕೆ? ನಬಾರ್ಡ್‌ನಿಂದ ಈಗಾಗಲೇ ಪೇಮೆಂಟ್ ಆಗಿದೆ ಎಂದು ಹೇಳುತ್ತಿದ್ದಾರೆ. ಆದರೆ, ಇವತ್ತಿನ ದಿವಸ ಸುಮಾರು ನೂರಾರು ಕೋಟಿ ರೂಪಾಯಿಯಷ್ಟು ಗುತ್ತಿಗೆದಾರರ ಬಿಲ್‌ಗಳನ್ನು ಪೆಂಡಿಂಗ್ ಇಟ್ಟಿದ್ದಾರೆ. ನಿಮಗೆ ತೊಂದರೆ ಏನಾಗಿದೆ ಅಥವಾ ಕೊರತೆ ಏನಾಗಿದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ತಾವು ಹೇಳಬೇಕಾಗುತ್ತದೆ. ನಬಾರ್ಡ್‌ನಿಂದ ಬಂದಿರತಕ್ಕಂಥ ಹಣವನ್ನು ಯಾವ ಕರ್ಮಕ್ಕೋಸ್ಕರ ಬಿಡುಗಡೆ ಮಾಡುತ್ತಿಲ್ಲ? ಇದನ್ನು ತಾವು ಒಪ್ಪಿಕೊಳ್ಳದಿದ್ದರೆ ಅಥವಾ ಇದನ್ನು ಸರಿಮಾಡದಿದ್ದರೆ ಹೇಗೆ? ಈ ರಾಜ್ಯದಲ್ಲಿ ನಿಮ್ಮ ಅವಧಿ ಕೂಡ ಮುಗಿಯುತ್ತಾ ಬರುತ್ತಿದೆ. ಇನ್ನು 2002–2003ನೇ ಸಾಲಿನಲ್ಲಿ 5500 ಕೊಳವೆಬಾವಿಗಳಿಗೆ ಕೈ ಪಂಪ್ ಅಳವಡಿಸತಕ್ಕಂಥ ಗುರಿ ಇತ್ತು. ಆದರೆ 3600 ಮಾತ್ರ ಸಾಧನೆ ಮಾಡಿದ್ದೀರಿ. ಇದು ಯಾವ ಕಾರಣಕ್ಕಾಗಿ ಆಗಿಲ್ಲ ಎನ್ನತಕ್ಕಂಥದ್ದನ್ನು ತಿಳಿಸಬೇಕು. ಇಷ್ಟೊಂದು ಗುರಿಯನ್ನು ಇಟ್ಟುಕೊಂಡ ಮೇಲೆ ಇದನ್ನು ಸಾಧನೆ ಮಾಡುವುದಕ್ಕೆ ನಿಮಗೆ ತೊಂದರೆ ಏನು? ಏಕೆಂದರೆ ಮೂಲಭೂತವಾಗಿ ಬೇಕಾಗಿರತಕ್ಕಂಥ ಕುಡಿಯುವ ನೀರಿನ ವ್ಯವಸ್ಥೆಗೆ ಈ ರೀತಿ ಮಾಡಿದರೆ ನಾವೇನು ಮಂತ್ರಿಗಳಿಗೆ ಹೇಳುವುದು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಹೊಸ ಹೊಸ ಬೋರ್‌ವೆಲ್‌ಗಳನ್ನು ಕೊರೆಯತಕ್ಕಂಥದ್ದನ್ನು ಡಿಸ್ಕರೇಜ್ ಮಾಡಬೇಕೆಂದು ಕೇಂದ್ರ ಸರ್ಕಾರದ ಕಟ್ಟಪ್ಪಣೆ ಆಗಿದೆ. ಮತ್ತೆ ಅವರು ಕೊಟ್ಟಿರತಕ್ಕಂಥ ಹಣದಲ್ಲಿ ಹೊಸ ಬೋರ್‌ವೆಲ್‌ಗಳನ್ನು ತೆಗೆಯಬಾರದೆಂದು ತಿಳಿಸಿರತಕ್ಕಂಥದ್ದು ಕೂಡ ನಿಮಗೆ ಗೊತ್ತಿದೆ. ಆದ್ದರಿಂದ, ಬೋರ್‌ವೆಲ್‌ನ್ನು ಕೊರೆಸುವುದನ್ನು ಡಿಸ್ಕರೇಜ್ ಮಾಡಿ ಈಗ ಇರತಕ್ಕಂಥ ಬೋರ್‌ವೆಲ್‌ಗಳನ್ನು ರೀ–ಚಾರ್ಜ್ ಸ್ಟ್ರಕ್ಚರ್ ಕಟ್ಟೋಣ ಎಂಬ ದೃಷ್ಟಿಯಿಂದ ನಾವು ಇದನೆಲ್ಲಾ discourage ಮಾಡುತ್ತಿದ್ದೇವೆ. That is why the number is reduced.

ಶ್ರೀ ರಾಜೇಂದ್ರ ವರ್ಮ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕೋಳಿವಾಡ್ ಸಾಹೇಬರು ಮಾಡತಕ್ಕಂಥ ಕೆಲಸಕ್ಕೆ ನಮ್ಮ ಮೆಚ್ಚುಗೆ ಇದೆ. ಬೀದರ್ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಲುವಾಗಿ 135 ಬಾವಿಗಳನ್ನು ತೋಡಿಸಲಾಗಿದೆ. ಈ ಬಾವಿಡಗಳಿಗೆ ಪಂಪ್‌ಸೆಟ್ ಕೂಡಿಸಿ ಅಲ್ಲಿನ ಜನರಿಗೆ ಕುಡಿಯುವ ನೀರನ್ನು ಒದಗಿಸತಕ್ಕಂಥ ಕೆಲಸ ಇದುವರೆಗೂ ಕೂಡ ಆಗಿಲ್ಲ. ಈ ಕೆಲಸವನ್ನು ಆದಷ್ಟು ಬೇಗ ಮಾಡಬೇಕೆಂದು ನಾವು ಕೇಳುತ್ತಿದ್ದೇವೆ. ಇವತ್ತಿನ ದಿವಸ ಮೂಲಭೂತ ಸೌಕರ್ಯವಾಗಿರತಕ್ಕಂಥ ಕುಡಿಯುವ ನೀರನ್ನು ಜನರಿಗೆ ಒದಗಿಸಿಕೊಡಬೇಕಾಗಿದೆ. ಕುಡಿಯುವ ನೀರಿನ ಸಲುವಾಗಿ ಎಂದು ಕಳೆದ ನಾಲ್ಕು ವರ್ಷಗಳ ಹಿಂದೆ ತೆರೆದ ಬಾವಿಗಳನ್ನು ತೋಡಿ ಇದರಿಂದ ನೀರನ್ನು ಸರಬರಾಜು ಮಾಡತಕ್ಕಂಥ ಕೆಲಸವನ್ನು ಇದುವರೆಗೂ ಮಾಡಿಲ್ಲ. ಈ ಕೆಲಸವನ್ನು ಮಾಡುವುದಕ್ಕೆ ಹಣ ಇಲ್ಲವೆಂದು ಅದನ್ನು ಹಾಗೆಯೇ ನಿಲ್ಲಿಸಿದ್ದಾರೆ. ಆದ್ದರಿಂದ ಈ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಸಚಿವರು ಮಾಡತಕ್ಕಂಥ ಪ್ರಯತ್ನ ಸರಿ ಇದೆ. ಅದನ್ನು ನಾವೂ ಕೂಡ ಒಪ್ಪಿಕೊಳ್ಳುತ್ತೇವೆ. ಕನಿಷ್ಟಪಕ್ಷ ಈಗಾಗಲೇ ಇರತಕ್ಕಂಥ ಬಾವಿಗಳಿಂದ ನೀರನ್ನು ತೆಗೆದು ಜನರಿಗೆ ಕುಡಿಸುವಂಥ ಪುಣ್ಯದ ಕೆಲಸವನ್ನು ಆದಷ್ಟು ಬೇಗ ಮಾಡಿಸಿ.

ಶ್ರೀ ಕೆ.ಬಿ. ಕೋಳಿವಾಡ್: ಮಾನ್ಯ ಉಪಾಧ್ಯಕ್ಷರೆ, ರಾಜ್ಯದ ಕೆಲವು ಜಿಲ್ಲೆಗಳಾದ ಬೀದರ್, ಗುಲ್ಬರ್ಗ ಮತ್ತು ಮಂಗಳೂರು ಹಾಗೂ ಉಡುಪಿ ಜಿಲ್ಲೆಗಳಲ್ಲಿ ಓಪನ್ ವೆಲ್ ತೆಗೆದರೆ ಮಾತ್ರ ನೀರು ಸಿಗುತ್ತದೆ. ಇದು ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಆದ್ದರಿಂದ ಈ ಪ್ರದೇಶದಲ್ಲಿ ಬೋರ್‌ವೆಲ್ ತೆಗೆಯುವ ಬದಲು ಓಪನ್ ವೆಲ್ ತೆಗೆಯುವುದಕ್ಕೆ ಸರ್ಕಾರ ಕೂಡ ಪ್ರೋತ್ಸಾಹ ನೀಡುತ್ತಿದೆ. ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಎಷ್ಟು ಓಪನ್ ವೆಲ್‌ಗಳಿಗೆ ಮೂಲಭೂತ ಸೌಕರ್ಯಗಳಾದ ಮೋಟಾರ್ ಮತ್ತು ಎಷ್ಟು ಪೈಪ್ ಬೇಕಾಗಿದೆ ಎಂದು ಪತ್ರ ಬರೆದು ಕಳುಹಿಸಿದರೆ ತಕ್ಷಣವೇ ಒದಗಿಸಿಕೊಡತಕ್ಕಂಥ ಕೆಲಸವನ್ನು ಮಾಡುತ್ತೇನೆ.

ಶ್ರೀ ರಾಜೇಂದ್ರ ವರ್ಮ: ಜಿಲ್ಲಾಧಿಕಾರಿಗಳು ಏನು ಮಾಡುತ್ತಿದ್ದಾರೆಂದು ನೀವು ಕೇಳಿ, ಅವರು ನಿಮಗೆ ರಿಪೋರ್ಟ್ ಕೊಡಬೇಕು. 4 ವರ್ಷವಾಯಿತು, ಯಾರಾದರೂ ನಿಮ್ಮ ಅಧಿಕಾರಿಗಳನ್ನು ಇನ್ಸ್‌ಪೆಕ್ಷನ್ ಮಾಡುವುದಕ್ಕೆ ಕಳುಹಿಸಿಕೊಡಿ.

ಶ್ರೀ ಕೆ.ಬಿ. ಕೋಳಿವಾಡ್: ಮಾನ್ಯ ಉಪಾಧ್ಯಕ್ಷರೆ, ಓಕೆ, ಡಿಪಾರ್ಟ್‌ಮೆಂಟಿನಿಂದಾದರೂ ಇನ್‌ಫಾರ್ಮೇಶನ್ ತರಿಸುತ್ತೇನೆ. ಸಾಧ್ಯವಾದಷ್ಟು ಮಾಡಿಕೊಡುತ್ತೇನೆ. ಏಕೆ ಹೀಗಾಗುತ್ತಿದೆನ್ನುವ ಬಗ್ಗೆ ಒಂದು ನಿಮಿಷ ನಾನು ಹೇಳಿಬಿಡುತ್ತೇನೆ. ನಮ್ಮ ಜಿಲ್ಲಾ ಪಂಚಾಯಿತಿಯ ಬಜೆಟ್ ಎಷ್ಟು ಇರುತ್ತದೆ ಅದರ ಎರಡು ಪಟ್ಟು ಎಸ್ಟಿಮೇಟ್ ಮಾಡುತ್ತೀರಿ ನಿಮಗೆ ಬರುವ ಬಜೆಟ್ ಬಿಟ್ಟು ಅದರ ಎರಡು ಪಟ್ಟು ಎಸ್ಟಿಮೇಟ್ ಮಾಡಿ ಎಲ್ಲವನ್ನೂ ಅರ್ಧಂಬರ್ಧ ಕೆಲಸವನ್ನು ಮಾಡುತ್ತೀರಿ, ಎಲ್ಲದ್ದಕ್ಕೂ ಅಡಿಷನಲ್ ಗ್ರಾಂಟ್ ಕೊಡಿ ಎಂದು ಕೇಳಿದರೆ ಸರ್ಕಾರದಿಂದ ಎಲ್ಲಿ ಕೊಡುವುದಕ್ಕಾಗುತ್ತದೆ? ಅದಕ್ಕಾಗಿ ಸರ್ಕಾರ ಏನು ನಿರ್ಣಯ ಮಾಡಿದೆ ಎಂದರೆ, ಹೋದ ವರ್ಷದಿಂದ ಬಜೆಟ್ ಹಣ ಎಷ್ಟು ಇರುತ್ತದೆ ಅಷ್ಟೇ ವರ್ಕ್‌ಗಳನ್ನು ನಾವು ಈ ವರ್ಷಕ್ಕೆ ಮಂಜೂರು ಮಾಡುತ್ತಿದ್ದೇವೆ. ಅಡಿಷನಲ್ ಸ್ಪಿಲ್ ಓವರ್ ವರ್ಕ್ ಇದ್ದರೆ, ನಾವು ಒಂದು ಕಂಪ್ಲೀಟ್ ಆಗುವವರೆಗೆ ಹೊಸ ಕೆಲಸವನ್ನು ಮಂಜೂರು ಮಾಡುವುದಿಲ್ಲ ಎಂದು ನಾವು ನಿರ್ಣಯವನ್ನು ತೆಗೆದುಕೊಂಡಿರುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ 1,04,034 ಕಿಲೋ ಮೀಟರ್ ರಸ್ತೆ ಇದೆ. 61,8222 ಸೇತುಗಳು ಇವೆ. ಇದರ ನಿರ್ವಹಣೆಗೆ ಇವರು ಇಟ್ಟಿರತಕ್ಕಂಥ *ಗ್ರಾಂಟ್ 2001–02ನೇ ಇಸ್ವಿಯಲ್ಲಿ 210.33 ಕೋಟಿ ರೂಪಾಯಿಗಳು. ಬಿಡುಗಡೆ* ಮಾಡಿದ್ದು ಕೇವಲ 175.02 ಕೋಟಿ ರೂಪಾಯಿಗಳು. 2002–03ನೇ ಸಾಲಿನಲ್ಲಿ ಇವರು ಇಟ್ಟಿರತಕ್ಕಂಥ

ಹಣ 205 ಕೋಟಿ ರೂಪಾಯಿಗಳು. ಬಿಡುಗಡೆ ಮಾಡಿರುವ ಹಣ ಕೇವಲ 169.35 ಕೋಟಿ ರೂಪಾಯಿಗಳು. ಅಂದರೆ ಇವರು ಇಡುವ ಹಣ, ಇವರು ಬಿಡುಗಡೆ ಮಾಡುವ ಹಣ. ಇವರು ಹಣ ಇಟ್ಟಿದ್ದಾರೆಂದು ಅಲ್ಲಿ ಕೆಲಸವನ್ನು ಮಾಡಿಸುತ್ತಾರೆ, ಬಿಲ್ ಏಕೆ ಪೆಂಡಿಂಗ್ ಆಗುತ್ತದೆ? ಇವರು ಹಣ ಇಟ್ಟಿರುವುದರಿಂದ ಅಲ್ಲಿ ರಸ್ತೆಗೆ ಪ್ಯಾಚ್ ಹಾಕಿಸುತ್ತಾರೆ, ಬೇರೆ ಬೇರೆ ಹೆಡ್‌ನಲ್ಲಿಟ್ಟಿರತಕ್ಕಂಥ ಎಲ್ಲಾ ಕೆಲಸ ಮಾಡಿಸುತ್ತಾರೆ. ಇವರು ಹಣವನ್ನು ಬಿಡುಗಡೆ ಮಾಡುವುದಿಲ್ಲ. ಇದರ ಪರಿಣಾಮದಿಂದ ಅಲ್ಲೆಲ್ಲಾ ಬಿಲ್ ಪೆಂಡಿಂಗ್ ಆಗುತ್ತದೆ. ಈ ವರ್ಷ 2003–04ನೇ ಸಾಲಿಗೆ ನಿಗದಿಪಡಿಸಿದ ಹಣ 179 ಕೋಟಿ ರೂಪಾಯಿಗಳು. ಇವರು 2002–03ರಲ್ಲಿ 205 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದರು. ಈ ವರ್ಷಕ್ಕೆ 175 ಕೋಟಿ ರೂಪಾಯಿಗಳನ್ನು ನಿಗದಿಪಡಿಸುತ್ತಾರೆ. ಅಂದರೆ ನೀವು ನಿಗದಿಪಡಿಸುವ ಹಣ ವರ್ಷೆ ವರ್ಷೆ ಜಾಸ್ತಿಯಾಗುತ್ತಾ ಹೋಗಬೇಕು. ವರ್ಷೆ ವರ್ಷೆ ಕಡಿಮೆಯಾಗುತ್ತದೆಂದರೆ, ನಿಮಗೆ ಅಸಡ್ಡೆ, ಈ ಕಾರ್ಯಕ್ರಮವನ್ನು ನೀವು ಮುಗಿಸಬೇಕೆಂದು ಇದ್ದೀರಾ? ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಿಗೆ ಬಾಗಿಲು ಹಾಕಬೇಕೆಂದು ಇದ್ದೀರಾ? ಅಥವಾ ಈ ಸಂಸ್ಥೆಗಳನ್ನು ಕ್ಲೋಸ್ ಮಾಡಬೇಕೆಂದು ಏನಾದರೂ ಇದ್ದರೆ, ನಿರ್ಣಯ ಮಾಡಬೇಕೆಂದು ಇದ್ದರೆ ಅದು ಅಂತಿಮ ಎಂದು ಆದರೂ ಹೇಳಿ. ವರ್ಷೆ ವರ್ಷೆ ದರಗಳು ಜಾಸ್ತಿಯಾಗುತ್ತಾ ಹೋಗುತ್ತವೆ, ಟಾರ್ ರೇಟ್‌ಗಳು ಮತ್ತು ಜಲ್ಲಿ ರೇಟ್‌ಗಳು ಜಾಸ್ತಿಯಾಗುತ್ತವೆ. ಕೂಲಿಯವರ ರೇಟ್ ಜಾಸ್ತಿಯಾಗುತ್ತದೆ, ಸೀಮೆಂಟ್ ರೇಟ್ ಜಾಸ್ತಿಯಾಗುತ್ತದೆ, ಮೇನ್‌ಟೇನೆನ್ಸ್‌ಗೆ ಗ್ರಾಂಟ್ ನೀವು ಹೋದ ವರ್ಷ 205 ಕೋಟಿ ರೂಪಾಯಿಗಳನ್ನು ಇಟ್ಟರೆ, ಈ ವರ್ಷ 179 ಕೋಟಿ ರೂಪಾಯಿಗಳನ್ನು ಇಡುತ್ತೀರಿ. ಏತಕ್ಕೆ ಇದು, ಹಾಗಾದರೆ ನೀವು ಪ್ರಗತಿಪರರಾ? ನೀವು ಅಭಿವೃದ್ಧಿಯನ್ನು ಸಾಧಿಸುವವರಾ ಅಥವಾ ನೀವು ಗ್ರಾಮೀಣ ಪ್ರದೇಶವನ್ನು ಉದ್ಧಾರ ಮಾಡತಕ್ಕಂಥವರು ಎಂದು ನೀವು ಏಕೆ ಶಂಖವನ್ನು ಊದುತ್ತೀರಾ? ಬರೀ ಬೊಗಳೆ ಇರುತ್ತದೆಯೇ ಹೊರತು ಪ್ರಾಕ್ಟಿಕಲ್ ಅಲ್ಲಾ. ನೀವು ಮಾಡತಕ್ಕಂಥಾದ್ದು ನಿಮ್ಮ ಹಣಕಾಸಿನ ಒಂದು ಸ್ಥಿತಿಗತಿಯನ್ನು ನೋಡಿದಾಗ, ನೀವು ಬಿಡುಗಡೆ ಮಾಡುವ ಹಣದ ರೀತಿಯನ್ನು ನೋಡಿದಾಗ ಅದರಲ್ಲಿ ಸಂಬಂಧಗಳು ಇಲ್ಲ. ಆದ್ದರಿಂದ ಈ ಸಂಸ್ಥೆಗಳನ್ನು ಕಡೆಗಣಿಸತಕ್ಕಂಥ ಕೆಲಸ ನಿಮ್ಮಿಂದ ಆಗುತ್ತದೆ. ಇದರಲ್ಲಿಯೂ ಕೂಡ 10 ರಿಂದ 20 ಪರ್ಸೆಂಟ್ ಹಣ ಉಳಿತಾಯ, ಮಾಡಿಕೊಂಡಿದ್ದಾರೆ. ಜಿಲ್ಲಾ ಪಂಚಾಯಿತಿಗೆ ನೀವು ಮೊದಲೇ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಅವೂ ಕೂಡ ಈ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡುವುದಿಲ್ಲ. ಖರ್ಚು ಮಾಡಿದ್ದ ಹಣ ಕೂಡ ಪೂರ್ತಿಯಾಗಿ ಹೋಗಿ ತಲುಪುವುದಿಲ್ಲ. ಈ ಸ್ಥಿತಿಯಲ್ಲಿ ಅಭಿವೃದ್ಧಿ ಹೇಗೆ ಆಗುತ್ತದೆ ಎನ್ನುವುದು ನಮಗೆಲ್ಲಾ ಗೊತ್ತಾಗಬೇಕು. ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ, ಇವತ್ತು ಕರೆಗಳ ಬಗ್ಗೆ, ಒಟ್ಟು ರಾಜ್ಯದಲ್ಲಿ 36,696 ಕರೆಗಳಲ್ಲಿ 33374 ಕೆರೆಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತವೆ. ಬಹಳಷ್ಟು ಸಣ್ಣ ಕೆರೆಗಳು ಅಂತರ್ಜಲವನ್ನು ಜಾಸ್ತಿಮಾಡತಕ್ಕಂಥ ವ್ಯವಸ್ಥೆ, ಕುಡಿಯುವ ನೀರಿವ ವ್ಯವಸ್ಥೆ, ಹಳ್ಳಿಯ ಎಲ್ಲಾ ಅಭಿವೃದ್ಧಿಗೆ ಪೂರಕವಾಗಿರತಕ್ಕಂಥವುಗಳು ಈ ಕೆರೆಗಳಾಗಿವೆ. ಇವುಗಳ ಬಗ್ಗೆ ನೀವು ಬಹಳ ದೊಡ್ಡ ಶಂಖವನ್ನು ಊದಿದಿರಿ. ಬಹಳ ದೊಡ್ಡ ಪ್ರಚಾರವನ್ನು ತೆಗೆದುಕೊಂಡಿದ್ದೀರಿ. ಅದು ಏನೇನೋ ಹೆಸರನ್ನು ಹೇಳಿದಿರಿ. ಕೆರೆಗಳನ್ನು ಉದ್ಧಾರ ಮಾಡುವುದಕ್ಕೋಸ್ಕರವಾಗಿ, ರೈತ ಕಾಯಕ ಕೆರೆ, ಇನ್ನೊಂದು ಏನೋ ಹೇಳಿದರು, ಒಂದು ಪೈಸೆ ಹಣ ಕೂಡ ಬಿಡುಗಡೆಯಾಗಿಲ್ಲ. ಇಂಥವುಗಳಿಗೆಲ್ಲಾ ನಬಾರ್ಡ್‌ದಿಂದ, ಹುಡ್ಕೋದಿಂದ ಸಾಲವನ್ನು ತೆಗೆದುಕೊಳ್ಳುತ್ತೇವೆ, ಏನೇನೋ ಹೊಡೆದಿರಿ ಸಾಕಷ್ಟು ಪ್ರಚಾರ ಬಂತು. ಏನೂ ಮಾಡುವುದಕ್ಕಾಗಲಿಲ್ಲ. ರೈತ ಕಾಯಕ ಕೆರೆ ತಾಲ್ಲೂಕಿಗೆ

ಒಂದು ಇರುವುದನ್ನು ಹೋಬಳಿಗೆ ಒಂದು ಮಾಡುತ್ತೇನೆಂದು ಹೇಳಿದಿರಿ. ಎಲ್ಲಾ ಕೆರೆಗಳನ್ನು ಮಾಡುತ್ತೇವೆಂದು ಹೇಳಿದಿರಿ, ನೀವು ಏನೂ ಮಾಡದೇ ತಾಲ್ಲೂಕಿಗೆ ಒಂದು ಮಾಡಿರುವುದಕ್ಕೂ ಕೂಡ ಹಣ ಬಿಡುಗಡೆಯಾಗಲಿಲ್ಲ. ರೈತ ಕಾಯಕ ಕೆರೆಗೆ ಹಣ ಬಿಡುಗಡೆಯಾಗಲಿಲ್ಲ. 33374 ಕೆರೆಗಳಿಗೆ ಇದಕ್ಕೆ ಅನುದಾನ, ಮಾನ್ಯ ಮುನಿನರಸಿಂಹಯ್ಯನವರೇ, ನಿಮಗೆ ಅವಧಿ ಕೊಟ್ಟಾಗ ಹೇಳಿ ಸರ್.

ಶ್ರೀ ಮುನಿನರಸಿಂಹಯ್ಯ: ಮಾನ್ಯ ಉಪಾಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ರೈತ ಕಾಯಕ ಕೆರೆಯಲ್ಲಿ 20 ಲಕ್ಷ ರೂಪಾಯಿಗಳು ಬಿಡುಗಡೆಯಾಗಿ ಕೆಲಸ ಪೂರ್ತಿಯಾಗಿದೆ. ಎಲ್ಲೂ ಆಗಿಲ್ಲವೆಂದು ಹೇಳಬೇಡಿ, ನಿಮಗೆ ಎಲ್ಲಿ ಆಗಿಲ್ಲವೆಂದು ಮಾಹಿತಿ ಇದೆ, ಅಲ್ಲಿ ಮಾತ್ರ ಹೇಳಿ.

ಶ್ರೀ ಆರಗ ಜ್ಞಾನೇಂದ್ರ: ಹಾಗಾದರೆ ಆಡಳಿತ ಪಕ್ಷದ ಶಾಸಕರಿಗೆ ಮಾತ್ರ ಕೊಟ್ಟಿದ್ದಾರೋ ಏನೋ ನನಗೆ ಗೊತ್ತಿಲ್ಲ.

ಶ್ರೀ ಎನ್.. ಸಂಪಂಗಿ: ಹಾಗಾದರೆ ನೀವು ಮಾಡಿಲ್ಲ, ನಿಮ್ಮ ಕ್ಷೇತ್ರದಲ್ಲಿ ಆಗಿಲ್ಲವೆಂದು ಹೇಳಿ. ಆಗಿರುವ ಕಡೆ ಆಗಿದೆ ಎಂದು ನಾವು ಹೇಳುತ್ತೇವೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಹಾಗಾದರೆ ಈ ಗುಟ್ಟು ಏನು? ನಾನು ಒಂದು ಮಾತು ಹೇಳುತ್ತೇನೆ, ಈ ಗುಟ್ಟು ಹೊರಗೆ ಬರಬೇಕಾಗುತ್ತದೆ.

ಶ್ರೀ ಹೆಚ್.ಎಸ್. ಚಂದ್ರಶೇಖರಪ್ಪ: ಹಾಗಾದರೆ ನೀವು ಹೇಳಿದ್ದು ವೇದವಾಕ್ಯವೇ? ಪ್ರತಿಯೊಂದು ಕಡೆಯೂ ಕೆಲಸವಾಗಿದೆ.

ಶ್ರೀ ಎನ್. ಸಂಪಂಗಿ: ನಮ್ಮ ಕ್ಷೇತ್ರದಲ್ಲಿಯಂತೂ ಆಗಿದೆ, ಹೋಬಳಿಗೊಂದು ಕೆರೆಯನ್ನು ನಾವು ಮಾಡಿರುತ್ತೇವೆ. ನಮ್ಮ ಕ್ಷೇತ್ರದಲ್ಲಿ ಆಗಿರುವ ಕೆಲಸವನ್ನು ಬಂದು ನೋಡಿ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ನಿಮಗೆ ಹಣ ಬಂದಿದೆಯೋ ಇಲ್ಲವೋ ಹೇಳಿ.

ಶ್ರೀ ಎನ್. ಸಂಪಂಗಿ: ನೀವು ಮಾಡಿಲ್ಲವೆಂದು ಹೇಳಿ, ನೀವು ಸರ್ಕಾರದ ಕಾರ್ಯಕ್ರಮಗಳನ್ನು ವಿರೋಧ ಮಾಡುತ್ತಿದ್ದೀರಿ, ನಮ್ಮ ಕ್ಷೇತ್ರದಲ್ಲಿ ಆಗಿಲ್ಲವೆಂದು ನೀವು ಹೇಳಿ. ಆದರೆ ಬೇರೆ ಆಗಿರುವುದನ್ನು ಇಲ್ಲವೆಂದು ಹೇಳಬೇಡಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರ ಬಗ್ಗೆ ನನಗೆ ಗೌರವ ಇದೆ. ನಾನು ಏನು ಹೇಳುತ್ತಿದ್ದೇನೆ ಎಂದರೆ ನನ್ನ ಕ್ಷೇತ್ರದಲ್ಲಿ ರೈತ ಕಾಯಕ ಕೆರೆ ಕೆಲಸ ಮುಗಿದು 4 ತಿಂಗಳಾಗಿದೆ. ಬಿಲ್ ನಿಮ್ಮ ಆಫೀಸಿಗೆ ಬಂದಿದೆ, ನಿಮ್ಮ ಹತ್ತಿರ ಹಣ ಇಲ್ಲ. ಶಿವಮೊಗ್ಗದಲ್ಲಿ ಹಣವನ್ನು ರಿಲೀಸ್ ಮಾಡಲಿಲ್ಲ. ನಾನು ಕೆಲಸ ಮಾಡಿರುತ್ತೇನೆ, ಹಣವನ್ನು ಕ್ಲೈಮ್ ಮಾಡಿದ್ದು ಇದ್ದರೆ ನನ್ನ ಸವಾಲು ಇದೆ, ನಾನು ಬೇಕಾದರೆ ಈ ಸದನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಆದರೆ ಈ ಕೆಲಸವನ್ನು ಮಾಡಿಯೂ ಕೂಡ ನಮಗೆ ಹಣ ಬರದಿದ್ದರೆ ನೀವು ಏನು ಮಾಡುತ್ತೀರಿ ಎನ್ನುವುದನ್ನು ಕೂಡ ಹೇಳಬೇಕು. ಕೆಲಸವನ್ನು ಮಾತ್ರ ಆಡಳಿತ ಪಕ್ಷದವರಿಗೆ ಕೊಟ್ಟು, ವಿರೋಧ ಪಕ್ಷದವರಿಗೆ ಕೊಡಲಿಲ್ಲವೆಂದಾದರೂ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅನೇಕ ವರ್ಷದ ಬೆಲೆಗಳು ಇವತ್ತಿನವರೆಗೂ ಕೂಡ ಪಾಸ್ ಆಗಿರುವುದಿಲ್ಲ.

ಶ್ರೀ ಎಸ್. ಸಂಪಂಗಿ: ಮಾನ್ಯ ಉಪಾಧ್ಯಕ್ಷರೆ, ಕೆಲಸವಾಗಿದೆ, ಪೇಮೆಂಟ್ ಕೂಡ ಆಗಿದೆ, ಜನರು ಖುಷಿಯಾಗಿದ್ದಾರೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಹಾಗಾದರೆ ಈ ಸರ್ಕಾರ ತಾರತಮ್ಯ ಮಾಡಿದೆ. ರೈತ ಕಾಯಕ ಕೆರೆ ಕಾರ್ಯಕ್ರಮವನ್ನು ನಮ್ಮೆಲ್ಲರಿಗೂ ಕೂಡ ಕೊಟ್ಟಿದೆ ಆದರೆ ಆಡಳಿತ ಪಕ್ಷದವರಿಗೆ ಮಾತ್ರ ಹಣ ಬಿಡುಗಡೆ ಮಾಡಿದೆ. ಇದು ನನ್ನ ಆರೋಪ ಇದೆ. ಈ ಸರ್ಕಾರ ಕೇವಲ ಆಡಳಿತ ಪಕ್ಷದವರಿಗೆ ಮಾತ್ರ ಸರ್ಕಾರವೇ ಅಥವಾ ಇಡೀ ರಾಜ್ಯಕ್ಕೆ ಸರ್ಕಾರವೇ?

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಅವರಿಗೂ ಕೂಡ ದುಡ್ಡು ಬಂದಿಲ್ಲ, ಏಕೆ ಸುಮ್ಮನೆ ಹೇಳುತ್ತೀರಿ? ಮಾನ್ಯ ಜ್ಞಾನೇಂದ್ರರವರೇ, ನಿಮ್ಮಂತೆ ಅವರದ್ದೂ ಆಗಿದೆ. ನೀವು ಹೊರಗೆ ಹೋಗಿ ಕೇಳಿ ಅವರು ಹೇಳುತ್ತಾರೆ, ಇಲ್ಲಿ ನಮಗೆ ಹೇಳುವುದಕ್ಕೆ ಹಚ್ಚುತ್ತಾರೆ ಅಷ್ಟೇ.

ಶ್ರೀ ಹೆಚ್.ಎಸ್. ಚಂದ್ರಶೇಖರಪ್ಪ: ನಾವು ಒಳಗೂ ಹೇಳುತ್ತೇವೆ, ಹೊರಗೂ ಹೇಳುತ್ತೇವೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಅವರಿಗೆ ಆ ಶಕ್ತಿ ಮತ್ತು ಧೈರ್ಯವಿಲ್ಲ. ನೀವು ಧೈರ್ಯವನ್ನು ತೆಗೆದುಕೊಳ್ಳಿ.

ಶ್ರೀ ರಾಜೇಂದ್ರ ವರ್ಮಾ: ಮಾನ್ಯ ಉಪಾಧ್ಯಕ್ಷರಿಗೆ ಆ ಮಾತು ಗೊತ್ತಿದೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಇಷ್ಟೊತ್ತಿನವರೆಗೆ ಸರ್ಕಾರದ ವೈಫಲ್ಯತೆಗಳನ್ನು ಎತ್ತಿ ಹೇಳಿರುವುದರಿಂದ ಸರ್ಕಾರದ ನಿರ್ವಾಣವಾಗುತ್ತದೆಂದು ರಕ್ಷಣೆಗೆ ಅವರು ಬರುವುದಾದರೆ, ಸುಮ್ಮನೆ ಹಣ ಬಿಡುಗಡೆಯಾಗಿದೆ ಎಂದು ಅವರು ಹೇಳುವುದಾದರೆ ನನ್ನದೇನೂ ತೊಂದರೆ ಇಲ್ಲ. ಅವರು ಹೇಳಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ರೈತ ಕಾಯಕ ಕೆರೆಯಲ್ಲಿ ಹಣ ಬರಲಿಲ್ಲ, ಇದರ ಅನುದಾನ ಎಷ್ಟು ಇಟ್ಟಿದ್ದಾರೆಂದು ನಾನು ನಿಮಗೆ ಹೇಳುತ್ತೇನೆ. ನೀವೂ ಕೂಡ ನೋಡಿ, ವಿಷಯ ಸಮಿತಿ ವರದಿ, ಪುಟ–8ರಲ್ಲಿ ನೋಡಿ ಹೇಗೆ ಇದೆ. ದಯವಿಟ್ಟು ಓದಿ, ಅನುದಾನ 2001 ನಿಗದಿ ಮಾಡಿದ್ದು 20.40 ಕೋಟಿ ರೂಪಾಯಿಗಳು, ಇದು 33374 ಕೆರೆಗಳಿಗೆ. ಅದಕ್ಕೆ ಬಿಡುಗಡೆ ಮಾಡಿರುವ ಹಣ ಮಾತ್ರ 17.65 ಕೋಟಿ ರೂಪಾಯಿಗಳು ಮಾತ್ರ. 2001–02ರಲ್ಲಿ ನಿಗದಿ ಮಾಡಿರುವ ಹಣ 24.88 ಕೋಟಿ ರೂಪಾಯಿಗಳು, ಬಿಡುಗಡೆ ಮಾಡಿರುವ ಹಣ 17.97 ಕೋಟಿ ರೂಪಾಯಿಗಳು ಮಾತ್ರ. 2002–03ನೇ ಸಾಲಿನಲ್ಲಿ ನಿಗದಿ ಮಾಡಿರುವುದು 24 ಕೋಟಿ ರೂಪಾಯಿಗಳಿಂದ 21 ಕೋಟಿ ರೂಪಾಯಿಗಳಿಗೆ ಕಡಿಮೆಯಾಯಿತು. ಕೇವಲ 21.32 ಕೋಟಿ ರೂಪಾಯಿಗಳು ನಿಗದಿ ಮಾಡಿರುವುದು ಅದರಲ್ಲಿ ಬಿಡುಗಡೆಯಾಗಿರುವುದು ಕೇವಲ 13.67 ಕೋಟಿ ರೂಪಾಯಿಗಳು. ಈ ಸಾರಿ ನೀವು ನಿಗದಿ ಮಾಡಿದ್ದು 21.28 ಕೋಟಿ ರೂಪಾಯಿಗಳು. ಬಿಡುಗಡೆ ಮಾಡಿರುವುದು ಬಹುಶಃ ಜೀರೋ, ಏಕೆಂದರೆ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನೋಡಿದಾಗ, ಇದು ಏನೇನೂ ಸಾಲದು. ಈ ರೀತಿ ಹಣ ನಿಗದಿ ಮಾಡಿ, ಹಣವನ್ನು ಬಿಡುಗಡೆ ಮಾಡುವುದರಿಂದ ಈ ಒಂದು ಪಂಚಾಯತ್ ರಾಜ್ ವ್ಯವಸ್ಥೆಗೆ ಬಹಳ ದೊಡ್ಡ ಧಕ್ಕೆಯನ್ನು ತಂದಂತಾಗುತ್ತದೆ. ಇನ್ನು ಅನೇಕ ವಿಚಾರಗಳು ಮಾತನಾಡುವುದು ಇದೆ, ಮಾನ್ಯ ಉಪಾಧ್ಯಕ್ಷರೆ, ನೀವು ಅನೇಕ ಸಾರಿ ಬೆಲ್‌ನ್ನು ಹೊಡೆದಿರುತ್ತೀರಿ. ನಿಮಗೆ ಶ್ರಮ ಕೊಡುವುದಿಲ್ಲ. ಅನೇಕ ಡಿಮ್ಯಾಂಡ್‌ಗಳ ಮೇಲೆ ಇನ್ನು

ಮಾತನಾಡುವುದು ಇದ್ದರೂ ಕೂಡ ಈ ಸದನದ ಒಂದು ಸಮಯದ ದೃಷ್ಟಿಯಿಂದ ಹಲವಾರು ವಿಚಾರಗಳು ಇದ್ದರೂ ಕೂಡ ಈ ಇಲಾಖೆಗೆ ಇಬ್ಬರೂ ಸಚಿವರು ಇದ್ದಾರೆ. ಒಬ್ಬರು ಅತ್ಯಂತ ಹಿರಿಯರಿದ್ದಾರೆ; ಇನ್ನೊಬ್ಬರು ಸ್ವಲ್ಪ ಯುವಕರಿದ್ದಾರೆ. ಬಹಳ ಉತ್ಸಾಹ ಅವರಿಗೆ, ಬಹಳ ಸ್ಟೇಟ್‌ಮೆಂಟ್‌ಗಳು ಬರುತ್ತವೆ. ಅವರು ಬಂದ ಮೇಲೆ ಒಂದು ಪಂಚಾಯತ್ ರಾಜ್ ಇಲಾಖೆ ಬಹಳಷ್ಟು ಸುಸ್ಥಿತಿಯಲ್ಲಿದೆ ಎಂದು ಹೇಳಿ ಸ್ಟೇಟ್‌ಮೆಂಟ್‌ಗಳು ಬರುತ್ತಿವೆ. ಅವರ ಕೈಯಿಗೆ ದುಡ್ಡು ಬಂದು ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗುವುದಾದರೆ ಸ್ಟೇಟ್‌ಮೆಂಟ್‌ಗಳಿಗೆ ಒಂದು ಶಕ್ತಿ ಇರುತ್ತದೆ. ಇಲ್ಲದಿದ್ದರೆ ಬರೀ ಸ್ಟೇಟ್‌ಮೆಂಟ್‌ಗಳಾಗುತ್ತದೆ. ದಯವಿಟ್ಟು ನಿಮಗೆ ಇರುವ ಜ್ಞಾನ, ನಿಮಗೆ ಇರುವ ಕಳಕಳಿ, ಅವರು ನಮ್ಮ ಜಿಲ್ಲೆಗೆ ಬಂದಿದ್ದರು, ನಾವು ಆಗ ಹೇಳಿದ್ದೆವು, ನೀರನ್ನು ಇಂಗಿಸುವಂಥ ದೃಷ್ಟಿ, ಬರ ಕಾಮಗಾರಿಯ ಬಗ್ಗೆ ಶಾಶ್ವತವಾದಂಥ ಅನೇಕ ವಿಚಾರಗಳು ಅವರ ತಲೆಯ ತುಂಬಾ ಇವೆ, ಅವುಗಳು ಅನುಷ್ಠಾನಕ್ಕೆ ಬರಬೇಕಾಗುತ್ತದೆ. ಅದರಿಂದಾಗಿ ಸಾಕಷ್ಟು ಹಣಕಾಸಿನ ವ್ಯವಸ್ಥೆಯನ್ನು ಈ ಇಲಾಖೆಗೆ ಮಾಡಬೇಕಾಗುತ್ತದೆ. ನಮ್ಮ ಹಿರಿಯರಾಗಿರತಕ್ಕಂಥ ಮಾನ್ಯ ಘೋರ್ಪಡೆ ಸಾಹೇಬರು ಅಮೂಲಾಗ್ರವಾದ ತಿದ್ದುಪಡಿಯನ್ನು ಪಂಚಾಯತ್ ರಾಜ್ ಸಂಸ್ಥೆಗೆ ತರುತ್ತಿದ್ದಾರೆ. ನಾನೂ ಕೂಡ ಆ ಸಮಿತಿಯ ಒಬ್ಬ ಸದಸ್ಯ, ಅವರು ಅನೇಕ ವಿಚಾರಗಳನ್ನು ಹೇಳಿದರು, ನನಗೆ ಬಹಳ ಸಂತೋಷವಾಯಿತು. ಈ ಒಂದು ಸಂಸ್ಥೆಗಳನ್ನು ಬಲಪಡಿಸಬೇಕು, ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಯನ್ನು ಇನ್ನಷ್ಟು ಬಲ ಆಗಬೇಕು. ಜನತಂತ್ರ ವ್ಯವಸ್ಥೆಯಲ್ಲಿ ಜನ ಸಹಭಾಗಿತ್ವ ಆಗಬೇಕು ಎನ್ನುವಂಥ ಅವರ ಕಾಳಜಿ ಏನಿದೆ ಈ ವಯಸ್ಸಿನಲ್ಲಿಯೂ ಕೂಡ ನಾವೆಲ್ಲರೂ ಕೂಡ ಮೆಚ್ಚಿಕೊಳ್ಳುತ್ತೇವೆ. ಆದರೆ ಆ ಕಾಳಜಿ ಆ ಇಲಾಖೆಯ ಮೂಲಕ ಅನುಷ್ಠಾನಗೊಳ್ಳಬೇಕಾಗಿದೆ. ಅದನ್ನು ಬಲ ಮಾಡಬೇಕಾಗಿದೆ. ಅಂತಹ ಒಂದು ಚಿಂತನೆ ಇರತಕ್ಕಂಥ ವ್ಯಕ್ತಿಗಳು ಆ ಇಲಾಖೆಯ ಸಚಿವರಾಗಿದ್ದಾಗ, ಆ ಇಲಾಖೆಗಳಲ್ಲಿ ಸೋರಿಕೆಯಾಗಬಾರದು. ಆ ಇಲಾಖೆ ಬಡವಾಗಬಾರದು, ಆ ಇಲಾಖೆಯ ಕತ್ತನ್ನು ಹಿಚುಕುವ ಕೆಲಸವಾಗಬಾರದು. ಈ ದೃಷ್ಟಿಯಿಂದ ಅತ್ಯಂತ ಸಬಲವಾಗಬೇಕು ಆ ಇಲಾಖೆ ಎನ್ನುವುದು ನಮ್ಮ ಇರಾದೆಯಾಗಿದೆ. ಅದಕ್ಕಾಗಿ ಅನೇಕ ವಿಚಾರಗಳನ್ನು ಹಾಗೂ ಸಂಗತಿಗಳನ್ನು ನನ್ನದೇ ಆದ ರೀತಿನೀತಿಗಳಲ್ಲಿ ಹೇಳಲಿಲ್ಲ, ನಿಮ್ಮದೇ ಆಗಿರತಕ್ಕಂಥ ಪುಸ್ತಕಗಳ ಆಧಾರದ ಮೇಲೆ, ವರದಿಗಳ ಆಧಾರದ ಮೇಲೆ, ನಮ್ಮ ಸಿವಿಜಿ ರಿಪೋರ್ಟ್‌ಗಳ ಆಧಾರದ ಮೇಲೆ ನಾನು ಹೇಳಿದ್ದೇನೆ. ಬಹುಶಃ ನಿಮ್ಮ ಸರ್ಕಾರ ಇದಕ್ಕೆ ಹಣ ಬಿಡುಗಡೆ ಮಾಡುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಅನೇಕ ಬಡವರ ಕಾರ್ಯಕ್ರಮಗಳನ್ನು ನೀವು ನಿಷ್ಪ್ರಯೋಜನೆಗೊಳಿಸಿದ್ದೀರಿ. ಬರುವಂಥ ಚುನಾವಣೆಯಲ್ಲಿ ಆ ಬಡವರು ನಿಮಗೆ ಆಶೀರ್ವಾದ ಮಾಡಿಯಾರು, ಇಲ್ಲಿ ಮನೆಗಳಿಂದ ಹಿಡಿದು ಯಾವ್ಯಾವುದನ್ನು ನೀವು ನಿಷ್ಪ್ರಯೋಜನೆ ಮಾಡಿದ್ದೀರಿ, ಇದಕ್ಕೆ ನೀವು ನಿಮ್ಮ ಶಾಪವನ್ನು ಅನುಭವಿಸುತ್ತೀರಿ. ಇದರ ಬಗ್ಗೆ ನಾನು ಎಷ್ಟೇ ಭಾಷಣವನ್ನು ಮಾಡಿದರೂ ಕೂಡ ನಾಳೆ ನಿಮ್ಮ ಸರ್ಕಾರದಿಂದ ಭಾರಿ ಅನುದಾನ ಬಿಡುಗಡೆಯಾಗುತ್ತದೆಂದು ಭ್ರಮೆ ನನಗೆ ಇಲ್ಲ. ಆದರೂ ಕೂಡ ಸಾರ್ವಜನಿಕರಿಗೆ ಈ ವಿಚಾರಗಳು ಗೊತ್ತಾಗಲಿ ಈ ಸದನದ ಮೂಲಕ ಈ ಸರ್ಕಾರ ಯಾವ ರೀತಿಯಾಗಿ ಕೆಲಸ ಮಾಡುತ್ತದೆ ಎನ್ನುವುದು ಗೊತ್ತಾಗಲಿ ಎನ್ನುವುದನ್ನು ನಾನು ಹೇಳಿದ್ದೇನೆ. ಮಾಧ್ಯಮದವರಾದರೂ ಕೂಡ ಸಾರ್ವಜನಿಕರಿಗೆ ಹೋಗಿ ತಲುಪಿಸಲಿ, ಒಂದೊಂದು ಸಲ ಅವರು ಕೂಡ ಜಿಪುಣರಾಗುತ್ತಾರೆ ಅದು ಸಮಸ್ಯೆಯಾಗಿದೆ. ಜ್ಞಾನೇಂದ್ರರವರೂ ಕೂಡ ಮಾತನಾಡಿದರು

ಎಂದು ಹಾಕಿ ಬಿಡುತ್ತಾರೆ. ಏಕೆಂದರೆ ಇಷ್ಟೊಂದು ಮಾತನಾಡಿದಾಗ ಈ ಫಿಗರ್ಸ್‌ನ್ನು ಜನತೆಗೆ ಕೊಟ್ಟರೆ ಜನ ಈ ಸರ್ಕಾರವನ್ನು ಸರಿ ಮಾಡಬಹುದು. ನೆರವಾಗಬೇಕು ಈ ಮಾಧ್ಯಮಗಳು ಎಂದು ನಾನು ಈ ಸಂದರ್ಭದಲ್ಲಿ ಈ ಸದನದ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನೀವು ಮಾನ್ಯ ಕೋಳಿವಾಡ್‌ರವರ ಕಡೆ ನೋಡಲಿಲ್ಲ. ಅವರು ಎಲ್ಲದಕ್ಕೂ ಹೌದು ಹೌದು ಎಂದು ಅನ್ನುತ್ತಿದ್ದರು. ಆ ಕಡೆ ನೀವು ಲಕ್ಷ್ಯವನ್ನು ಹಾಕಲಿಲ್ಲ, ನಾನು ಲಕ್ಷ್ಯವನ್ನು ಹಾಕಿದ್ದೆ. ಅವರು ಪ್ರಾಮಾಣಿಕವಾಗಿ ಹೊಗಳುತ್ತಿದ್ದಾರೆಂದು ಹೇಳುತ್ತಿದ್ದರು.

ಶ್ರೀ ಸಿ.ಆರ್. ಸಗೀರ್ ಅಹಮದ್: ಮಾನ್ಯ ಉಪಾಧ್ಯಕ್ಷರೆ, ಜನ ನಮಗೆ ಶಾಪ ಹಾಕುತ್ತಾರೆಂದು ಹೇಳಿದರು, ನಮ್ಮ ಉಪಾಧ್ಯಕ್ಷರು ಎರಡು ಗಂಟೆಯಿಂದ ಎರಡೂವರೆ ಗಂಟೆಗಳವರೆಗೆ ಮಾತನಾಡಲು ಜ್ಞಾನೇಂದ್ರರವರಿಗೆ ಸಮಯ ಒದಗಿಸಿದ್ದಾರೆ. ಅವರಿಗೆ ಮಾತ್ರ ಯಾರೂ ಶಾಪ ಹಾಕುವುದಿಲ್ಲ, ಅವರೂ ಹಾಕುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ನೀವು ಆಚರಣೆಗೆ ತರಲಿ ಎಂದು ಜ್ಞಾನೇಂದ್ರರವರು ಪ್ರಾಮಾಣಿಕವಾಗಿ ಅಂಕಿ-ಅಂಶಗಳನ್ನು ಕೊಟ್ಟಿರುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಈ ಸಂಸ್ಥೆಯನ್ನು ಇನ್ನೂ ಬಲಗೊಳಿಸಲಿ, ಇರುವ ಸ್ವಲ್ಪ ದಿವಸದಲ್ಲಿ ಆಡಳಿತವನ್ನು ಇನ್ನಾದರೂ ಕೂಡ ಕಾಳಜಿಯಿಂದ ಕೆಲಸವನ್ನು ಮಾಡಿ ಎಂದು ಹೇಳಿ ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಂಡು ನನಗೆ ಮಾತನಾಡಲು ಈ ಸಂದರ್ಭದಲ್ಲಿ ಸಾಕಷ್ಟು ಅವಕಾಶ ಕೊಟ್ಟಿದ್ದೀರಿ, ನನ್ನ ಅನೇಕ ವಿಚಾರಗಳನ್ನು ಹೊರಗೆಡುವುದಕ್ಕೆ ತಾವು ನೆರವು ನೀಡಿದ್ದೀರಿ, ಇದಕ್ಕೆ ತಮಗೆ ಅಭಿನಂದಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತೇನೆ.

(ಸದನವು ಸಾಯಂಕಾಲ 6 ಗಂಟೆ 5 ನಿಮಿಷಕ್ಕೆ ಮುಂದೂಡಲ್ಪಟ್ಟು ದಿನಾಂಕ: 24-7-03 ರಂದು ಬೆಳಿಗ್ಗೆ: 11 ಗಂಟೆಗೆ ಸೇರಲು ನಿಶ್ಚಯಿಸಿತು)

5) ಅನುಬಂಧ - I

ಹೈದರಾಬಾದ್ - ಕರ್ನಾಟಕ ಪ್ರದೇಶಾಭಿವೃದ್ಧಿ ವ್ಯಾಪ್ತಿಯಲ್ಲಿ ಬರುವ ಪ್ರೌಢಶಾಲೆಗಳಲ್ಲಿ ಶಿಕ್ಷಕರ ನೇಮಕಾತಿ

3494(4092) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೈದರಾಬಾದ್-ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಒಟ್ಟು ಜಿಲ್ಲೆಗಳಲ್ಲಿ ಎಷ್ಟು ಸರ್ಕಾರಿ ಪ್ರೌಢಶಾಲೆಗಳು ಬರುತ್ತವೆ?

ಆ) ಇತ್ತೀಚೆಗೆ ಮಂಜೂರಾದ ಪ್ರೌಢಶಾಲೆಗಳಲ್ಲಿರಬಹುದಾದ ಒಟ್ಟು ಶಿಕ್ಷಕರ ಸಂಖ್ಯೆ ಎಷ್ಟು; ಹಾಗೂ ಮಂಜೂರಾದ ಪ್ರೌಢಶಾಲೆಗಳಲ್ಲಿ ಖಾಲಿ ಶಿಕ್ಷಕರ ಹುದ್ದೆಗಳನ್ನು ತುಂಬಲು ಸರ್ಕಾರದ ಮಟ್ಟದಲ್ಲಿ ತೆಗೆದುಕೊಂಡ ಕ್ರಮಗಳೇನು;

---

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.